# ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 8 ಸಂಚಿಕೆ 49

ಡಿಸೆಂಬರ್ 7, 2014

ಪುಟ 16 ರೂ. 10/-

Blog :janashakthi.wordpress.com e-mail : js_weekly@yahoo.com






## ಮುಖವಾಡ ಕಳಚಿಟ್ಟ ಸರ್ಕಾರ




### ಡಿಸೆಂಬರ್ 5, ರಾಜ್ಯವ್ಯಾಪಿ ಚಳುವಳಿ

## ಕಾರ್ಮಿಕ ದ್ರೋಹಿ ಕಾನೂನು ತಿದ್ದುಪಡಿಗಳ ವಿರುದ್ಧ ಆಂದೋಲನ



## ಗ್ರಾಮ ಪಂಚಾಯ್ತಿ ನೌಕರರ ಬದುಕು ಬದಲಾಗುವುದು ಬೇಡವೇ ?




ಬೆಂಗಳೂರು ದಕ್ಷಿಣ ಜಿಲ್ಲಾ ಸಿಪಿಐ(ಎಂ) ಸಮ್ಮೇಳನ

## ಬೆಂಗಳೂರು: ಬೆಳೆದ ಮಹಾನಗರ ಶ್ರಮಜೀವಿಗಳ ಶೋಷಣೆ ವಿಸ್ತಾರ




## ಮಾಧ್ಯಮಗಳ ಬಾಯಿಗೆ ಬಡಿಯುವ ಬ್ಲಾಕ್‌ಮೇಲ್

# ಆತ್ಮನ ಮೊರೆ ಹೋಗಿ _ _ _ _

ಮಾನವನ ಆದಿಕಾಲದಲ್ಲಿ ನಿದ್ದೆಯಲ್ಲಿ ಬೀಳುತ್ತಿದ್ದ ಕನಸುಗಳನ್ನು ಕಂಡವರಿಗೆ ಅದನ್ನು ಅರ್ಥ ಮಾಡಿಕೊಳ್ಳಲು ಕಷ್ಟವಾದದ್ದು ಸಹಜವೇ. ಇಂದೂ ಕೂಡ ಸಾಮಾನ್ಯ ಜನತೆಯಲ್ಲಿ ಕನಸುಗಳ ಬಗ್ಗೆ ಗೊಂದಲವಿರುವುದನ್ನು ದಿನ ನಿತ್ಯ ನೋಡುತ್ತೇವೆ. ಆ ಕಾರಣಕ್ಕಾಗಿ ಕನಸುಗಳಲ್ಲಿ ಕಾಣುವ ಸಂಗತಿಗಳನ್ನು ಅರ್ಥೈಸುವದಕ್ಕಾಗಿ, ಅದ–ರಿಂದ ತಮ್ಮ ಜೀವನದ ಮೇಲೆ ಆಗುತ್ತವೆ ಎಂದು ಬಿಂಬಿಸಲ್ಪಟ್ಟ ಪರಿಣಾಮಗಳ ಬಗ್ಗೆ ಆತಂಕಗೊಂಡು ಭವಿಷ್ಯ ಹೇಳುವವರ ಬಳಿ ಹೋಗುವುದನ್ನು ಕಾಣುತ್ತೇವೆ. ಮನಸ್ಸಿನ ಕೆಲಸದ ವಿಧಾನಗಳನ್ನು ಅರ್ಥಮಾಡಿಕೊಳ್ಳಲು ಅನುವಾಗುವ ಮನಶ್ಶಾಸ್ತ್ರದ ಬೆಳವಣಿಗೆ ತೀರಾ ಇತ್ತೀಚಿನದು. ಆದ್ದ–ರಿಂದ ಕನಸುಗಳನ್ನು ಕುರಿತು ಪ್ರಾಚೀನ ಕಾಲದ ಜನಮನದಲ್ಲಿ ಹಲವು ರೀತಿಯ ನಂಬಿಕೆ ಮತ್ತು ಆತಂಕಗಳು ಹುಟ್ಟಿದ್ದು ಸಹಜವೇ ಆಗಿತ್ತು. ಈ ಆತಂಕಗಳು, ನಂಬಿಕೆಗಳನ್ನು ಬಳಸಿಕೊಂಡು ಆತ್ಮನ ಬಗ್ಗೆ ತತ್ವಗಳನ್ನು ಕಟ್ಟಲು, ಅದೊಂದು ಬಹಳ ಉನ್ನತ ತತ್ವವೆಂದು ನಿರೂಪಿಸಲು ಸಾಧ್ಯವಾಯಿತು. ಆತ್ಮನ ಬಗ್ಗೆ ಏನೆಲ್ಲಾ ವಿವರಣೆ ನೀಡಲಾಗಿದೆ ನೋಡೋಣ.

ಬೃಹದಾರಣ್ಯಕೋಪನಿಷತ್ತಿನಲ್ಲಿ ಯಾಜ್ಞವಲ್ಕ್ಯರು ಕನಸಿಗೂ ಆತ್ಮ ಕಲ್ಪನೆಗೂ ಇರುವ ಸಂಬಂಧವನ್ನು ಬಹಳ ಸ್ಪಷ್ಟವಾಗಿಯೇ ಹೇಳುತ್ತಾರೆ. ಕನಸಿನ ಲೋಕವನ್ನು ಉಪಯೋಗಿಸಿಕೊಂಡು ಅವರು ಮತ್ತೊಂದು ಲೋಕವನ್ನೇ ಸೃಷ್ಟಿಸುತ್ತಾರೆ. ಅವರ ಪ್ರಕಾರ 'ಒಬ್ಬ ವ್ಯಕ್ತಿ ಕೇವಲ ಎರಡು ಸ್ಥಿತಿಗಳಲ್ಲಿ ಇರಲು ಶಕ್ಯ. ಒಂದು, ಈ ಲೋಕದಲ್ಲಿ ಇರುವ ಸ್ಥಿತಿ, ಎರಡು, ಪರಲೋಕದಲ್ಲಿ ಇರುವ ಸ್ಥಿತಿ. ಇವೆರಡರ ನಡುವಣ ಮೂರನೆಯ ಸ್ಥಿತಿ ಮತ್ತೊಂದು ಇದೆ. ಅದೇ ನಿದ್ರಾವಸ್ಥೆ. ಈ ಮಧ್ಯಂತರ ಸ್ಥಿತಿಯಲ್ಲಿ ಇರುವಾಗ ಎರಡೂ ಸ್ಥಿತಿಗಳನ್ನೂ (ಈ ಲೋಕದ ಸ್ಥಿತಿಯನ್ನೂ ಹಾಗೂ ಪರಲೋಕದ ಸ್ಥಿತಿಯನ್ನೂ ಆತ ಕಾಣುತ್ತಾನೆ. )

**ಕತಮ ಆತ್ಮೇತಿ (ಆತ್ಮನೆಂದರೆ ಯಾವನು?)**

ವಿ ಜ್ಞಾ ನ' ವ' ು ಂ ಯ' ು ನ ಾ ದ' ಹೃದಯದೊಳಗಿರುವ ಅಂತರ್ಜ್ಯೋತಿಯಾದ ಪುರುಷ.

ಸನ್ನುಭೌಲೋಕಾವನುಸಂಚರತಿ (ಅವನು ಎರಡೂ ಲೋಕಗಳಲ್ಲಿ ಸಂಚರಿಸುತ್ತಿರುತ್ತಾನೆ.)

ಸ ಹಿ ಸ್ವಪ್ನೋ ಭೂತ್ವೇಮಂ ಲೋಕಮತಿಕ್ರಾಮತಿ ಮೃತ್ಯೋ ರೂಪಾಣಿ.

(ಅವನೇ ಸ್ವಪ್ನವಾಗಿ ಈ ಲೋಕವನ್ನೂ, ಮೃತ್ಯುವಿನ ಲೋಕವನ್ನೂ ಅತಿಕ್ರಮಿಸುತ್ತಾನೆ.)

ಹೀಗೆ ಸ್ವಪ್ನದಲ್ಲಿ ಕಾಣುವ ಸಂಗತಿಗಳನ್ನು ಆತ್ಮನ ಹಾಗೂ ಪರಲೋಕದ ಸೃಷ್ಟಿಗೆ ಉಪಯೋಗಿಸಿಕೊಳ್ಳುತ್ತಾರೆ.

ಆ ಸ್ವಪ್ನಲೋಕದಲ್ಲಿ


"ನ ತತ್ರ ರಥಾ ನ ರಥಯೋಗಾ ನ ಪಂಥಾನೋ ಭವಂತಿ, ಅಥ ರಥಯೋಗಾನ್ ಪಥಃ ನ ತತ್ರಾನಂದಾ ಮುದಃ ಪ್ರಮುದೋ ಭವಂತಿ, ಆಥಾನಂದಾನ್ ಮುದಃ ಪ್ರಮುದಃ ಸೃಜತೇ; ಸ ಹಿ ಕರ್ತಾ 4–3–10 ಬೃಹದಾರಣ್ಯಕೋಪನಿಷತ್

ಅಲ್ಲಿ ರಥಗಳಿರುವುದಿಲ್ಲ ರಥ–ಕ್ಕೆ ಕಟ್ಟುವ ಅಶ್ವಗಳಿರುವುದಿಲ್ಲ. ರಥವು ಚಲಿಸುವ ಮಾರ್ಗವಿರುವುದಿಲ್ಲ; ಆದರೂ ರಥಗಳನ್ನೂ ಅಶ್ವಗಳನ್ನೂ ಹಾದಿಗಳನ್ನೂ ಸೃಜಿಸುತ್ತಾನೆ. ಅಲ್ಲಿ ಆನಂದಗಳು, ಮೋದಗಳು, ಪ್ರಮೋದಗಳು ಇರುವುದಿಲ್ಲ. ಆದರೂ ಆಮೋದ ಪ್ರಮೋದಗಳನ್ನು ಸೃಜಿಸುತ್ತಾನೆ. ಅವನೇ ಸ್ವತಃ ಸೃಷ್ಟಿಕರ್ತನೇ ಅಲ್ಲವೇ "ಕನಸುಗಳಲ್ಲಿ ಯಾವ ವಸ್ತುವೂ ಇಲ್ಲದೆಯೇ ಎಲ್ಲವನ್ನೂ ಕಾಣುವ, ಅನುಭವಿಸುವ ಕ್ರಿಯೆ ಮನುಷ್ಯನಿಗೆ ಸೋಜಿಗವನ್ನುಂಟು ಮಾಡುವಂತಹುದೇ. ಯಾಜ್ಞವಲ್ಕ್ಯ ಋಷಿ ಮತ್ತಿತರ ಉಪನಿಷತ್ತುಗಳ ನಿಪುಣರು ಅದನ್ನೇ ಬಳಸಿಕೊಂಡರು. ಸ್ವತಃ ಸೃಷ್ಟಿಯನ್ನು ಮಾಡಿಕೊಳ್ಳಬಹುದಾದ 'ಆ ಅದು' ಸೃಷ್ಟಿಕರ್ತನಿಗೆ ಸಮನಾದುದೇ ಅಲ್ಲವೇ? ಆದ್ದ–ರಿಂದ ಅದು ದೇಹದಿಂದ ಭಿನ್ನವಾದ, ಮನುಷ್ಯನ ಮಿತಿಗಳನ್ನು ಮೀರಿದ ವಿಶೇಷ ಶಕ್ತಿಯುಳ್ಳದ್ದು ಎಂದು ವಾಖ್ಯಾನ ಮಾಡುತ್ತಾರೆ. ಅದಕ್ಕೆ ಅತ್ಮನೆಂಬ ಹೆಸರನ್ನು ಕೊಟ್ಟರು.

ಬುಡುಕಟ್ಟು ಜನರ ಮುಗ್ಧ, ಪಿತೃಗಳ / ಹಿರೇರ ಹಬ್ಬದ ಕಲ್ಪನೆಗೂ ಈ ಆತ್ಮನ ಕಲ್ಪನೆಗೂ ಎಂತಹ ಅಗಾಧ ವ್ಯತ್ಯಾಸವಿದೆ ನೋಡಿ. ಈ ಪರಿಕಲ್ಪನೆಯನ್ನು ಸೃಜಿಸಿದ ಮೇಲೆ ಅದನ್ನು ಮತ್ತಷ್ಟು ನಿಗೂಢವಾಗಿಸಿ ಬಹಳ ಮಹತ್ತಾದುದೇನೋ ಅದರಲ್ಲಿದೆ ಎಂದು ಸಾಮಾನ್ಯ ಜನರಿಗೆ ಬಿಂಬಿಸಲು ಪ್ರಯತ್ನ ಪಟ್ಟಿದ್ದಾ–ರೆ. ಬಹಳ ಪ್ರಯತ್ನ ಪಟ್ಟಿದ್ದಾರೆ.

ಈ ಆತ್ಮನು ಎಲ್ಲಾ ಭೂತಗಳಲ್ಲಿಯೂ ಇರುತ್ತಾನೆ


ಯಃ ಸರ್ವೇಷು ಭೂತೇಷು ತಿಷನ್ ಸರ್ವೇಭ್ಯೋ ಭೋತೇಭ್ಯೋಂತರಃ ಯಂ ಸರ್ವಾಣಿ ಭೂತಾನಿ ನ ವಿದುಃ ಯಸ್ಯ ಸರ್ವಾಣಿ ಭೂತಾನಿ ಶರೀರಂ, ಯಂ ಸರ್ವಾಣಿ ಭೂತ್ಯಾನಂತರೋ ಯಮಯತಿ; ಏಷ ಆತ್ಮಾ ಅಂತರ್ಯಾಮ್ಯಮೃತಃ 3–7–15




ಯಾವನು ಎಲ್ಲಾ ಭೂತಗಳಲ್ಲಿಯೂ ಇರುವವನಾಗಿ ಎಲ್ಲ ಭೂತಗಳಿಂತಲೂ ಒಳಗೆ ಇರುವವನೋ ಯಾವನನ್ನು ಎಲ್ಲ ಭೂತಗಳೂ ಅರಿಯಲು ಸಾಧ್ಯವಿಲ್ಲವೋ, ಯಾವನಿಗೆ ಎಲ್ಲಾ ಭೂತಗಳು ಕೂಡ ಶರೀರವೋ, ಯಾವನು ಭೂತಗಳನ್ನು ಒಳಗಿದ್ದು ಆಳುತ್ತಿರುವನೋ ಅವನೇ ನಿನ್ನ ಅಂತರ್ಯಾಮಿಯಾದ ಆತ್ಮನು.

ಇಂತಹ ಆತ್ಮನನ್ನು ಏಕೆ ಅರಿಯಲಾಗುವುದಿಲ್ಲವೆಂದರೆ

"ಆತ್ಮನು ಅದಲ್ಲ ಇದೂ ಅಲ್ಲ. (ನೇತಿ ನೇತಿ–ನ ಇತಿ), ಅದನ್ನು ಹಿಡಿಯಲು ಸಾಧ್ಯವಿಲ್ಲ. ಏಕೆಂದರೆ ಅದು ಹಿಡಿಯಲ್ಪಟ್ಟಿರುವುದಿಲ್ಲ, ಅದನ್ನು ನಾಶ ಮಾಡಲು ಸಾಧ್ಯವಿಲ್ಲ, ಏಕೆ–ಂದರೆ ಅದು ಎಂದೂ ನಾಶವಾಗಿಲ್ಲ. ಅದು ಸಂಬಂಧ ಹೊಂದಿರುವಂತಹದ್ದಲ್ಲ, ಏಕೆಂದರೆ ಅದು ಯಾವುದರೊಂದಿಗೂ ಸಂಬಂಧ ಪಡೆದಿಲ್ಲ. ಅದು ಮಿತಿ ಹಾಗೂ ಬಂಧನಗಳಿಲ್ಲದ್ದು. ಅದ–ಕ್ಕೆ ಸ್ಪಂದನವಿಲ್ಲ. ಅದು ಗಾಯಗೊಳ್ಳದ್ದು. "ಹೀಗೆ ಆತ್ಮನೆಂಬ ಈ ವಸ್ತುವಲ್ಲದ ಯಾವುದೋ ಒಂದು ಕೇವಲ ಮನುಷ್ಯರ ದೇಹದೊಳಗೆ ಮಾತ್ರವಲ್ಲ ಎಲ್ಲಾ ಭೂತಗಳ (ಜೀವಿಗಳ) ಒಳಗೂ ಇರುವಂತಹದು ಎಂದು ಕಲ್ಪಿಸಿದರು. ಮನುಷ್ಯ ಸ್ವಪ್ನ ಲೋಕದಿಂದ ಆರಂಭವಾಗಿ ಸ್ವಪ್ನದ ಸಾಧ್ಯತೆಯೇ ಇಲ್ಲದ ಪ್ರಾಣಿ, ಪಕ್ಷಿಗಳಿಗೂ, ಕ್ರಿಮಿ ಕೀಟ, ಮರ ಗಿಡಗಳಿಗೂ ಆತ್ಮ ವ್ಯಾಪಿಸಿಕೊಂಡು ಬಿಟ್ಟಿತು. ಸರ್ವಾಂತರ್ಯಾಮಿಯಾಗಿ ಬಿಟ್ಟಿತು. ಮನುಷ್ಯನನ್ನೇ ಮೀರಿದ ಅವನನ್ನು ನಿಯಂತ್ರಿಸುವ ಶಕ್ತಿಯನ್ನು ಅವನ ಸ್ವಪ್ನಗಳ ಲೋಕದಿಂದಲೇ ಸೃಷ್ಟಿಸಲಾಯಿತು. ಆತ್ಮನು ಹೇಗೆ ಕನಸುಗಳಲ್ಲಿ, ಅಲ್ಲಿ ಇಲ್ಲದ ವಸ್ತುಗಳನ್ನು ಸೃಷ್ಟಿಸಿಕೊಳ್ಳುವ ಸಾಮರ್ಥ್ಯ ಪಡೆದಿದ್ದಾನೋ ಅದರಂತೆಯೇ ಈ ನಿಜ ಲೋಕವೂ ಆತ್ಮನ ಮಿಥ್ಯಾ ಸೃಷ್ಟಿ ಎಂದು ಭಾವಿಸಿ ವಿವರಿಸಿದರು. ಇದು ಮುಂದೆ ಈ ಅಂಕಣದಲ್ಲಿ ವಿವರಿಸಲಾಗುವಂತೆ ಬ್ರಹ್ಮನ್ ಎಂಬ ವಸ್ತುವಲ್ಲದ ಮತ್ತೊಂದರ ಸೃಷ್ಟಿಗೆ ಕಾರಣವಾಯಿತು. ಬ್ರಹ್ಮ ಸತ್ಯ ಜಗನ್ಮಿಥ್ಯಾ–ಬ್ರಹ್ಮ ಮಾತ್ರ ಸತ್ಯ ಜಗತ್ತೆಲ್ಲಾ ಮಿಥ್ಯ ಎಂಬ ತತ್ವದ ಸೃಷ್ಟಿಗೆ ಕಾರಣವಾಯಿತು. ಅಂದಿನಿಂದ ಇಂದಿನವರೆಗೆ ಭಾರತದಲ್ಲಿ ಪ್ರಭಾವ ಬೀರುತ್ತಿರುವ ಜಗತ್ತು, ಸಂಸಾರ 'ಎಲ್ಲಾ ಮಾಯವೋ' ಎಂಬ ವಾದಕ್ಕೆ, ಮಿಥ್ಯಾ ಪ್ರಜ್ಞೆಗೆ ಕಾರಣವಾಯಿತು.




ಈ ಅತ್ಮನ ಕಲ್ಪನೆಯನ್ನು ಸಾಮಾನ್ಯ ಜನ ಪ್ರಶ್ನೆ ಮಾಡದಿರಲು ಮತ್ತು ಅದು ಬಹಳ ಮಹತ್ತಾದುದೆಂಬಂತೆ ಬಿಂಬಿಸಲು, ಅದನ್ನು ಅರ್ಥ ಮಾಡಿಕೊಳ್ಳಲಾಗುವುದಿಲ್ಲ, ಅದು ಅದಲ್ಲ, ಇದಲ್ಲ ಎಂಬ ನೇತಿ ನೇತಿ ಕಲ್ಪನೆಯನ್ನು ಸೃಷ್ಟಿಸಲಾಯಿತು. ಈ ಮೇಲಿನ ಈ ಶ್ಲೋಕವನ್ನು ನೋಡಿ. ಅದು ಏಕೆ ಹಿಡಿಯಲಾಗುವುದಿಲ್ಲ, ನಾಶ ಮಾಡಲಾಗುವುದಿಲ್ಲ ಅಥವಾ ಸಂಬಂಧಿಸಿಲ್ಲ ಎಂಬುದನ್ನು ಹುಲು ಮಾನವರು ಅರ್ಥಮಾಡಿಕೊಳ್ಳಲು ಸಾಧ್ಯವೇ? ಇದನ್ನು ಅರ್ಥ ಮಾಡಿಕೊಂಡವರು ಬಹು ಶ್ರೇಷ್ಠರು ಅಥವಾ ಅದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿರುವವರು ಶ್ರೇಷ್ಠರು ಮಾತ್ರ. ಸಾಮಾನ್ಯರಿಗೆ ಇದನ್ನು ಅರ್ಥ ಮಾಡಿಕೊಳ್ಳಲಾಗುವುದಿಲ್ಲ ಎಂದು ಬಿಂಬಿಸಲು ಮಾಡಿದ ಯಶಸ್ವೀ ಪ್ರಯತ್ನ ಎಂದು ಮುಂದಿನ ಇತಿಹಾಸ ತೋರಿಸುತ್ತದೆ.

**ಆತ್ಮನ ಮೋಕ್ಷಯಾನ**

ಆತ್ಮನನ್ನು ಮತ್ತು ಈ ಲೋಕವನ್ನು ಬಿಟ್ಟು ಬೇರೆ ಲೋಕವನ್ನು ಕಲ್ಪಿಸಿದ ಮೇಲೆ ನಾಶವಿಲ್ಲದ ಈ ಆತ್ಮ ದೇಹ ನಾಶವಾದ ಮೇಲೆ ಈ ಲೋಕಗಳಿಗೆ ಆತ್ಮ ಹೇಗೆ ಪ್ರವೇಶಿಸುತ್ತಾನೆ ಎಂಬ ಬಗ್ಗೆ ವಿವರಿಸಬೇಕಾಯಿತು. ರಾಮಕೃಷ್ಣಾಶ್ರಮದ ಮಾಧವಾನಂದರು ವಿವರಿಸುವಂತೆ ಉಪನಿಷತ್ತುಗಳು ಹೀಗೆ ಸಾರಿವೆ.

"ಈ ವಿಶ್ವದಲ್ಲಿ ಅನೇಕ ಲೋಕಗಳಿವೆ. ಇವುಗಳಲ್ಲಿ ಸಗುಣ ಬ್ರಹ್ಮನ ಲೋಕವೇ (ಬ್ರಹ್ಮಲೋಕವೇ) ಅತ್ಯುನ್ನತವಾದುದು. ಮರಣಾನಂತರ ಮಾನವನು ತನ್ನ ಯೋಗ್ಯತೆಗೆ (ಎಂದರೆ ಕರ್ಮಕ್ಕೆ) ಅನುಸಾರವಾಗಿ ಈ ವಿವಿಧ ಲೋಕಗಳಿಗೆ ಮಾಡುವ ಪ್ರಯಾಣವನ್ನು ಉಪನಿಷತ್ತುಗಳಲ್ಲಿ (ಛಾಂದೋಗ್ಯ ಉ, ಬೃಹದಾರಣ್ಯಕ ಉ, ಕೌಷೀತಕಿ ಉ.) ವಿವರಿಸಲಾಗಿದೆ. ವಿವಿಧ ಅತಿ ವಾಹಕರು ಜೀವಾತ್ಮನನ್ನು ಕರೆದೊಯ್ಯುವ ಮಾರ್ಗಗಳು ಎರಡು: ಒಂದನ್ನು ದೇವಯಾನ ಮತ್ತೊಂದನ್ನು ಪಿತೃಯಾಣ ಎಂದು ಕರೆಯುತ್ತಾರೆ. ಉಪಾಸನಾ ನಿಷ್ಠರೂ, ಸತ್ಯನಿಷ್ಠರೂ ಆಗಿ ಪರಿಶುದ್ಧ ಜೀವನವನ್ನು ನಡೆಸಿದವರು ಮೊದಲನೆಯ ಮಾರ್ಗದಿಂದ ಹೋಗುತ್ತಾರೆ. ಆನಂದಮಯವಾದ ಬ್ರಹ್ಮಲೋಕವನ್ನು ಸೇರಿ ತಮ್ಮ ಉಪಾಸನೆಯನ್ನು ಮುಂದುವರೆಸಿ ಸಂಸಿದ್ಧರಾಗಿ ಕಟ್ಟಕಡೆಯಲ್ಲಿ ಎಲ್ಲ ಲೋಕಗಳನ್ನೂ ಮೀರಿ ನಿರ್ಗುಣ ಪರ ಬ್ರಹ್ಮದಲ್ಲಿ ಒಂದಾಗುತ್ತಾರೆ. ಇದಕ್ಕೆ ಕ್ರಮ ಮುಕ್ತಿ ಎಂದು ಹೆಸರು. ಆದರೆ ಯಾರು ಕೇವಲ ಯಾಂತ್ರಿಕವಾಗಿ ಪುಣ್ಯಕರ್ಮಗಳನ್ನು ಎಸಗುವರೋ ಅವರು ಪಿತೃಯಾನದ ಮಾರ್ಗವಾಗಿ ಹೋಗುತ್ತಾರೆ. ಇವರು ಚಂದ್ರಲೋಕವನ್ನು ಸೇರಿ ಅಲ್ಲಿ ವಾಸಿಸುತ್ತಾ ತಮ್ಮ ಪುಣ್ಯಕರ್ಮಗಳ ಫಲವನ್ನು ಭೋಗಿಸುತ್ತಾ ಅದು ತೀರಿದ ನಂತರ ಮನುಷ್ಯರಾಗಿ ಹುಟ್ಟಲು ಈ ಲೋಕಕ್ಕೆ ಹಿಂತಿರುಗುತ್ತಾ–ರೆ. ಯಾರ ಕರ್ಮಾಶಯವು ಎಂದರೆ ಶೇಷ ಕರ್ಮವು ಪುಣ್ಯರೂಪದಲ್ಲಿರುವುದೋ ಅವರು ಉತ್ತಮ ವಂಶಗಳಲ್ಲಿ ಹುಟ್ಟುವರು. ತದ್ವಿರುದ್ಧವಾಗಿ ಯಾರ ಶೇಷ ಕರ್ಮವು ಪಾಪರೂಪವಾಗಿರುವುದೋ ಅವರು ಅದನ್ನು ಸವೆಸಲು ಅಧಮ ವಂಶಗಳಲ್ಲಿಯೋ ಅಥವಾ ಇನ್ನೂ ಕೀಳಾದ ತಿರ್ಯಗ್ಯೋನಿಗಳಲ್ಲಿ (ಕೀಳು ಪ್ರಾಣಿ ಇತ್ಯಾದಿಗಳಾಗಿ) ಹುಟ್ಟುವರು."

ಈ ವಿವರಣೆ ಬಹಳ ಸ್ಪಷ್ಟವಾಗಿ ಆತ್ಮ, ಮೋಕ್ಷ ಮತ್ತು ಪರಲೋಕ, ಪರಬ್ರಹ್ಮ ಮೊದಲಾದ ಪರಿಕಲ್ಪನೆಗಳ ಸೃಷ್ಟಿಯ ಬೇರಿಗೆ ಕೈ ಹಾಕುತ್ತದೆ. ಉಪಾಸನಾ ನಿಷ್ಠರಿಗೆ ಆನಂದಮಯವಾದ ಬ್ರಹ್ಮಲೋಕ, ಪುಣ್ಯಕರ್ಮಗಳನ್ನೇ ಮಾಡಿದರೂ ಉಪಾಸನಾ ನಿಷ್ಠೆಯಿಲ್ಲದೆ ಕೇವಲ ಯಾಂತ್ರಿಕವಾಗಿ ಮಾಡಿದರೆ ಕೂಡ ಅವರು ಬ್ರಹ್ಮದಲ್ಲಿ ಒಂದಾಗುವುದಿಲ್ಲ (ಮೋಕ್ಷವನ್ನು ಪಡೆಯುವುದಿಲ್ಲ.) ಈ ಲೋಕಕ್ಕೆ ಹಿಂದಿರುಗುತ್ತಾರೆ. ಉತ್ತಮ ವಂಶದಲ್ಲಿ ಜನಿಸುವುದು ಅಥವಾ ಕೀಳು ವಂಶದಲ್ಲಿ ಜನಿಸುವುದು ಅವರ ಪುಣ್ಯ ಅಥವಾ ಪಾಪ ಕರ್ಮಗಳನ್ನು ಅವಲಂಬಿಸಿದೆ. ಮನುಷ್ಯರಾಗಿ ಮಾತ್ರವಲ್ಲ ಪ್ರಾಣಿಗಳಾಗಿ ಕೂಡ ಹುಟ್ಟಬಹುದು. ಇಲ್ಲಿದೆ ನೋಡಿ ಈ ಆತ್ಮ, ಬ್ರಹ್ಮನ್, ಪರಲೋಕ, ಬ್ರಹ್ಮಲೋಕ, ಮೋಕ್ಷ ಮೊದಲಾದ ಕಲ್ಪನೆಗಳ ಒಳ ಒಳ ಅರ್ಥ. ಎಲ್ಲದರಲ್ಲೂ ಇರುವ, ಎಲ್ಲ ಮನುಷ್ಯರಲ್ಲೂ

"ಜ್ಯೋತಿ ಬೆಳಗುತಿದೆ ಪರಂಜ್ಯೋತಿ ಬೆಳಗುತಿದೆ

ಮಾತು ಮನಗಳಿಂದತ್ತತ್ತ ಮೀರಿದ ಜ್ಯೋತಿ ಬೆಳಗುತಿದೆ ಪರಂಜ್ಯೋತಿ ಬೆಳಗುತಿದೆ."

ಎಲ್ಲರ ಹೃದಯದಲ್ಲಿಯೂ ಬೆಳಗುತ್ತಲೇ ಇದೆ. ಆದರೆ ಅದು ಕೆಲವರನ್ನು ದೇವಯಾನದಲ್ಲಿ ಕೊಂಡೊಯ್ದು ಕ್ರಮಮುಕ್ತಿಯನ್ನು ನೀಡುತ್ತದೆ. ಉಳಿದೆಲ್ಲಾ ಹುಲು ಮಾನವರಲ್ಲಿ, ಕೆಲವರನ್ನು ಉತ್ತಮ ವಂಶದಲ್ಲಿ, ಉಳಿದೆಲ್ಲರನ್ನೂ ಕೀಳು ವಂಶಗಳಲ್ಲಿ ಹುಟ್ಟಿ ತಮ್ಮ ಹಿಂದಿನ ಜನ್ಮದ ಪಾಪಕರ್ಮಗಳನ್ನು ಅನುಭವಿಸುವಂತೆ ಮಾಡುತ್ತದೆ. ●



ಸಂಪಾದಕೀಯ

# ಗ್ರಾಮೀಣ ಶಾಲೆಗಳಿಗೆ ಸುಗ್ಗಿ ಹಂಗಾಮಿನಲ್ಲಿ ರಜೆ ಕೊಡಬಾರದೆ?

▌ ನಿತ್ಯಾನಂದಸ್ವಾಮಿ

ದಸರಾ ರಜೆ ಮುಗಿದು ಒಂದು ತಿಂಗಳು ಕಳೆದರೂ ಗ್ರಾಮೀಣ ಭಾಗದ ಮಕ್ಕಳು ಶಾಲೆಗೆ ಮರಳುವ ಬದಲು ಹತ್ತಿ ಬಿಡಿಸಲು ಹತ್ತಿ ಹೊಲಗಳಿಗೆ ಹೋಗುತ್ತಿದ್ದಾರೆ ಎಂಬ ವಿಷಯವೊಂದು ಹಾವೇರಿ ಜಿಲ್ಲೆಯಿಂದ ವರದಿಯಾಗಿದೆ. ಇದು ಹಾವೇರಿ ಜಿಲ್ಲೆಯೊಂದರಲ್ಲಿ ಮಾತ್ರವಲ್ಲ, ಹತ್ತಿ ಬೆಳೆಯುವ ಉತ್ತರ ಕರ್ನಾಟಕದ ಇತರ ಜಿಲ್ಲೆಗಳಲ್ಲಿಯೂ ಈಗ ಕಾಣಸಿಗುವ ಸಾಮಾನ್ಯ ದೃಶ್ಯವಾಗಿದೆ.

ಹತ್ತಿ ಬಿಡಿಸಲು ಮಕ್ಕಳನ್ನು ಪಾಲಕರೇ ಕರೆದೊಯ್ಯುತ್ತಾರೆ. ಬಡ ರೈತ ಕೂಲಿಯಾಳುಗಳನ್ನು ನೇಮಿಸುವ ಬದಲು ತನ್ನ ಮಕ್ಕಳನ್ನೇ ಶಾಲೆಗೆ ಹೋಗುವುದನ್ನು ಬಿಡಿಸಿ ತನ್ನ ಹೊಲದಲ್ಲೇ ಹತ್ತಿ ಬಿಡಿಸಲು ಹಚ್ಚುತ್ತಾನೆ. ಬಡ ಕೂಲಿಕಾರರ ಮಕ್ಕಳಂತೂ ತಮ್ಮ ಪಾಲಕರೊಂದಿಗೆ ಬೇರೆಯವರ ಹೊಲಕ್ಕೆ ಹೋಗಿ ಹತ್ತಿ ಬಿಡಿಸುತ್ತಾರೆ. 'ಅವರು ರೈತರ ಮಕ್ಕಳು, ಹೊಲದಲ್ಲಿ ದುಡಿಯಲೇ ಬೇಕು' ಎಂದು ಬಡ ರೈತರು ತಮ್ಮ ಮಕ್ಕಳ ದುಡಿಮೆಯನ್ನು ಸಮರ್ಥಿಸುತ್ತಾರೆ. 'ನಾವು ಕೂಲಿ ಮಕ್ಳು. ಈಗ ದುಡಿದರೆ ನಮಗೆ ಬಟ್ಟೆ ಬರೆ, ಪುಸ್ತಕಕ್ಕೆ ದುಡ್ಡು ಸಿಗುತ್ತದೆ.' ಎನ್ನುತ್ತಾರೆ ಕೂಲಿಕಾರರ ಕುಟುಂಬದಿಂದ ಬಂದವರು.

ಹೊಲಗಳಿಗೆ ಕೂಲಿಯಾಳುಗಳಾಗಿ ಹೋಗುವ ಮಕ್ಕಳು ಬೆಳಿಗ್ಗೆಯಿಂದ ಸಂಜೆವರೆಗೂ ಬಿಸಿಲನ್ನೂ ಲೆಕ್ಕಿಸದೆ ಹತ್ತಿ ಬಿಡಿಸುತ್ತಾರೆ. ಒಂದು ಕೆ.ಜಿ. ಹತ್ತಿ ಬಿಡಿಸಿದರೆ ಹೊಲದ ಮಾಲೀಕರು ರೂ. 5 ರಿಂದ ರೂ.8 ರ ವರೆಗೂ ಕೂಲಿ ನೀಡುತ್ತಾರೆ. ಒಬ್ಬ ವಿದ್ಯಾರ್ಥಿ ದಿನಕ್ಕೆ 20 ರಿಂದ 30 ಕೆ.ಜಿ. ವರೆಗೂ ಹತ್ತಿ ಬಿಡಿಸುತ್ತಾನೆ. ಹೀಗೆ ಬಿಡಿಸಿದ ಹತ್ತಿಯನ್ನು ಮಾಲೀಕರ ಮನೆಗೆ ಹೊತ್ತೊಯ್ದು, ತೂಕ ಮಾಡಿ, ಸಂಜೆ ಸರಾಸರಿ 100 ರಿಂದ 200 ರೂ. ವರೆಗೂ ಕೂಲಿ ಹಣವನ್ನು ಪಡೆದು ಮನೆಗೆ ಹಿಂತಿರುಗುತ್ತಾನೆ. ಇತ್ತ ಶಾಲಾ ಶಿಕ್ಷಕರು ಮಕ್ಕಳನ್ನು ಮರಳಿ ಶಾಲೆಗೆ ಕರೆತರಲು ಹರಸಾಹಸ ಪಡುತ್ತಾರೆ.


ಸರಿಸುಮಾರು ಇದೇ ಅವಧಿಯಲ್ಲಿ ಶೇಂಗಾ ಬೆಳೆಯುವ ಪ್ರದೇಶದಲ್ಲಿ ಶೇಂಗಾ ಕೀಳುವ ಸೀಜನ್ ಆರಂಭವಾಗುತ್ತದೆ. ಶಾಲೆಗೆ ಹೋಗುವುದನ್ನು ಬಿಟ್ಟು ಮಕ್ಕಳು ಶೇಂಗಾ ಕೀಳಲು ಹೋಗುವುದು ಸಹ ಸಾಮಾನ್ಯವಾಗಿದೆ. ಈ ತರಹದ ಸುಗ್ಗಿ ಹಂಗಾಮಗಳಲ್ಲಿ ಮಕ್ಕಳಿಂದ ಸಾಧ್ಯವಾಗುವ ಕೆಲಸಗಳಿಗೆ ಮಕ್ಕಳ ಬಳಕೆಯನ್ನು ತಡೆಗಟ್ಟುವುದು ಸಾಧ್ಯವಾಗದು. ಬಡ ರೈತರು ತಮ್ಮ ಖರ್ಚುವೆಚ್ಚಗಳನ್ನು ಕಡಿಮೆ ಮಾಡಲು ಪ್ರಯತ್ನ ಪಡುವುದನ್ನಾಗಲಿ, ಕೂಲಿಕಾರರು ತಮ್ಮ ಕುಟುಂಬದ ಆದಾಯವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವುದಾಗಲಿ ಅಪರಾಧವಾಗದು. ಆದರೆ ಒಂದು ವಾರದಿಂದ 15 ದಿನಗಳವರೆಗೆ ಶಾಲೆಗೆ ಹಾಜರಾಗದಿರುವುದು ಆ ಮಕ್ಕಳ ಶಿಕ್ಷಣವನ್ನು ಏರುಪೇರು ಮಾಡದೆ ಇರಲಾರದು. ಹೀಗಾಗುವುದನ್ನು ತಡೆಯಲು ಪರ್ಯಾಯ ಕ್ರಮಗಳನ್ನು ಯೋಚಿಸುವುದು ಅಗತ್ಯವಾಗಿದೆ.

ಗ್ರಾಮೀಣ ಶಾಲೆಗಳಿಗೆ ಸುಗ್ಗಿ ಹಂಗಾಮಿನಲ್ಲಿ ರಜೆ ಕೊಡುವುದು ಒಂದು ಒಳ್ಳೆಯ ಪರಿಹಾರವಾಗಬಹುದು. ಕೆಲ ವರ್ಷಗಳಿಂದ ಇಂತಹ ಪ್ರಸ್ತಾಪವೊಂದು ಸಾರ್ವಜನಿಕ ಚರ್ಚೆಗೆ ಒಳಪಟ್ಟಿತ್ತು. ಗ್ರಾಮೀಣ ಮಕ್ಕಳ ಹಿತ ಕಾಯುವ ದೃಷ್ಟಿಯಿಂದ ಸಂಬಂಧಪಟ್ಟವರು ಈ ಪ್ರಸ್ತಾವವನ್ನು ಗಂಭೀರವಾಗಿ ಪರಿಗಣಿಸುವುದು ಅಗತ್ಯವಿದೆ.

ನಮ್ಮ ಮಕ್ಕಳು ಎಷ್ಟು ದಿನ ಶಾಲೆಯಲ್ಲಿ ಇರಬೇಕು, ಅವರಿಗೆ ವರ್ಷದಲ್ಲಿ ಎಷ್ಟು ದಿನ ರಜೆಗಳಿರಬೇಕು ಎಂಬ ವಿಷಯದಲ್ಲಿ ಶಿಕ್ಷಣ ತಜ್ಞರಲ್ಲೇ ಒಮ್ಮತ ಇದ್ದಂತೆ ಕಾಣುವುದಿಲ್ಲ. ಇಂದಿನ ಪಠ್ಯಕ್ರಮ ಮತ್ತು ಪಠ್ಯ ಪುಸ್ತಕಗಳು ವಿದ್ಯಾರ್ಥಿಗಳಿಗೆ ಹೊರೆಯೇ ಆಗಿವೆ. ಆದಾಗ್ಯೂ ಸರಕಾರಗಳು ಬದಲಾದಾಗೊಮ್ಮೆ ಅದರ ಅಜೆಂಡಾಗಳನ್ನು ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳಲ್ಲಿ ತುಂಬಲಾಗುತ್ತದೆ. ಸ್ಪರ್ಧಾತ್ಮಕ ಜಗತ್ತನ್ನು ಎದುರಿಸಲು ಕಲಿಸುವ ಹೆಸರಿನಲ್ಲಿ ಮಕ್ಕಳ ಮೇಲೆ ವಿಪರೀತ ಒತ್ತಡ ಹೇರಲಾಗುತ್ತದೆ. ಜೈಲುಗಳಂತಿರುವ ಶಾಲೆಗಳಲ್ಲಿ ಹೆಚ್ಚು ಸಮಯವನ್ನು ಕಳೆಯುವ ಮಕ್ಕಳು ಜೀವನ ಪಾಠದಿಂದ ವಂಚಿತರಾಗಿ ಕೇವಲ ಅಂಕಗಳಿಸುವ ಯಂತ್ರಗಳಾಗುತ್ತಿದ್ದಾರೆ. ಗ್ರಾಮೀಣ ಶಾಲೆಗಳಿಗೂ ಈ ಪಿಡುಗು ವೇಗವಾಗಿ ಪ್ರಸರಿಸುತ್ತಿದೆ.

ಆಧುನಿಕ ಶಿಕ್ಷಣ ನಮ್ಮ ಮಕ್ಕಳನ್ನು ನಿಸರ್ಗದಿಂದ ದೂರಮಾಡುತ್ತಿರುವ ಅಪಾಯದ ಬಗ್ಗೆ ಸಮಾಜ ಗಮನ ನೀಡುವುದು ಅಗತ್ಯವಿದೆ. ನಿಸರ್ಗದಿಂದ ಹಾಗೂ ನಿಸರ್ಗದ ಬಗ್ಗೆ ನಾವು ತುಂಬಾ ಕಲಿಯುವುದಿದೆ. ನಮ್ಮ ಮಕ್ಕಳು ಶಾಲೆಯಲ್ಲಿ ಎಷ್ಟು ಹೊತ್ತು ಕಳೆಯಬೇಕು ಮತ್ತು ನಿಸರ್ಗದ ಮಡಿಲಲ್ಲಿ ಎಷ್ಟು ಹೊತ್ತು ಕಳೆಯಬೇಕು ಎಂಬುದನ್ನು ವೈಜ್ಞಾನಿಕವಾಗಿ, ಮಕ್ಕಳ ವಯಸ್ಸಿಗೆ ಅನುಗುಣವಾಗಿ ನಿಗದಿ ಪಡಿಸುವುದಾಗಬೇಕು. ಗ್ರಾಮೀಣ ಮಕ್ಕಳನ್ನು ಕೃಷಿ ಚಟುವಟಿಕೆಗಳಿಂದ ಬೇರ್ಪಡಿಸುವ ಅಗತ್ಯವಿಲ್ಲ. ಅವರ ಶಾಲಾ ದಿನಗಳನ್ನು ಮತ್ತು ರಜಾ ದಿನಗಳನ್ನು ಕೃಷಿ ಚಟುವಟಿಕೆಗಳಗೆ ಅನುಗುಣವಾಗಿ ಪುನರ್ ರೂಪಿಸುವುದು ಆಗಬೇಕಾಗಿದೆ. ▬

## ಸರಕಾರವೋ, ಡಿ.ಕೆ.ಶಿ.ಯೋ, ಕೇಬಲ್ ಪ್ರಸಾರಕರೋ :
# ಮಾಧ್ಯಮಗಳ ಬಾಯಿಗೆ ಬಡಿಯಲು ಬ್ಲಾಕ್‌ಮೇಲ್ ರಾಜಕಾರಣ




ರಾಜ್ಯದಲ್ಲಿ ಮಾತ್ರವಲ್ಲ, ದೇಶದಲ್ಲಿ ಸದ್ದು–ಗದ್ದಲ ಮಾಡಿ ಗುದ್ದು ಹಾಕಬಹುದಾಗಿದ್ದ ಸುದ್ದಿಯೊಂದು ಸರಕಾರದ 'ಸಾಂತ್ವನದ ಪ್ಯಾಕೇಜ್'ನಿಂದ ತಣ್ಣಗಾಗಿ ಹೋದ ವಿದ್ಯಾಮಾನ ಮಾಧ್ಯಮ ಕ್ಷೇತ್ರದಲ್ಲಿ ಈ ವಾರ ನಡೆದು ಹೋಗಿದೆ. ಈ ಸೋಮವಾರ ಮತ್ತು ಮಂಗಳವಾರ ಟಿ.ವಿ.9, ನ್ಯೂಸ್9 ಚಾನೆಲ್‌ಗಳು ಕೇಬಲ್ ನೆಟ್‌ವರ್ಕ್‌ನಲ್ಲಿ ಪ್ರಸಾರವಾಗದೇ ಬ್ಲಾಕ್ ಔಟ್ ಆಗಿದ್ದವು!

ಕನ್ನಡದ ಜನಪ್ರಿಯ ವಾಹಿನಿಯಾದ ಟಿ.ವಿ.9 ರಾಜ್ಯ ಸರಕಾರದ ವಿರುದ್ದ ನಿರಂತರವಾಗಿ (ಅಪ)ಪ್ರಚಾರ ಮಾಡುತ್ತಿದೆಯೆಂದು, ಹೀಗೆ ಮುಂದುವರಿದಲ್ಲಿ ತಮ್ಮ ಉದ್ಯಮವು ಸರಕಾರದ ಅವಕೃಪೆಗೆ ಒಳಗಾಗಿ ಹೆಚ್ಚಿನ ತೆರಿಗೆಯ ಹೊರೆ ಮತ್ತು ಈಡೇರಬಹುದಾದ ತಮ್ಮ ಕೆಲವು ಮುಖ್ಯ ಬೇಡಿಕೆಗಳ ಲಾಭಗಳನ್ನು ಕಳೆದುಕೊಂಡು ನಷ್ಟ ಅನುಭವಿಸಬೇಕಾಗಿ ಬರಲಿರುವುದರಿಂದ ಆ ಸಮೂಹದ ಪ್ರಸಾರವನ್ನು ಯಾರೂ ಮಾಡಬಾರದೆಂಬುದು ಪ್ರಸಾರ ನಿಲ್ಲಿಸಿದವರ ಅಂಬೋಣ! ಹೀಗೆಯೇ ಮಾಡಬೇಕೆಂಬುದು ಕೇಬಲ್ ನೆಟ್‌ವರ್ಕ್‌ಗಳ ಸಂಘದ ಆದೇಶ. ಬಹುತೇಕ ಎಲ್ಲಾ ಪ್ರಸಾರಕರು ಈ ತೀರ್ಮಾನವನ್ನು ಚಾಚೂ ತಪ್ಪದೇ ಜಾರಿಗೊಳಿಸಿದ್ದರು. ತಮ್ಮ 'ಶಕ್ತಿ' ಏನೆಂದು ಚಾನೆಲ್‌ನವರಿಗೆ ಬಿಸಿ ಮುಟ್ಟಿಸಿದ್ದರು. ಅರ್ಥಾತ್ ಅಧಿಕಾರಸ್ತರ ಆದೇಶ ಪಾಲಿಸಿದ್ದರು!

ಇಂತಹ 'ಬಿಸಿ'ಯ ಮೂಲಕ ಸಂಘಟಿತವಾಗಿ ಬ್ಲಾಕ್‌ಮೇಲ್ ಮಾಡುವಲ್ಲಿ ಈ ಖಾಸಗಿ ಪ್ರಸಾರಕರು ಮುಂದಾದುದು, ಯಶಸ್ವಿಯೂ ಆದುದು ನಿಜಕ್ಕೂ ದಿಗ್ಭ್ರಮೆ ಹುಟ್ಟಿಸುವ ಸಂಗತಿ. ಯಾವುದೇ ಒಂದು ವಾಹಿನಿಯು ಏನನ್ನು ಪ್ರಸಾರ ಮಾಡಬೇಕು, ಮಾಡಬಾರದು ಎಂಬ




ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಅದರ ಸಂಪಾದಕೀಯ ವಿಭಾಗ ಮತ್ತು ಆಡಳಿತ ಮಂಡಳಿ. ಕೇವಲ ಪ್ರಸಾರ ಮಾಡುವುದು ಕೇಬಲ್ ನೆಟ್‌ವರ್ಕ್‌ದಾರರ ಕೆಲಸ, ಇದೇನೂ ಪುಕ್ಕಟೆ ಸೇವೆಯೇನಲ್ಲ. ಈ ಸೇವೆಗೆ ಗ್ರಾಹಕರಿಂದ ಸೇವಾ ಶುಲ್ಕವನ್ನು ಪಡೆಯಲಾಗುತ್ತದೆ ಕೂಡ. ಏನಾದರೂ ಆಕ್ಷೇಪಗಳಿದ್ದರೆ ಅದು ಸಂಬಂಧಿತರ ನಡುವಿನ ವ್ಯವಹಾರ. ಗ್ರಾಹಕರಾಗಿ, ನಾಗರೀಕ ಪ್ರಜೆಗಳಾಗಿರುವವರ ಹಕ್ಕು. ಮಾಹಿತಿ ಪಡೆಯುವ ಅವರ ಹಕ್ಕನ್ನು ಯಾರೂ ಕಸಿಯುವಂತಿಲ್ಲ, ಬೇಕಾಬಿಟ್ಟಿಯಾಗಿ ನಿರ್ಬಂಧಿಸುವಂತಿಲ್ಲ.

ಒಂದು ವೇಳೆ ಸರಕಾರಕ್ಕೇನಾದರೂ ಆಕ್ಷೇಪಗಳಿದ್ದರೆ ಅದನ್ನು ನೇರವಾಗಿ ಚಾನೆಲ್ ಜೊತೆಗೆ ಸಂವಾದಿಸಬಹುದು ಅಥವಾ ಕಾನೂನಿನ ಕ್ರಮಗಳನ್ನು ಕೈಗೊಳ್ಳಬಹುದು. ಆದರೆ ಗ್ರಾಹಕರಿಗೆ ಸೇವೆ ಒದಗಿಸುವ ಕೇಬಲ್ ನೆಟ್‌ವರ್ಕ್‌ದಾರರು ಸರಕಾರದ ಪಕ್ಷ ವಹಿಸುವಂತೆ ಮಾಡಿದ್ದೇಕೆ? ಅವರು ವಹಿಸಿಕೊಂಡಿದ್ದೇಕೆ? ಅಥವಾ ತಾನೇ ಸರಕಾರವಾಗಿ ಅಥವಾ ಕಾನೂನು ಜಾರಿಗೊಳಿಸುವ ಸಂಸ್ಥೆಯಾಗಿ ದಂಡಿಸುವ ಕ್ರಮ ಜಾರಿಗೊಳಿಸಿದ್ದೇಗೆ? ಸಂವಿಧಾನ ಕೊಡ ಮಾಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡುವ, 'ಪ್ರಜಾಪ್ರಭುತ್ವದ ನಾಲ್ಕನೆಯ' ಸ್ತಂಬದ ಮೇಲೆ ಧಾಳಿ ಮಾಡುವ ಧಾಷ್ಟ್ರ್ಯವನ್ನು ತೋರಿದ್ದು ಹೇಗೆ?

ಇದು ಒಂದು ಮಗ್ಗಲಿನ ಸಂಗತಿಯಾದ–ರೆ, ಮತ್ತೊಂದರಲ್ಲಿ ಸರಕಾರದ ಪಾತ್ರವೇನು? ಸಂವಿಧಾನಾತ್ಮಕವಾಗಿ ಅಪಾರವಾದ ಅಧಿಕಾರಗಳನ್ನು ಹೊಂದಿರುವ ನಾಗರೀಕ ಸರಕಾರವೊಂದು ಖಾಸಗಿ ಕೇಬಲ್ ನೆಟ್‌ವರ್ಕ್ ಪೂರೈಕೆದಾರರ ಮೂಲಕ ತನ್ನ ಕ್ರಮವನ್ನು ಜಾರಿಗೊಳಿಸಲು ಮುಂದಾಗಬೇಕಿತ್ತೇ? ಹೀಗೆ ಯೋಚಿಸುವಾಗ ಇದು ಕಣ್ಣಿಗೆ ಕಾಣುವ, ಕೇಳಿಸುವ ಚಿತ್ರ–ಮಾತುಗಳಷ್ಟು ಸರಳ ಪ್ರಕರಣವಲ್ಲವೆಂಬುದು ಗೊತ್ತಾಗುತ್ತದೆ. ಇದರಲ್ಲಿ ಸಂವಿಧಾನಾತ್ಮಕ, ಕಾನೂನಾತ್ಮಕ ಸಂಗತಿಗಳ ಉಲ್ಲಂಘನೆಯ ಪ್ರಕರಣಕ್ಕಿಂತ ಇನ್ನೂ ಹೆಚ್ಚಿನ ಸಂಗತಿಗಳು ಇರುವುದು ಸ್ಪಷ್ಟ. ಅಂದರೆ ಸರಕಾರ ಅರ್ಥಾತ್ ಅಧಿಕಾರಸ್ಥರು ತಮಗಾಗದವರನ್ನು ಹಣಿಯಲು ಅಡ್ಡದಾರಿ ಹಿಡಿದಿದ್ದಾರೆ! ಹಾಗಾದರೆ ಅಂತಹ ಸಂಗತಿಗಳಾದರೂ ಏನಿವೆ! ಸಾಮಾಜಿಕ ನ್ಯಾಯದ ಬಗ್ಗೆ ದಿನದ 24 ಗಂಟೆಗಳೂ ಬೊಬ್ಬೆ ಹೊಡೆಯುವ ಸಿದ್ಧರಾಮಯ್ಯನವರ ಸರಕಾರ ಹೀಗೇಕೆ ಮಾಡಿತು?

ಸಂಗತಿ ಸ್ಪಷ್ಟ, ಟಿ.ವಿ.9, ನ್ಯೂಸ್9 ಚಾನೆಲ್‌ಗಳು ಕಾಂಗ್ರೆಸ್ ಸರಕಾರದಲ್ಲಿ 'ಪವರ್' ಫುಲ್ ಸಚಿವರಾಗಿರುವ ಡಿ.ಕೆ.ಶಿವಕುಮಾರ್ ರವರು ನಡೆಸಿರುವರು ಎನ್ನಲಾದ ಹಗರಣಗಳ ಬಗ್ಗೆ ಈ ಚಾನೆಲ್‌ಗಳು ಪ್ರಸಾರಿಸುತ್ತಿವೆಯಂತೆ. ಈ ಸೋಮವಾರ ಭಾರಿ ಹಗರಣಗಳ ಬಗ್ಗೆ ಸ್ಫೋಟಕ ವರದಿಯನ್ನು ಪ್ರಸಾರಿಸುವ ಕಾರ್ಯಕ್ರಮವಿದ್ದುದರಿಂದ ಅದು ರಾಜ್ಯದ ಜನತೆಗೆ ತಲುಪಬಾರದು ಎಂಬ ಉದ್ದೇಶದಿಂದ ಆ ಎರಡು ಚಾನೆಲ್‌ಗಳ ಪ್ರಸಾರವನ್ನು ನಿರ್ಬಂಧಿಸಲಾಯಿತು. ಉಪಗ್ರಹಗಳ ಮೂಲಕ ಪ್ರಸಾರವಾಗುವ ಕಾರ್ಯಕ್ರಮಗಳನ್ನು ಪಡೆಯುವ ಟಿ.ವಿ.ಗಳನ್ನು ಹೊರತು ಪಡಿಸಿದರೆ ಬಹುತೇಕವಾಗಿ ಎಲ್ಲರೂ ಖಾಸಗಿ ಕೇಬಲ್ ನೆಟ್‌ಗಳನ್ನೇ ಅವಲಂಬಿಸಬೇಕಿದೆ. ಈ ಸಂಗತಿಯನ್ನೇ ಬಳಸಿಕೊಂಡು ತನ್ನ ಹಗರಣಗಳ ಮಾಹಿತಿಯು ಜನರಿಗೆ ಹೋಗದಂತೆ ತಡೆಯಲು ಸಚಿವ ಡಿ.ಕೆ.ಶಿ. ಮುಂದಾಗಿದ್ದಾರೆಂದು ಕೆಲವು ಮುದ್ರಣ ಮಾಧ್ಯಮದಲ್ಲಿ ವರದಿಯಾಗಿರುವುದು ಆಧಾರ ರಹಿತವೇನಲ್ಲ. ಈ ಪ್ರಕರಣದಲ್ಲಿ ತನ್ನ ಕೈ ಏನೂ ಇಲ್ಲವೆಂದು ಸಚಿವ ಮಹಾಶಯ ಅಲ್ಲಗೆಳೆದರಾದರೂ ಚಾನೆಲ್ ಮೇಲೆ ದೂಷಣೆಯನ್ನು ನಿಲ್ಲಿಸಲಿಲ್ಲ. ಒಬ್ಬ ಜಿಲ್ಲಾ ಪಂಚಾಯತ್ ಸದಸ್ಯನಾಗಿದ್ದವ, ಮುಂದೆ ಶಾಸಕನಾಗಿ, ಸಚಿವನಾಗಿ ಬೆಳೆದುದು, ಒಬ್ಬ ಸಾಮಾನ್ಯ ರೈತನ ಮಗ ಇಂದು ಸಾವಿರಾರು ಕೋಟಿ ರೂಪಾಯಿಗಳ ವಹಿವಾಟಿನ 'ರಾಜಕೀಯ ಉದ್ಯಮಿಯಾಗಿ' ಬೆಳೆದುದನ್ನು, ಇಂದು ಮುಖ್ಯಮಂತ್ರಿ ಗದ್ದುಗೆಗೆ ಗಾಳ ಹಾಕಿ ಕುಳಿತಿರುವುದನ್ನು ಕಂಡಿರುವ ನಾಡಿನ ಜನತೆಗೆ ಅವರ 'ಸಾಧನೆಯ ಹಾದಿ' ಬಗ್ಗೆ ಹೆಚ್ಚಿಗೆ ಹೇಳಬೇಕಿಲ್ಲ.

ಟಿ.ವಿ.9, ನ್ಯೂಸ್9 ಪ್ರಶ್ನಾತೀತವೆಂಬುದು ನಮ್ಮ ಅಭಿಪ್ರಾಯವೇನಲ್ಲ. ಎಲ್ಲಾ ಖಾಸಗಿ ಚಾನೆಲ್‌ಗಳ ಬಲ, ದೌರ್ಬಲ್ಯ, ಮಾಧ್ಯಮ ಉದ್ದಿಮೆಯ ಲಾಭದ ಸೂತ್ರಗಳ ಅನುಕರಣೆಯಿಂದ ಅದು ಹೊರತಲ್ಲ.

ಪುಟ 6 ಕ್ಕೆ

# ‘ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಕೊಲ್ಲದಿರಿ’

## ರಾಜ್ಯವ್ಯಾಪಿ ಪ್ರತಿಭಟನೆಗಳಲ್ಲಿ ಆಗ್ರಹ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಮೊಟಕುಗೊಳಿಸಲು ಹೊರಟಿರುವ ಕೇಂದ್ರದ ಮೋದಿ ಸರಕಾರದ ಹುನ್ನಾರವನ್ನು ವಿರೋಧಿಸಿ 26, ನವಂಬರ 2014ರಂದು ದೇಶವ್ಯಾಪಿ ಪ್ರತಿಭಟನೆ ನಡೆಸಲು ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿ ಹಾಗೂ ಕರ್ನಾಟಕ ರಾಜ್ಯ ಸಮಿತಿ ನೀಡಿದ್ದ ಕರೆಯಂತೆ ರಾಜ್ಯದ ಹಲವು ಕಡೆಗಳಲ್ಲಿ ಪ್ರತಿಭಟನೆಗಳು ನಡೆದ ವರದಿಗಳು ಬರುತ್ತಿವೆ. ಹೆಚ್ಚಿನ ಕಡೆಗಳಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಅಥವಾ ತಹಸೀಲ್ದಾರರ ಕಚೇರಿ ಮುಂದೆ ಪ್ರತಿಭಟನೆಗಳು ನಡೆದಿವೆ.

**ಕುಂದಾಪುರ :**

ಸಿಪಿಐ(ಎಂ) ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ ಕುಂದಾಪುರ ತಾಲೂಕು ಪಂಚಾಯತ್ ಕಚೇರಿ ಎದುರು ಸಾಮೂಹಿಕ ಪ್ರತಿಭಟನೆ ಸತ್ಯಾಗ್ರಹ ಜರಗಿತು. ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ, ಕುಂದಾಪುರ ತಾಲೂಕು ಸಮಿತಿಯ ಆಶ್ರಯದಲ್ಲಿ ತಾಲೂಕಿನಾದ್ಯಂತ 40ಕ್ಕೂ ಹೆಚ್ಚು ಕಾಯಕ ಸಂಘದ ಉದ್ಯೋಗ ಖಾತ್ರಿ ಕೂಲಿಕಾರರು, ಸಹಸ್ರಾರು ಸಂಖ್ಯೆಯಲ್ಲಿ ಮಹಿಳೆಯರು ಈ ಹೋರಾಟದಲ್ಲಿ ಭಾಗವಹಿಸಿದರು.

ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್ ಪ್ರತಿಭಟನಾ ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡುತ್ತಾ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ನೀಡಬೇಕಾದ ಅನುದಾನವನ್ನು ಗಣನೀಯವಾಗಿ ಕಡಿತ ಮಾಡಲು ನಿರ್ಧರಿಸಲಾಗಿದೆ. ನರೇಗಾ ಯೋಜನೆಯನ್ನು ಅತೀ ಹಿಂದುಳಿದ ಕೇವಲ 2,500 ಬ್ಲಾಕ್‌ಗಳಿಗೆ ಮಾತ್ರ ಸೀಮಿತಗೊಳಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು. ಕೇಂದ್ರ ಸರಕಾರವು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ವರ್ಷದಲ್ಲಿ 250 ದಿನಗಳ ಕೆಲಸವನ್ನು ದಿನಕ್ಕೆ ರೂ. 300/– ದರದಲ್ಲಿ ವೇತನ ನೀಡಲು ಸಾಧ್ಯವಾಗುವಂತೆ ಅನುದಾನವನ್ನು ಹೆಚ್ಚಿಸಬೇಕು ಮತ್ತು ಕಾಯಿದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದು ಹೇಳಿದರು.

ಕೆಲಸ ಕೋರಿ ಬರುವ ಎಲ್ಲರಿಗೂ ಉದ್ಯೋಗ ಚೀಟಿಯನ್ನು ಒದಗಿಸಬೇಕು. ಕೆಲಸದ ಬೇಡಿಕೆ ಪಟ್ಟಿ ಸಲ್ಲಿಸಿದ 15 ದಿನಗಳವರೆಗೂ ಉದ್ಯೋಗ ಕೊಡಲು ವಿಫಲವಾದರೆ ನಿರುದ್ಯೋಗ ಪರಿಹಾರ ನೀಡಬೇಕು. ಕಾಯಿದೆಯಲ್ಲಿ ಕಡ್ಡಾಯಗೊಳಿಸಿದಂತೆ ಉದ್ಯೋಗ ಚೀಟಿ ಹೊಂದಿದವರೆಲ್ಲರಿಗೂ ವರ್ಷದಲ್ಲಿ ಕನಿಷ್ಠ 100 ದಿನಗಳ ಕೆಲಸ ನೀಡಬೇಕು. ಎಲ್ಲಾ ರಾಜ್ಯಗಳಲ್ಲಿ ಸರಕಾರಕ್ಕೆ ನಿಗದಿಪಡಿಸಿದ ಕನಿಷ್ಠ ವೇತನವನ್ನು ಜಾರಿಗೊಳಿಸಬೇಕು. ನಿಗದಿತ ಅವಧಿಯೊಳಗೆ ವೇತನ ಪಾವತಿ ಮಾಡಲು ವಿಫಲರಾದವರೆಲ್ಲರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಯೋಜನೆಯ ಸಮರ್ಪಕ ಅನುಷ್ಠಾನ ಮತ್ತು ಭ್ರಷ್ಟಾಚಾರವನ್ನು ತಡೆಗಟ್ಟುವುದರಲ್ಲಿ ಗ್ರಾಮ ಸಭೆಗಳ ಪಾತ್ರ ಬಲಪಡಿಸಬೇಕು. ಇತ್ಯಾದಿ ಬೇಡಿಕೆ ಪಟ್ಟಿಯನ್ನು ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ನಯನ ಇವರಿಗೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ತಾಲೂಕು ಪಂಚಾಯತ್ ಅಧ್ಯಕ್ಷ ಭಾಸ್ಕರ ಬಿಲ್ಲವ, ಕಾರ್ಯ ನಿರ್ವಹಣಾಧಿಕಾರಿ ಎಡಾಲ್ಫ್ ಫೆರ್ನಾಂಡಿಸ್ ಉಪಸ್ಥಿತರಿದ್ದರು.
















ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಅಕುಶಲ ಕೂಲಿ ಕೆಲಸಗಾರರು ಕೆಲಸ ಮಾಡಿದ ಬಗ್ಗೆ ದಾರಿ ದೂರದ ಪ್ರಯಾಣ ಭತ್ಯೆ ನೀಡಲು ನಿರಾಕರಿಸಿದ ಕರ್ಕುಂಜೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಅಕುಶಲ ಕೂಲಿ ಉದ್ಯೋಗವನ್ನು ಅಂಗವಿಕಲರು ಹಾಗೂ ಹಿರಿಯ ನಾಗರಿಕರಿಗೆ ಕೆಲಸದ ಪ್ರಮಾಣದಲ್ಲಿ ಶೇಕಡಾ 50% ರಿಯಾಯಿತಿ ಕೊಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಕಾಯಕ ಬಂಧುಗಳಿಗೆ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕಾಯಕ ಸಂಘದ ಸದಸ್ಯರುಗಳಿಂದ ಸೃಜನೆಯಾದ ಮಾನವ ದಿನಗಳಿಗೆ ಪ್ರೋತ್ಸಾಹ ಧನ ರೂ. 3/–ರಂತೆ ನೀಡದ ಬಗ್ಗೆ ಸೂಕ್ತ ಕ್ರಮವಹಿಸಬೇಕು. ಇತ್ಯಾದಿ ಸ್ಥಳೀಯ ಬೇಡಿಕೆಗಳನ್ನು ಈಡೇರಿಸಲು ದಿನಾಂಕ 4 ಡಿಸೆಂಬರ್ 2014ರಂದು ಕುಂದಾಪುರ ತಾಲೂಕು ಪಂಚಾಯತ್ ಕಛೇರಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಕೂಲಿಕಾರರ ಸಂಘದ ಮುಖಂಡರೊಡನೆ ಜಂಟಿ ಸಭೆ ನಡೆಸಲು ತೀರ್ಮಾನಿರುವುದನ್ನು ಕೂಲಿಕಾರರ ಸಂಘವು ಸ್ವಾಗತಿಸಿ, ಅಭಿನಂದಿಸಲಾಯಿತು.

ಸಿಪಿಐ(ಎಂ) ಪಕ್ಷದ ತಾಲೂಕು ಕಾರ್ಯದರ್ಶಿ ಮಹಾಬಲ ವಡೇರಹೋಬಳಿ, ಮುಖಂಡರಾದ ಎಚ್.ನರಸಿಂಹ, ರಾಜೀವ ಪಡುಕೋಣೆ, ವೆಂಕಟೇಶ್ ಕೋಣಿ, ನಾಗರತ್ನಾ ನಾಡಾ, ಗಣಪತಿ ಶೇಟ್ ಕೋಣಿ, ರಮಾನಾಥ ಭಂಡಾರಿ, ಕರಿಯ ದೇವಾಡಿಗ ಉಪಸ್ಥಿತರಿದ್ದರು.

**ರಾಮದುರ್ಗ – ‘ಉದ್ಯೋಗ ಖಾತ್ರಿ ಯೋಜನೆ ಉಳಿಸಲು’ ಆಗ್ರಹ**

ಕೇಂದ್ರಲ್ಲಿರುವ ಬಿಜೆಪಿ ಸರ್ಕಾರ ಈ ಜನಪರವಾದ ಮತ್ತು ಜನಪ್ರಿಯವಾದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುದಾನ ಕಡಿತ ಮಾಡಿ ನಿರ್ನಾಮ ಮಾಡಲು ಹೊರಟಿದೆ ಎಂದು ರಾಮದುರ್ಗ ತಹಶೀಲ್ದಾರ ಕಚೇರಿ ಎದುರು ನಡೆದ ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ಪಕ್ಷದ ಕಾರ್ಯದರ್ಶಿ ಜಿ.ಎಂ.ಜೈನೆಖಾನ ಮೋದಿ ಸರ್ಕಾರದ ನೀತಿಯನ್ನು ಖಂಡಿಸಿದರು. ಕೇಂದ್ರದ ಬಿಜೆಪಿ ಸರ್ಕಾರದ ನೀತಿ ಕಾರ್ಮಿಕ ವಿರೋಧಿ ನೀತಿಯಾಗಿದೆ. ಕೂಡಲೇ ಈ ನೀತಿಯನ್ನು ಕೈಬಿಟ್ಟು ಉದ್ಯೋಗ ಖಾತರಿ ಯೋಜನೆಗೆ ಹೆಚ್ಚಿನ ಅನುದಾನ ಕೊಟ್ಟು ಬಲ ಪಡಿಸಬೇಕೆಂದು ಪಕ್ಷದ ಮುಖಂಡ ನಾಗಪ್ಪ ಸಂಗೊಳ್ಳಿ ಒತ್ತಾಯ ಮಾಡಿದರು. ರಾಮದುರ್ಗ ತಹಶೀಲ್ದಾರ ಟಿ.ವ್ಹಿ. ದಾಸರ ಇವರ ಮೂಲಕ ರಾಜ್ಯಪಾಲರಿಗೆ ಮನವಿ ಅರ್ಪಿಸಲಾಯಿತು. ವೀರಭದ್ರ ಕಂಪಲಿ ಸ್ವಾಗತಿಸಿ ವಂದಿಸಿದರು. ಅಬ್ದುಲ್ ಗಫೂರ ಪಠಾಣ, ಅಯುಬ ಮೋಹಳಕರ, ಶೆಟ್ಟೆಪ್ಪ ಸಂಗೊಳ್ಳಿ, ಅಮೀನಸಾಬ ನದಾಫ, ಗಿರಿಯಪ್ಪ ಬಂಡಿವಡ್ಡರ ಹಾಗೂ ನೂರಾರು ಪಕ್ಷದ ಕಾರ್ಯಕರ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಮಂಗಳೂರು :**

ಮಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಮುಖಂಡರೂ ಆದ ಕಾಂ. ಕೆ.ಆರ್. ಶ್ರೀಯಾನ್‌ರವರ ನೇತೃತ್ವದಲ್ಲಿ ‘ರೇಗಾ ಉಳಿಸಿ’ ಪ್ರತಿಭಟನೆ ನಡೆದಿದೆ. ಸುಮಾರು 50 ಮಂದಿ ಸಂಗಾತಿಗಳು ಭಾಗವಹಿಸಿದ್ದರು.

**ಬಳ್ಳಾರಿ :**

ಬಳ್ಳಾರಿ ಜಿಲ್ಲೆಯ ಎಲ್ಲಾ ನಾಲ್ಕು ತಾಲ್ಲೂಕುಗಳಲ್ಲಿ ಪ್ರತಿಭಟನೆ ನಡೆದಿದೆ. ಜಿಲ್ಲೆಯ ಕುರಗೋಡು ತಾಲ್ಲೂಕು ಕೇಂದ್ರದ ಪ್ರತಿಭಟನೆಯಲ್ಲಿ 60 ಜನ ಸಂಗಾತಿಗಳು, ಹಗರಿಬೊಮ್ಮನಹಳ್ಳಿ ತಾಲ್ಲೂಕು ಕಚೇರಿಯ ಮುಂದೆ ನೂರಾರು ರೈತ, ಕೂಲಿಕಾರರು ಮತ್ತು ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು, ಹೊಸಪೇಟೆ ತಾಲ್ಲೂಕು ಕೇಂದ್ರದಲ್ಲಿ 70ಜನ ಸಂಗಾತಿಗಳು ಹಾಗೂ ಶಿರಗುಪ್ಪ ತಾಲ್ಲೂಕಿನಲ್ಲಿ 200 ಜನರು ಭಾಗವಹಿಸಿದ್ದರು. ಈ ಪ್ರತಿಭಟನೆಗಳ ನೇತೃತ್ವವನ್ನು ರಾಜ್ಯ ಸಮಿತಿ ಸದಸ್ಯರು ಮತ್ತು ರಾಜ್ಯ ಕಾರ್ಯದರ್ಶಿ ಆರ್.ಎಸ್. ಬಸವರಾಜ್, ಜಗನ್ನಾಥ್ ಮತ್ತು ಮಾಳಮ್ಮ, ಶಿವಶಂಕರ್, ಗಾಳಿ ಬಸವರಾಜ್, ವಿಶ್ವನಾಥಸ್ವಾಮಿ, ಮಹಮ್ಮದ್ ಖಾನ್, ಭಾಸ್ಕರ್‌ರೆಡ್ಡಿ, ಜಂಬಯ್ಯನಾಯಕ್, ಕರುಣಾನಿಧಿ, ಗೋಪಾಲ್, ಅಡಿವಪ್ಪ, ಯಲ್ಲಪ್ಪ ಮತ್ತು ಈರಮ್ಮ ವಹಿಸಿದ್ದರು.

**ಕೊಪ್ಪಳ :**

ಕೊಪ್ಪಳ ಜಿಲ್ಲಾ ಸಮಿತಿಯ ಎಲ್ಲಾ ನಾಲ್ಕು ತಾಲ್ಲೂಕುಗಳಲ್ಲಿಯೂ ಪ್ರತಿಭಟನೆ ನಡೆದಿದೆ. ಪಕ್ಷದ ಮುಖಂಡರಾದ ಜಿ. ನಾಗರಾಜ್, ಜಿ. ಬಸವರಾಜ್,

ಪುಟ 15 ಕ್ಕೆ

**ಬೀದರ್ :**

ಬೀದರ್ ಜಿಲ್ಲೆಯ ಹುಮ್ನಾಬಾದ್‌ನಲ್ಲಿ ಪ್ರತಿಭಟನೆ ನಡೆದಿದೆ. ಹಳೇ ತಹಸೀಲ್ದಾರ್ ಕಚೇರಿಯಿಂದ ಹೊಸ ತಹಸೀಲ್ದಾರ್ ಕಚೇರಿಯವರೆಗೆ ಸುಮಾರು ಇನ್ನೂರು ಜನರು ಅದರಲ್ಲೂ ಬಹುತೇಕ ಮಹಿಳೆಯರು ಮೆರವಣಿಗೆ ನಡೆಸಿದ್ದಾರೆ. ತಹಸೀಲ್ದಾರ್ ಕಚೇರಿಯ ಮುಂದೆ ಬಹಿರಂಗ ಸಭೆ ನಡೆದಿದ್ದೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಹಾಗೂ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿಯವರು ಈ ಪ್ರತಿಭಟನೆಯನ್ನುದ್ದೇಶಿ ಮಾತನಾಡಿದ್ದಾರೆ. ಕೇಂದ್ರ ಸರಕಾರವು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಕೊಲ್ಲಲು ಹೊರಟದ್ದು ಸಿಪಿಐ(ಎಂ) ಮತ್ತು ಜನಪರ ಚಳುವಳಿಗಳು ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಅವರು ಹೇಳಿದರು. ಪಕ್ಷದ ಜಿಲ್ಲಾ ಮುಖಂಡರಾದ ಪ್ರಭು ಸಂತೋಷ್ಕರ್, ಅಂಬುಬಾಯಿ ಮಾಳಗೆ, ಇಸಾಮುದ್ದೀನ್ ಮೀರ್ ಸಾಬ್, ರೇಷ್ಮಾ ಹಂಸರಾಜ್, ಬಸವರಾಜ ಗಡವಂತಿ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

**ಸ್ಥಳೀಯ ಬೇಡಿಕೆಗಳ ಈಡೇರಿಕೆ**

ತಹಸೀಲ್ದಾರರ ಕಚೇರಿಯಲ್ಲಿ ಪಂಚಾಯ್ತಿಯ ಪಿಡಿಓಗಳ ಸಭೆ ನಡೆಯುತ್ತಿದ್ದು, ಪ್ರತಿಭಟನೆಯಲ್ಲಿ ಉದ್ಯೋಗ ಖಾತ್ರಿಗೆ ಸಂಬಂಧಿಸಿದ ಸ್ಥಳೀಯ ಬೇಡಿಕೆಗಳೂ ಇದ್ದವು. ಪ್ರತಿಭಟನೆಗೆ ಮಣಿದ ಆಡಳಿತವು ಬಾಕಿ ವೇತನವನ್ನು ಒಂದು ವಾರದೊಳಗೆ ಬಿಡುಗಡೆ ಮಾಡಲು ತೀರ್ಮಾನಿಸಿತು ಮತ್ತು ಉದ್ಯೋಗ ಖಾತ್ರಿ ಅಡಿ ಕೆಲಸಕ್ಕೆ ಅರ್ಜಿ ಹಾಕಿಕೊಂಡವರಿಗೆ ಮರುದಿನದಿಂದಲೇ ಕೆಲಸ ನೀಡಲು ಆದೇಶ ನೀಡಲಾಯಿತು. ಇದು ಪ್ರತಿಭಟನೆಯಲ್ಲಿ ಪಾಲ್ಗೊಂಡ ಜನರಲ್ಲಿ ವಿಶ್ವಾಸ ಮೂಡಿಸಿತು.

## ಕೇಂದ್ರ ರಾಜ್ಯಗಳ ಕಾರ್ಮಿಕ ದ್ರೋಹಿ ಕಾನೂನು ತಿದ್ದುಪಡಿಗಳ ವಿರುದ್ದ....

### ಒಂದೆಡೆ ಸೇರಿದ ಹಲವು ಬಣ್ಣಗಳ ಬಾವುಟಗಳು

### ಕಾರ್ಮಿಕ ಸಂಘಟನೆಗಳ ಜಂಟಿ ರಾಜ್ಯ ಸಮಾವೇಶ

# ಡಿಸೆಂಬರ್– 5 ರಾಜ್ಯವ್ಯಾಪಿ ಪ್ರತಿಭಟನ ಚಳುವಳಿ ಯಶಸ್ಸಿಗೆ ನಿರ್ಧಾರ




ಕೇಂದ್ರ ಹಾಗೂ ನಾನಾ ರಾಜ್ಯ ಸರಕಾರಗಳ ಕಾರ್ಮಿಕ ದ್ರೋಹಿಯಾದ ಮತ್ತು ಬಂಡವಾಳಗಾರರ ಪರವಾದ ಕಾರ್ಮಿಕ ಕಾನೂನು ತಿದ್ದುಪಡಿಗಳ ಸೂಚನೆ ವಿರುದ್ಧ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ(ಜೆಸಿಟಿಯು) ನೇತೃತ್ವದಲ್ಲಿ ಬೆಂಗಳೂರಿನ ಎನ್‌ಜಿಒ ಸಭಾಂಗಣದಲ್ಲಿ ನವೆಂಬರ್ 25, 2014 ರಂದು ರಾಜ್ಯ ಸಮಾವೇಶವು ನಡೆಯಿತು. ವಿವಿಧ ಕಾರ್ಮಿಕ ಸಂಘಟನೆಗಳನ್ನು ಪ್ರತಿನಿಧಿಸುವ ಕಾರ್ಮಿಕ ಮುಖಂಡರು ಹಾಗೂ ನಾನಾ ವಲಯ–ವಿಭಾಗಗಳ ನಾನಾ ಜಿಲ್ಲೆಗಳ ಕಾರ್ಮಿಕ ಮುಖಂಡರು ಹಾಗೂ ಕಾರ್ಮಿಕರು ಸಮಾವೇಶದಲ್ಲಿ ಉತ್ಸಾಹದಿಂದ ಪಾಲ್ಗೊಂಡು ಸಮಾವೇಶವು ಯಶಸ್ವಿಯಾಯಿತು.

ಈ ಸಮಾವೇಶ ಡಿಸೆಂಬರ್ 5, 2014 ರಂದು ದೇಶದಾದ್ಯಂತ ನಡೆಯುತ್ತಿರುವ ಚಳುವಳಿಯನ್ನು ರಾಜ್ಯದಲ್ಲಿ ಯಶಸ್ವಿ ಮಾಡಬೇಕೆಂದು ಕಾರ್ಮಿಕ ವರ್ಗಕ್ಕೆ ಕರೆ ನೀಡಿತು.

**ಎಲ್ಲ ಬಣ್ಣಗಳ ಬಾವುಟಗಳ ಕಾರ್ಮಿಕರೂ ಒಂದಾಗಿ ಹೋರಾಡ ಬೇಕು– ಬಿಎಂಎಸ್ ಮುಖಂಡ ರಾಮಕೃಷ್ಣ ಪೂಂಜಾ**

ಕೇಂದ್ರ ಸರಕಾರವು ತರಲು ಹೊರಟಿರುವ ಕಾರ್ಮಿಕ ಕಾನೂನು ತಿದ್ದುಪಡಿಗಳು ಅತ್ಯಂತ ಕಾರ್ಮಿಕ ವಿರೋಧಿಯಾಗಿದ್ದು ಈ ನೀತಿಗಳ ವಿರುದ್ಧ ಬೇರೆ ಬೇರೆ ಬಣ್ಣಗಳ ಬಾವುಟಗಳನ್ನು ಹೊಂದಿರುವ ಕಾರ್ಮಿಕರು ಒಂದಾಗಿ ಹೋರಾಟ ನಡೆಸಬೇಕು. ಡಿಸೆಂಬರ್ 5 ರಂದು ಜೆಸಿಟಿಯು ಕರೆ ನೀಡಿರುವ ಹೋರಾಟದ ಕರೆಯನ್ನು ಭಾರತೀಯ ಮಜ್ದೂರ್ ಸಂಘಟನೆ(ಬಿಎಂಎಸ್) ಬೆಂಬಲಿಸಿ ಭಾಗವಹಿಸುತ್ತದೆ ಎಂದು ಬಿಎಂಎಸ್ ಸಂಘಟನೆಯ ಮುಖಂಡ ರಾಮಕೃಷ್ಣ ಪೂಂಜಾ ಅವರು ಹೇಳಿದರು.

**'ಸರಕಾರದ ಭಜನಾ ಮಂಡಳಿಯಲ್ಲ' – ಎಐಟಿಯುಸಿ ಮುಖಂಡ ಎಚ್.ವಿ. ಅನಂತ ಸುಬ್ಬರಾವ್**



ಸರಕಾರದ ವಿರುದ್ಧ ವರದಿ ಪ್ರಸಾರ ಮಾಡಿದ ಕಾರಣಕ್ಕೆ ರಾಜ್ಯದ ಸಚಿವ ಡಿ.ಕೆ. ಶಿವಕುಮಾರ್ ಅವರು ಟಿವಿ–9 ಚಾನೆಲ್ ಅನ್ನು ಪ್ರಸಾರ ಮಾಡಬಾರದೆಂದು ಕೇಬಲ್ ಆಪರೇಟರ್‌ಗಳಿಗೆ ಸೂಚಿಸಿದ್ದನ್ನು ತೀವ್ರವಾಗಿ ಖಂಡಿಸಿದ ಎಐಟಿಯುಸಿ ಮುಖಂಡರಾದ ಎಚ್.ವಿ. ಅನಂತ ಸುಬ್ಬರಾವ್ ಅವರು ಮಾಧ್ಯಮಗಳು ಮತ್ತು ಕಾರ್ಮಿಕ ಸಂಘಟನೆಗಳು ಸರಕಾರದ ಭಜನಾ ಮಂಡಳಿ ಅಲ್ಲ ಎಂದು ಚಾಟಿ ಬೀಸಿದರು.

**'ದೇಶದ ಪ್ರಜಾಪ್ರಭುತ್ವ ಬಂಡವಾಳಿಗರ ಖಾಸಗಿ ಸ್ವತ್ತಲ್ಲ' – ಸಿಐಟಿಯು ಮುಖಂಡ ಎಸ್. ಪ್ರಸನ್ನ ಕುಮಾರ್**

ವಿದೇಶಿ ಬಂಡವಾಳಶಾಹಿಗಳು ಭಾರತದ ಸಂಪತ್ತನ್ನು ದೋಚಲು ಅನುಕೂಲ ಕಲ್ಪಿಸುವ ಸಲುವಾಗಿಯೆ ಕೇಂದ್ರ ಸರಕಾರ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಲಾಗುತ್ತಿದೆ. ಆರು ತಿಂಗಳ ಹಿಂದೆ ಅಧಿಕಾರದ ಚುಕ್ಕಾಣಿ ಹಿಡಿದ ಪ್ರ ಧಾನಿ ನರೇಂದ್ರ ಮೋದಿ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡುವುದರ ಮೂಲಕ ದೇಶವನ್ನೇ ಬಂಡವಾಳಶಾಹಿಗಳಿಗೆ ಮಾರಾಟ ಮಾಡಲು ತುದಿಗಾಲಲ್ಲಿ ನಿಂತಿ–ದ್ದಾರೆ. ಕಾರ್ಮಿಕ ವರ್ಗದ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಸಂಚಕಾರ ಬಂದಿದೆ. ದೇಶದ ಪ್ರಜಾಪ್ರಭುತ್ವ ಬಂಡವಾಳಿಗರ ಖಾಸಗಿ ಸ್ವತ್ತಲ್ಲ. ಐಕ್ಯ ಹೋರಾಟದಿಂದ ಈ ಅಪಾಯವನ್ನು ಹಿಮ್ಮೆಟ್ಟಿಸಬೇಕಿದೆ ಎಂದು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್ ಹೇಳಿದರು.

ಇಲ್ಲಿಯವರೆಗೂ ವಿದ್ಯುತ್ ಬಳಸುವ 10 ಕಾರ್ಮಿಕರಿರುವ ಕಾರ್ಖಾನೆ ಕಾರ್ಮಿಕ ಕಾಯ್ದೆಯಡಿ ಬರುತ್ತಿತ್ತು. ಆದರೆ, ನರೇಂದ್ರ ಮೋದಿ ಸರಕಾರ ತಿದ್ದುಪಡಿ ತರಲು ಹೊರಟಿರುವ ಕಾರ್ಮಿಕ ಕಾನೂನಿನಲ್ಲಿ 40ಕ್ಕೂ ಹೆಚ್ಚು ಕಾರ್ಮಿಕರಿದ್ದರೆ ಮಾತ್ರ ಆ ಕಾರ್ಖಾನೆ ಕಾರ್ಮಿಕ ಕಾಯ್ದೆಗೆ ಒಳಪಡುತ್ತದೆ. ಇದರಿಂದ ರಾಜ್ಯದಲ್ಲಿ 63,700 ನೋದಾಯಿತ ಕಾರ್ಖಾನೆಗಳ ಪೈಕಿ ಶೇ. 70 ರಷ್ಟು ಕಾರ್ಖಾನೆಗಳು ಕಾರ್ಖಾನೆ ವ್ಯಾಪ್ತಿಯಿಂದ ಹೊರಗುಳಿಯುತ್ತವೆ. ಇದು ಕಾರ್ಮಿಕರಿಗೆ ಅತ್ಯಂತ ಮಾರಕವಾದುದು ಎಂದರು.

ನಿರಂತರ ಹೋರಾಟ ಹಾಗೂ ತ್ಯಾಗ ಬಲಿದಾನದ ಫಲವಾಗಿ ಕಾರ್ಮಿಕರಿಗೆ ದುಡಿಮೆ 8 ಗಂಟೆಯೆಂಬುದು ಬಂದಿದೆ. ಆದರೆ, ಕೇಂದ್ರ ಸರಕಾರ ನಿಗದಿತ ವೇಳೆಯನ್ನು ತಿದ್ದುಪಡಿ ಮಾಡಿ, ಒಬ್ಬ ಕಾರ್ಮಿಕನನ್ನು ಎಷ್ಟು ಗಂಟೆ ಬೇಕಾದರೂ ದುಡಿಸಿಕೊಳ್ಳುವಂತಹ ಕಾಯ್ದೆಯನ್ನು ಜಾರಿ ಮಾಡಲು ಹೊರಟಿದೆ. ಅಪ್ರೆಂಟೀಸ್ ಕಾರ್ಮಿಕರ ವೇತನದ ಶೇ. 50 ರಷ್ಟನ್ನು ಕೇಂದ್ರ ಸರಕಾರ ಭರಿಸಲು ಹೊರಟಿದೆ. ಇದು ತೆ–ರಿಗೆದಾರರ ಹಣವನ್ನು ಬಂಡವಾಳಗಾರರ ಹಿತಕ್ಕೆ ನೀಡುವ ನೀತಿ ಎಂದು ಅವರು ಖಂಡಿಸಿದರು. ಅಪ್ರೆಂಟಿಸ್ ಕಾನೂನಿಗೆ ತಿದ್ದುಪಡಿ ತರುತ್ತಿದ್ದು, ತರಬೇತಿಗೆ ಸೇರಿದ ಕಾರ್ಮಿಕನನ್ನು ನೇಮಕಾತಿ ಮಾಡಿಕೊಳ್ಳದೆ ಎಷ್ಟು ವರ್ಷ ಬೇಕಾದರೂ ಹಾಗೇ ದುಡಿಸಿಕೊಳ್ಳಬಹುದಾಗಿದೆ. ಇದರಿಂದ ಕಾರ್ಮಿಕರಿಗೆ ಸಿಗಬೇಕಾದ ಯಾವ ಸೌಲಭ್ಯಗಳು ಸಿಗುವುದಿಲ್ಲ. ಹಾಗಾಗಿ ಕಾರ್ಮಿಕ ಕಾನೂನುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಹೋರಾಟ ಅನಿವಾರ್ಯವಾಗಿದೆ ಎಂದು ಹೇಳಿದರು.

ರಾಜಸ್ಥಾನದಲ್ಲಿ ಮಾಲೀಕರು ಯಾವಾಗ ಬೇಕಾದರೂ ಕಾರ್ಖಾನೆ ಮುಚ್ಚಬಹುದು. ಕಾರ್ಮಿಕರನ್ನು ಅಮಾನತ್ತು ಮಾಡಬಹುದು. ಕಾರ್ಖಾನೆಯಿಂದಲೇ ತೆಗೆಯಬಹುದು. ಇಂತಹ ಕಾರ್ಮಿಕ ಕಾಯ್ದೆ ತಿದ್ದುಪಡಿ ತರಲಾಗಿದೆ. ಅಲ್ಲಿ 100 ಜನ ಕಾರ್ಮಿಕರಿರುವ ಕಾರ್ಖಾನೆ ಮುಚ್ಚಲು ಅನುಮತಿ ಪಡೆದುಕೊಳ್ಳಬೇಕು ಎಂಬುದನ್ನು 300 ಜನ ಕಾರ್ಮಿಕರಿದ್ದರೆ ಅನುಮತಿ ಎಂದು ಬದಲಿಸಲಾಗಿದೆ. ಇಂತಹ ತಿದ್ದುಪಡಿಯನ್ನು ಈಗ ದೇಶದಲ್ಲೆಲ್ಲ ಕಡೆ ತರಲು ಪ್ರಯತ್ನ ನಡೆದಿದೆ ಅವರು ಎಚ್ಚರಿಸಿದರು.

ಗುತ್ತಿಗೆ ಕಾರ್ಮಿಕರಿಗೂ ಕಾರ್ಖಾನೆ ಮಾಲೀಕರಿಗೂ ಯಾವುದೇ ಸಂಬಂಧ ಇಲ್ಲ ಎಂದು ಕಾನೂನು ತಿದ್ದುಪಡಿ ತರಲಾಗುತ್ತಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ. ಕಾರ್ಮಿಕರ ಕನಿಷ್ಠ ಹಕ್ಕು ರಕ್ಷಣೆ ಮಾಡುವ ಹೊಣೆ ಮಾಲಿಕರಿಗೆ ಇದ್ದೇ ಇರುತ್ತದೆ ಎಂದೂ ಪ್ರಸನ್ನ ಕುಮಾರ್ ಅವರು ಪ್ರತಿಪಾದಿಸಿದರು.

ಎಐಯುಟಿಯುಸಿಯ ರಾಜ್ಯ ಕಾರ್ಯದರ್ಶಿ ಸೋಮಶೇಖರ್, ಟಿಯುಸಿಸಿ ರಾಜ್ಯ ಅಧ್ಯಕ್ಷ ಜಿ.ಆರ್. ಶಿವಶಂಕರ್, ಎಐಸಿಸಿಟಿಯು ಶಂಕರ್, ವಿಮಾ ನೌಕರರ ಸಂಘದ ವಲಯ ಕಾರ್ಯದರ್ಶಿ ಗೀತಾ, ಬ್ಯಾಂಕ್ ನೌಕರರ ಸಂಘದ ಸಂಚಾಲಕರಾದ ಹೆಚ್. ವಸಂತ ರೈ ಮಾತನಾಡಿದರು.

ಸಿಐಟಿಯು ರಾಜ್ಯ ಅಧ್ಯಕ್ಷರಾದ ವಿಜೆಕೆ ನಾಯರ್, ಬಿಎಂಎಸ್ ರಾಜ್ಯ ಅಧ್ಯಕ್ಷರಾದ ರಾಮಕೃಷ್ಣ ಪೂಂಜಾ, ಎಐಯುಟಿಯುಸಿಯ ಪ್ರಕಾಶ, ಎಐಸಿಟಿಯು ಅಪ್ಪಣ್ಣ, ಟಿಯುಸಿಸಿಯ ಸಿದ್ದರಾಮ ನೇತೃತ್ವದ ಅಧ್ಯಕ್ಷೀಯ ಮಂಡಳಿ ಸಮಾವೇಶವನ್ನು ನಿರ್ವಹಿಸಿತು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ, ಆರಂಭದಲ್ಲಿ ಸ್ವಾಗತಿಸಿ ಪ್ರಸ್ತಾವಿಕ ಮಾತುಗಳನ್ನು ಆಡಿದರು. ಬಿಎಂಎಸ್ ರಾಜ್ಯ ಉಪಾಧ್ಯಕ್ಷರಾದ ಸೂರ್ಯನಾರಾಯಣ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಕೊನೆಯಲ್ಲಿ ಎಐಟಿಯುಸಿ ರಾಜ್ಯ ಕಾರ್ಯದರ್ಶಿ ವಿಜಯಭಾಸ್ಕರ್ ವಂದನಾರ್ಪಣೆ ಮಾಡಿದರು. ಸಮಾವೇಶದಲ್ಲಿ ಟಿವಿ–9 ಪ್ರಸಾರವನ್ನು ತಡೆಹಿಡಿದಿರುವ ಕ್ರಮವನ್ನು ಖಂಡಿಸಿ ನಿರ್ಣಯ ಅಂಗೀಕರಿಸಲಾಯಿತು. ಮತ್ತು ಡಿಸೆಂಬರ್ 5 ರಂದು ನಡೆಯುವ ದೇಶವ್ಯಾಪಿ ಪ್ರತಿಭಟನಾ ಪ್ರದರ್ಶನ ಯಶಸ್ವಿಗೊಳಿಸಲು ನಿರ್ಧರಿಸಲಾಯಿತು. ●

# ಸಿಪಿಐ(ಎಂ) 21ನೇ ಮಹಾಧಿವೇಶನದ ಸ್ವಾಗತ ಸಮಿತಿ ರಚನೆ

ಸಿ.ಪಿ.ಐ(ಎಂ) ನ 21ನೇ ಮಹಾಧಿವೇಶನವು ಆಂಧ್ರಪ್ರದೇಶದ ವಿಶಾಖಪಟ್ಟಣಂ ನಗರದಲ್ಲಿ 2015, ಏಪ್ರಿಲ್ 14 ರಿಂದ 19 ರ ವರೆಗೆ ನಡೆಯಲಿದೆ. ಅಧಿವೇಶನವನ್ನು ಅಭೂತಪೂರ್ವವಾಗಿ ಯಶಸ್ವಿಗೊಳಿಸಲು ಆಂಧ್ರಪ್ರದೇಶ ಮತ್ತು ತೆಲಂಗಾಣ ಎರಡೂ ರಾಜ್ಯಗಳ 70 ಜನ ಪ್ರಮುಖರನ್ನು ಒಳಗೊಂಡ ಸ್ವಾಗತ ಸಮಿತಿಯನ್ನು ನವೆಂಬರ್ 6 ರಂದು ವಿಜಯವಾಡದಲ್ಲಿ ರಚಿಸಲಾಯಿತು. ಪಾಟೂರು ರಾಮಯ್ಯ ಗೌರವ ಅ ಧ್ಯಕ್ಷರಾಗಿ ಆಯ್ಕೆಯಾದ ಸಮಿತಿಗೆ ಪಿ. ಮಧು ಅಧ್ಯಕ್ಷರಾಗಿಯೂ, ಸಿ. ನರಸಿಂಗರಾವ್ ಪ್ರಧಾನ ಕಾರ್ಯದರ್ಶಿಯಾಗಿಯೂ, ಎಸ್. ಪುಣ್ಯವತಿ ಖಜಾಂಚಿಯಾಗಿಯೂ, ಬಿ.ವಿ. ರಾಘವಲು, ತಮ್ಮಿನೇಣಿ ವೀರಭದ್ರಂ, ವಿ. ಶ್ರೀನಿವಾಸ ರಾವ್, ಎಂ.ಎ. ಗಫೂರ್, ಮಲ್ಲು ಸ್ವರಾಜ್ಯಂ, ಎಸ್. ವೀರಯ್ಯ, ಎಂ.ವಿ.ಎಸ್. ಸರ್ಮಾ ಉಪಾಧ್ಯಕ್ಷರಾಗಿಯೂ, ವೈ. ವೆಂಕಟೇಶ್ವರ ರಾವ್, ವಿ. ಕೃಷ್ಣಯ್ಯ, ಡಾ. ಮಿದಿಯಾಂ ಬಾಬುರಾವ್ ಕಾರ್ಯದರ್ಶಿಗಳಾಗಿಯೂ ಮತ್ತು ಕೆ. ಲೋಕನಾಥಂ ಹಾಗೂ ಬಿ. ಗಂಗಾರಾವ್ ಸಂಘಟನಾ ಕಾರ್ಯದರ್ಶಿಗಳಾಗಿಯೂ ಆಯ್ಕೆಯಾಗಿದ್ದಾರೆ ಅಲ್ಲದೆ ಸಮಿತಿಯ ಸದಸ್ಯರಾಗಿ 54 ಜನ ಆಯ್ಕೆಯಾಗಿದ್ದಾರೆ.

ವಿಜಯವಾಡದ ಪಕ್ಷದ ಆಂಧ್ರಪ್ರದೇಶ ರಾಜ್ಯ ಸಮಿತಿ ಕಾರ್ಯಾಲಯದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಪಕ್ಷದ ಪೊಲಿಟ್ ಬ್ಯೂರೊ ಸದಸ್ಯರಾದ ಬಿ.ವಿ. ರಾಘವಲು, 'ಪಕ್ಷದ ಕೇಂದ್ರ ಸಮಿತಿಯ ತೀರ್ಮಾನದಂತೆ, ಪಕ್ಷದ 21 ನೇ ಮಹಾಧಿವೇಶನವನ್ನು ರಾಜ್ಯದ ಕಾರ್ಮಿಕ ವರ್ಗದ ಅತಿ ದೊಡ್ಡ ಕೇಂದ್ರವಾಗಿರುವ ವಿಶಾಖಪಟ್ಟಣಂ ನಗರದಲ್ಲಿ ನಡೆಯಲಿದೆ. ಪಕ್ಷದ ಮಹಾಧಿವೇಶನದಲ್ಲಿ ಪಕ್ಷದ ರಾಜಕೀಯ ದೋರಣೆಯನ್ನು ವಿವರವಾದ ಚರ್ಚೆಗೆ ಒಳಪಡಿಸಲಾಗುವುದು ಮತ್ತು ಮುಂದಿನ ರಾಜಕೀಯ ದಾರಿಯನ್ನು ಸ್ಪಷ್ಟಪಡಿಸಿಕೊಳ್ಳಲಾಗುವುದು. ಕಳೆದ 20 ವರ್ಷಗಳಲ್ಲಿ ದೇಶದ ಎಲ್ಲ ಸ್ತರಗಳಲ್ಲಿ ಅನೇಕ ಬದಲಾವಣೆಗಳು ಆಗಿವೆ. ಈ ಬದಲಾವಣೆಗಳ ಪರಿಣಾಮವನ್ನು ಅಧ್ಯಯನ ಮಾಡಲಾಗುತ್ತಿದೆ. ಪಕ್ಷದ ಸಂಘಟನೆಯನ್ನು ಮತ್ತು ಸಾಮೂಹಿಕ ಚಳುವಳಿಗಳನ್ನು ಬಲಪಡಿಸುವ ಕುರಿತು ಅಧಿವೇಶನದಲ್ಲಿ ಚರ್ಚಿಸಲಾಗುವುದು ಎಂದು ಅವರು ಹೇಳಿದರು. ಅವರ ಜತೆಯಲ್ಲಿ ಪಾಟೂರು ರಾಮಯ್ಯ, ಪಿ. ಮಧು, ಸಿ. ನರಸಿಂಗ ರಾವ್ ಉಪಸ್ಥಿತರಿದ್ದರು.

## ಖಾಸಗಿ ಶಾಲೆಗಳ ಶುಲ್ಕ ನಿಗದಿ ಬಗ್ಗೆ ದುಂಡು ಮೇಜಿನ ಸಭೆ :

ಖಾಸಗಿ ಶಾಲೆಗಳ ಶುಲ್ಕ ನಿಗದಿ ಕರಡು ವರದಿಯಲ್ಲಿರುವ ಅಪಾಯಗಳು ಕುರಿತು ಎಸ್‌ಎಫ್‌ಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ವತಿಯಿಂದ ನವಂಬರ್ 22, 2014 ರಂದು ಮಂಗಳೂರಿನಲ್ಲಿ ಸಮಾಲೋಚನಾ ಸಭೆ ಜರಗಿತು. ಸರಕಾರವು ಸಾರ್ವಜನಿಕ ಸಮಾಲೋಚನೆಗೆಂದು ಸಿದ್ಧಪಡಿಸಿದ ವರದಿಯಲ್ಲಿ ಖಾಸಗಿ ಶಾಲೆಗಳು ಇನ್ನೂ ಹೆಚ್ಚು ವಾಣಿಜ್ಯ ದೃಷ್ಟಿಯಿಂದ ಶಿಕ್ಷಣ ಸಂಸ್ಥೆ ನಡೆಸಲು ಅನುಕೂಲ ಮಾಡಿಕೊಟ್ಟಂತಾಗಿದೆ ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು. ಶಾಲೆಗಳ ಶ್ರೇಣೀಕರಣ, ಉಳ್ಳವರಿಗೆ ಶಿಕ್ಷಣ, ಮಕ್ಕಳ ನಡುವೆ ತಾರತಮ್ಯ-ವರದಿಯ ಅಭಿಪ್ರಾಯಗಳು ಎಂದು ಸಭೆ ಅಭಿಪ್ರಾಯ ಪಟ್ಟು, ವರದಿಯನ್ನು ಹಿಂತೆಗೆದುಕೊಳ್ಳಲು ರಾಜ್ಯ ಸರಕಾರವನ್ನು ಆಗ್ರಹಿಸಿತು.

ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ ವರದಿಯ ಅಂಶಗಳನ್ನು ವಿಶ್ಲೇಷಿಸಿ ಮಾತನಾಡಿದರು. ಸಭಿಕರ ಪರವಾಗಿ ವಾಸುದೇವ ಉಳ್ಳಾಲ, ಜೀವನ್‌ರಾಜ್ ಕುತ್ತಾರ್, ಎಚ್.ಕೆ.ರಾಘವೇಂದ್ರ ರಾವ್ ವಿಚಾರ ಮಂಡಿಸಿದರು. ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ನಿತಿನ್ ಕುತ್ತಾರ್, ಕಾರ್ಯದರ್ಶಿ ಚರಣ್ ಪಂಜಿಮೊಗರು ಹಾಗೂ ಹಂಝ ಕಿನ್ಯ ಸಂವಾದವನ್ನು ನಿರ್ವಹಣೆ ಮಾಡಿದರು.




ವರದಿ : ವಾ. ಉಚ್ಚಿಲ್

# ಕಸ್ತೂರಿ ರಂಗನ್ ವರದಿ ಜಾರಿ ವಿರುದ್ಧ ಪ್ರತಿಭಟನೆ



ಬೆಳ್ತಂಗಡಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕುಗಳಲ್ಲಿ ಲೋಕಸಭಾ ಚುನಾವಣಾ ಪ್ರಚಾರದ ವೇಳೆ, ತಾನು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಕಸ್ತೂರಿ ರಂಗನ್ ವರದಿ ಜಾರಿ ಮಾಡುವುದಿಲ್ಲವೆಂದು ಬಿಜೆಪಿ ಬೆಂಬಲಿಗರು ಘೋಷಿಸಿದ್ದರು. ಕಸ್ತೂರಿ ರಂಗನ್ ವರದಿ ಕಾಂಗ್ರೆಸ್ ಪಕ್ಷದ ಕೂಸಾಗಿದ್ದು, ತಾವು ಅದನ್ನು ವಿರೋಧಿಸುವುದಾಗಿ ಹೇಳಿದ್ದರು. ಅದೇ ಬಿಜೆಪಿ ಕೇಂದ್ರ ಸರಕಾರ ಇಂದು ಸುಪ್ರೀಂ ಕೋರ್ಟಿಗೆ ಪ್ರಮಾಣ ಪತ್ರ ಸಲ್ಲಿಸಿ, ಕಸ್ತೂರಿ ರಂಗನ್ ವರದಿಯನ್ನು ಚಾಚೂ ತಪ್ಪದೆ ಜಾರಿಗೊಳಿಸುವುದಾಗಿ ಹೇಳಿ ಮತದಾರರಿಗೆ ದ್ರೋಹ ಬಗೆಯುತ್ತಿದೆ. ಇನ್ನೊಂದೆಡೆ ಕಾಂಗ್ರೆಸ್ ಪಕ್ಷವು ವರದಿ ಜಾರಿ ವಿರುದ್ಧ ಸ್ವರ ಎತ್ತುತ್ತಿದೆ. ಈ ಎರಡೂ ಪಕ್ಷಗಳ ದ್ವಿಮುಖ ನೀತಿಯನ್ನು ಖಂಡಿಸಿ, ಹಾಗೂ ಪರಿಸರ ರಕ್ಷಣೆ ಹೆಸರಲ್ಲಿ ಪಶ್ಚಿಮ ಘಟ್ಟದ ಹಿಂದುಳಿದ ಗ್ರಾಮಗಳ ಅಭಿವೃದ್ಧಿಗೆ ಮಾರಕವಾಗಿರುವ ಕಸ್ತೂರಿ ರಂಗನ್ ವರದಿಯನ್ನು ಜಾರಿ ಮಾಡಬಾರದೆಂದು ಆಗ್ರಹಿಸಿ ಬೆಳ್ತಂಗಡಿ ತಾಲೂಕಿನ ನಾರಾವಿಯಲ್ಲಿ ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಪಕ್ಷದ ವತಿಯಿಂದ ನವಂಬರ್ 24, 2014 ರಂದು ಪ್ರತಿಭಟನೆ ನಡೆಸಲಾಯಿತು.

ನಾರಾವಿ ಸಮೀಪದ ಮಲೆಗಳಲ್ಲಿ ಆದಿವಾಸಿ ಮಲೆಕುಡಿಯರು ಹೆಚ್ಚಿಗೆ ವಾಸವಾಗಿದ್ದಾರೆ. ಮೊದಲೇ ಕುದುರೆಮುಖ ರಾಷ್ಟ್ರೀಯ ಅಭಯಾರಣ್ಯ ಯೋಜನೆಯ ಹೆಸರಲ್ಲಿ ಒಕ್ಕಲೆಬ್ಬಿಸಲು ಸರಕಾರ ಸನ್ನದ್ಧವಾಗಿದ್ದು, ಕಸ್ತೂರಿ ರಂಗನ್ ವರದಿ ಜಾರಿಯಾದಲ್ಲಿ ಯಾವೊಂದೂ ಅಭಿವೃದ್ಧಿಯಿಂದಲೂ ಅಲ್ಲಿನ ಜನವಿಭಾಗ ವಂಚಿತವಾಗುವುದು. ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿ ಕಾರ್ಯದರ್ಶಿ ಬಿ.ಎಂ.ಭಟ್, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ತಾಲೂಕು ಅಧ್ಯಕ್ಷ ವಸಂತ ನಡ, ಕಾರ್ಯದರ್ಶಿ ವಿಠಲ ಮಲೆಕುಡಿಯ, ದಲಿತ ಹಕ್ಕುಗಳ ತಾಲೂಕು ಸಮಿತಿ ಅಧ್ಯಕ್ಷ ಶೇಖರ ಲಾಯಿಲ ಮತ್ತಿತ್ತರರು ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.

**ನಿಟ್ಟೆ ಲೆಮಿನಾ ಕಾರ್ಮಿಕರ ಪ್ರತಿಭಟನೆ :**

ಕಾರ್ಕಳ ತಾಲೂಕಿನ ನಿಟ್ಟೆ ಲೆಮಿನಾ ಫೌಂಡ್ರೀಸ್ ಲಿಮಿಟೆಡ್‌ನ ಆಡಳಿತ ಮಂಡಳಿಯಿಂದ ಅಲ್ಲಿನ ಕಾರ್ಮಿಕರಿಗಾಗುತ್ತಿರುವ ಅನ್ಯಾಯದ ಕುರಿತು ಕಾರ್ಮಿಕರು ಬೀದಿಗಿಳಿದು ನವಂಬರ್ 21, 2014 ರಿಂದ ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ.



ಕಾರ್ಮಿಕರಿಗೆ ಕನಿಷ್ಠ ರೂ.1,150 ವೇತನ ಏರಿಕೆ ಮಾಡಬೇಕೆಂಬುದು ಕಾರ್ಮಿಕ ಸಂಘಟನೆಯ ಬೇಡಿಕೆಯಾಗಿದೆ. ಆಡಳಿತ ವರ್ಗ ತನ್ನ ಹಠಮಾರಿತನದ ನಿಲುವಿನಿಂದ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುತ್ತಿಲ್ಲ. ಆದ್ದರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಸಿಐಟಿಯು ಕಾರ್ಮಿಕ ಮುಖಂಡ ವಸಂತ ಆಚಾರಿ ಹೇಳಿದ್ದಾರೆ. ಕಂಪೆನಿಯ ಮುಂಭಾಗದಲ್ಲಿ ಮುಷ್ಕರ ಮುಂದುವರಿದಿದೆ.

ನವಂಬರ್ 21 ರಂದು ನಿಟ್ಟೆಯಿಂದ ಸುಮಾರು 12 ಕಿ.ಮೀ.ದೂರದ ಕಾರ್ಕಳದವರೆಗೆ ಕಾರ್ಮಿಕರು ಪಾದಯಾತ್ರೆ ನಡೆಸಿ, ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

**ಉಳ್ಳಾಲ ವಲಯದಲ್ಲಿ ಸಿಪಿಐ(ಎಂ) ಸ್ಥಳೀಯ ಸಮಿತಿ ಸಮ್ಮೇಳನಗಳು :**

ಉಳ್ಳಾಲ ವಲಯದಲ್ಲಿ ಉಳ್ಳಾಲ, ಮುನ್ನೂರು ಮತ್ತು ಕೋಟೆಕಾರು ಮೂರು ಸಿಪಿಐ(ಎಂ) ಸ್ಥಳೀಯ ಸಮಿತಿಗಳಿದ್ದು, ಈ ಸ್ಥಳೀಯ ಸಮಿತಿಗಳ ಸಮ್ಮೇಳನವು ಕ್ರಮವಾಗಿ ನವಂಬರ್ 9, 16 ಮತ್ತು 23 ರಂದು ನಡೆಯಿತು. ಎಲ್ಲಾ ಸಮ್ಮೇಳನಗಳನ್ನೂ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಯಾದವ ಶೆಟ್ಟಿ ಉದ್ಘಾಟಿಸಿ ಮಾತನಾಡಿದರು.

ಉಳ್ಳಾಲ ಸ್ಥಳೀಯ ಸಮಿತಿ ಸಮ್ಮೇಳನವು ತೊಕ್ಕೊಟಿನಲ್ಲಿ ನಡೆಯಿತು. ಪದ್ಮಾವತಿ ಶೆಟ್ಟಿಯವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲಿಯಾನ್ ಸಮಾರೋಪ ಭಾಷಣ ಮಾಡಿದರು. ಸಮ್ಮೇಳನವು ಪದ್ಮಾವತಿ ಶೆಟ್ಟಿ ಅವರು ಕಾರ್ಯದರ್ಶಿಯಾಗಿರುವ 13 ಮಂದಿ ಸದಸ್ಯರಿರುವ ಸ್ಥಳೀಯ ಸಮಿತಿಯನ್ನು ಆಯ್ಕೆ ಮಾಡಿದೆ.

ಮುನ್ನೂರು ಸ್ಥಳೀಯ ಸಮಿತಿ ಸಮ್ಮೇಳನವು ಹರೇಕಳದಲ್ಲಿ ನಡೆಯಿತು. ರಫೀಕ್ ಹರೇಕಳ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಸಂತ ಆಚಾರಿ ಮತ್ತು ಕೃಷ್ಣಪ್ಪ ಸಾಲ್ಯಾನ್ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದರು. ಸಮ್ಮೇಳನವು ಜಯಂತ ನಾಯಕ್ ಕಾರ್ಯದರ್ಶಿಯಾಗಿರುವ 12 ಮಂದಿಯ ಸ್ಥಳೀಯ ಸಮಿತಿಯನ್ನು ಆಯ್ಕೆ ಮಾಡಿರುತ್ತದೆ. ಸಂಜೆ ಹರೇಕಳದ ನೇತ್ರಾವತಿ ಹೊಳೆ ಕಡವಿನ ಬಳಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಸಂತ ಆಚಾರಿ, ಯಾದವ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಕೃಷ್ಣಪ್ಪ ಸಾಲ್ಯಾನ್ ಅಧ್ಯಕ್ಷತೆ ವಹಿಸಿದ್ದರು.

ಕೋಟೆಕಾರು ಸ್ಥಳೀಯ ಸಮಿತಿ ಸಮ್ಮೇಳನವು ತೊಕ್ಕೊಟಿನಲ್ಲಿ ಜರಗಿತು. ಸುಂದರ ಕುಂಪಲ, ಈಶ್ವರ ಶೆಟ್ಟಿ ಇವರಿರುವ ಅಧ್ಯಕ್ಷೀಯ ಮಂಡಳಿ ಸಮ್ಮೇಳನದ ಕಲಾಪಗಳನ್ನು ನಡೆಸಿಕೊಟ್ಟಿತು. ಪಕ್ಷದ ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಸಮಾರೋಪ ಭಾಷಣ ಮಾಡಿದರು. ಸಮ್ಮೇಳನವು ಬಾಬು ಪಿಲಾರು ಕಾರ್ಯದರ್ಶಿಯಾಗಿರುವ 13 ಮಂದಿ ಇರುವ ಕೋಟೆಕಾರು ಸ್ಥಳೀಯ ಸಮಿತಿಯನ್ನು ಆಯ್ಕೆ ಮಾಡಿರುತ್ತದೆ.

**ಮೂಡಬಿದ್ರೆ ವಲಯ ಸಿಪಿಐ(ಎಂ) ಸಮ್ಮೇಳನ:**

ಸಿಪಿಐ(ಎಂ) ಮೂಡಬಿದ್ರೆ ವಲಯ ಸಮ್ಮೇಳನವು ನವಂಬರ್ 25 ರಂದು ಮೂಡಬಿದ್ರೆಯಲ್ಲಿ ನಡೆದಿದ್ದು, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಸಮ್ಮೇಳನದಲ್ಲಿ ಪಕ್ಷದ ಹಿರಿಯ ಸದಸ್ಯರಾದ ಸುಂದರ ಶೆಟ್ಟಿ ಮತ್ತು ಬಿರುಕುಲ ಇವರನ್ನು ಸನ್ಮಾನಿಸಲಾಯಿತು. ಯಾದವ ಶೆಟ್ಟಿ ವಲಯ ಸಮಿತಿ ಕಾರ್ಯದರ್ಶಿಯಾಗಿ ಪುನರಾಯ್ಕೆ ಆಗಿರುತ್ತಾರೆ. ಅವರನ್ನೊಳಗೊಂಡ 9 ಮಂದಿಯ ವಲಯ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಸಮಾಜ ಮಂದಿರದಲ್ಲಿ ನಡೆದ ಸಾರ್ವಜನಿಕ ಸಭೆಗೆ ಮೊದಲು ಮೂಡಬಿದರೆ ಪೇಟೆಯಲ್ಲಿ ಪಕ್ಷದ ಬೆಂಬಲಿಗರ ಮೆರವಣಿಗೆ ನಡೆಯಿತು. ರಮಣಿ ಮೂಡಬಿದ್ರೆ ಸಭೆಯ ಅಧ್ಯಕ್ಷತೆ ವಹಿಸಿದ್ದರು. ●

## ಈ ವಾರ.........

ಪುಟ 3 ರಿಂದ

ಆದರೆ ಅಪಾರ ಪ್ರಮಾಣದ ಹಣ, ಬಲ, ಅಧಿಕಾರಗಳನ್ನು ಹೊಂದಿರುವ ಸಚಿವರೊಬ್ಬರು ಭಿನ್ನಾಭಿಪ್ರಾಯವಿದೆಯೆಂದು, ತನ್ನ ಸ್ವಾರ್ಥ ಹಿತಾಸಕ್ತಿಗೆ ಪೂರಕವಾಗಿಲ್ಲವೆಂದು ಕೇಬಲ್ ಸಂಘದವರ ಮೂಲಕ ದಮನದ ಕೃತ್ಯಗಳಿಗೆ ಮುಂದಾಗುವುದು ಉಗ್ರ ಖಂಡನೀಯ. ಮತ್ತು ಇದಕ್ಕೆ ಕುಣಿದಿರುವ ಕೇಬಲ್ ಸಂಘದ ಕ್ರಮವೂ ಖಂಡನಾರ್ಹ.

ಈ ಪ್ರಕರಣವು ಬಿಗಾಡಾಯಿಸುವ ಹಂತಕ್ಕೆ ಹೋಗುವಾಗ ಮುಖ್ಯಮಂತ್ರಿಗಳು ಮಧ್ಯಪ್ರವೇಶಿಸಿ ಚಾನೆಲ್ ಪ್ರಸಾರವಾಗುವಂತೆ ಕ್ರಮ ವಹಿಸಿ ಬಗೆಹರಿಸಿದ್ದಾರಂತೆ. (ಈ ನಡುವೆ ಸರಕಾರ/ಸಚಿವ, ಚಾನೆಲ್ ಮತ್ತು ಕೇಬಲ್ ಸಂಘಗಳ ನಡುವೆ ಆದ ಡೀಲ್ ಏನು ಅಂತಾ ಬಹಿರಂಗವಾಗಿಲ್ಲ) ಆದರೆ ಅವರೂ ಸಹ ದಮನದ ಕೃತ್ಯಗಳನ್ನು ತಡೆಯುವ, ಕಾರಣರಾದವರಿಗೆ ಎಚ್ಚರಿಸುವ ಗೋಜಿಗೇ ಹೋಗಿಲ್ಲ! ಅಭಿವ್ಯಕ್ತಿ ಸ್ವಾತಂತ್ರ್ಯ ಅಬಾಧಿತವೆಂಬ ಸಂದೇಶವನ್ನೂ ನೀಡಿಲ್ಲ. ಇಂತಹ 'ಖಾಜಿ ನ್ಯಾಯ'ವು 'ರಾಜೀ ನ್ಯಾಯವಾಗಿ' ಸಿದ್ದರಾಮಯ್ಯನವರ ಕುರ್ಚಿ ಅಲುಗಾಟದ ಕಂಪನಕ್ಕೆ ಸ್ವಲ್ಪ ಮಾತ್ರ ಸಾಂತ್ವನ ಹೇಳೀತು ಅಷ್ಟೇ.

ಮೂಲತಃ ಕಾಂಗ್ರೆಸ್ ಪಕ್ಷವು ಪ್ರಜಾಪ್ರಭುತ್ವ ವಿರೋಧಿಯಾಗಿ ಸರ್ವಾಧಿಕಾರಿ ಪ್ರವೃತ್ತಿಯನ್ನು ತನ್ನ ಅಂತರ್ಗತವಾಗಿ ಹೊಂದಿದೆ. ರಾಜ್ಯದ ಕಾಂಗ್ರೆಸ್ ಸರಕಾರ, ಅದರ ನಾಯಕರು ಅದಕ್ಕಿಂತ ವ್ಯತಿರಿಕ್ತವಾಗಿ ಹೇಗೆ ನಡೆದುಕೊಂಡಾರು? ಉದಾರೀಕರಣದ ಮಂತ್ರಕ್ಕೆ ಅನುಗುಣವಾಗಿ ಚಾನೆಲ್‌ಗಳು, ಕೇಬಲ್ ಖಾಸಗಿ ಪ್ರಸಾರದ ಅನಿಷ್ಟಗಳ ಜನಕರೂ ಇವರೇ ಆಗಿರುವುದರಿಂದ ಮೂಲಕ್ಕೆ ಕೈಹಾಕಲಾದರೂ ಸಾಧ್ಯವಲ್ಲಿ?

ಈ ಶಕ್ತಿಶಾಲಿ ಮಾಧ್ಯಮದ 'ಬಹುಮುಖ' ಪ್ರಯೋಜನವನ್ನು ಪಡೆಯಲು ಎಲ್ಲರೂ ಹವಣಿಸುತ್ತಾರೆ. ತಮ್ಮ ತುತ್ತೂರಿಯಾಗಿರಬೇಕೆಂದು ಆಳುವವರು, ಅಧಿಕಾರಸ್ಥರು ಬಯಸಿದರೆ, ಮಾಧ್ಯಮಗಳ ಮಾಲೀಕರು ತಮ್ಮ ತುತ್ತಿನ ಚೀಲವು ಕಾಂಚಾಣದ ಕಣಜವಾಗಬೇಕೆಂದು ಹಪಾಹಪಿಸುತ್ತಾರೆ. ಈಗಾಗಲೇ ವೃತ್ತ ಪತ್ರಿಕೆಗಳ ಪ್ರಸಾರದಲ್ಲಿ, ಅಲ್ಲಿನ ಅನಾರೋಗ್ಯಕಾರಿ ಸ್ಪರ್ಧೆಯಲ್ಲಿ ವಿತರಕರ ನಡುವೆ ಮಾಫಿಯಾಗಳ ಹಿಡಿತ, ಅನಾಹುತಕಾರಿ ಸಮರ ಜಾಗತಿಕವಾಗಿಯೂ, ದೇಶೀಯವಾಗಿಯೂ ನೋಡಿಯಾಗಿದೆ. ಈ ಕೇಬಲ್ ಪ್ರಸಾರಕರ ನಡುವೆ ಮಾಫಿಯಾಗಳ ದುಷ್ಕೃತ್ಯಕ್ಕೆ ಈ ಪ್ರಕರಣವೂ ಒಂದು ಜೀವಂತ ಸಾಕ್ಷಿ. ಇಲ್ಲಿ ಉಳ್ಳವರ 'ಅಭಿವೃದ್ಧಿ'ಯ ರಾಜಕಾರಣ, ಇದರ ಆಧಾರಿತ ಮಾಧ್ಯಮಗಳು, ಈ ಉದ್ದಿಮೆಯ ಶಕ್ತಿಗಳ ಎದುರಲ್ಲಿ ಗ್ರಾಹಕರಾದ ಜನರು ಬಲಿಗಳು.

**.......ಎದ್ದೇಳು ಗ್ರಾಹಕ, ಎದ್ದೇಳು!**

ಜನಶಕ್ತಿ
ಕನ್ನಡ ವಾರಪತ್ರಿಕೆ

# aÀÄÄRaÁqÀPÀ¼ÀaÏÕÀgÀPÁgÀ

**ಆರೆಸ್ಸೆಸ್‌ಗೆ ಆಗ ಕೇಂದ್ರ ಸರಕಾರವನ್ನು ರಚಿಸಲು ರಾಜಕೀಯ ಮಿತ್ರರನ್ನು ಆಕರ್ಷಿಸುವ ಅಗತ್ಯವಿತ್ತು, ಅದಕ್ಕೆ ಅಟಲ್ ಬಿಹಾರಿ ವಾಜಪೇಯಿ ಮುಖವಾಡವಾಗಿದ್ದರು. ಆ ಸತ್ಯವನ್ನು ಹೇಳಿದ್ದಕ್ಕಾಗಿ ಆಗಿನ ಪ್ರಭಾವಿ ಆರೆಸ್ಸೆಸ್ ಪ್ರಚಾರಕರನ್ನು ಹೊರಹಾಕಲಾಯಿತು. ಈಗ ಇಂತಹದೊಂದು ಮುಖವಾಡದ ಅಗತ್ಯ ಅವರಿಗಿದ್ದಂತಿಲ್ಲ. "ನಾವೇ ಆರೆಸ್ಸೆಸ್‌ನಿಂದ ಬಂದಿರುವಾಗ ಅದು ಯಾವ ಪ್ರಭಾವವನ್ನು ಬೀರಬೇಕಾಗಿದೆ?" ಎಂದಿರುವ ಗ್ರಹಮಂತ್ರಿಗಳೇ ಇದು ಆರೆಸ್ಸೆಸ್ ಸರಕಾರ ಎಂಬುದನ್ನು ಸ್ಪಷ್ಟಪಡಿಸಿದಂತಾಗಿದೆ.**



**ಒಂದೆಡೆ 'ಅಭಿವೃದ್ಧಿ', 'ಒಳ್ಳೆಯ ದಿನಗಳು ಬರಲಿವೆ' ಇತ್ಯಾದಿ ಆರ್ಥಿಕ ಭ್ರಮೆಗಳನ್ನು ಸೃಷ್ಟಿಸುವ, ಮತ್ತೊಂದೆಡೆ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಒಂದು ಮರಣಾಂತಿಕ ಮಿಶ್ರಣ ನಮ್ಮ ಜನತೆಯ ಮುಂದಿಟ್ಟಿದ್ದಾರೆ. ಇಂತಹ ವಿಷಮಿಶ್ರಣದ ಅಪಾಯದಿಂದ ನಮ್ಮ ಭಾರತವನ್ನು ಕಾಪಾಡಬೇಕಾಗಿದೆ.**

## ಸೀತಾರಾಮ್ ಯೆಚೂರಿ

ನರೇಂದ್ರ ಮೋದಿ ಆಂತರಿಕ ಸಮರಗಳಲ್ಲಿ ಗೆದ್ದು 2014ರ ಸಾರ್ವತ್ರಿಕ ಚುನಾವಣೆಗಳಲ್ಲಿ ಆರೆಸ್ಸೆಸ್/ಬಿಜೆಪಿ ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಅವರನ್ನು ಮುಂದಿಟ್ಟಾಗ ಆರೆಸ್ಸೆಸ್ ಕೊನೆಗೂ ತನ್ನ 'ಮುಖವಾಡ'ವನ್ನು ಕಳಚಿ ಹಾಕಲು ನಿರ್ಧರಿಸಿದೆ ಎನ್ನುವ ಸಂದರ್ಭ ಈ ಅಂಕಣದಲ್ಲಿ ಬಂದಿತ್ತು. 2002ರ ಕೋಮುವಾದಿ ಹತ್ಯಾಕಾಂಡದ ಪ್ರಧಾನ ಅಂಕಣಕಾರನಿಗೆ ಈ ಕಾರ್ಯವನ್ನು ಆರೆಸ್ಸೆಸ್/ಬಿಜೆಪಿ ವಹಿಸಿದಾಗ ಅವರ ನಿಜವಾದ ಅಜೆಂಡಾವನ್ನು, ಅಂದರೆ ಆಧುನಿಕ ಭಾರತೀಯ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಆರೆಸ್ಸೆಸ್ ಕಣ್ಣೋಟದ ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಅಜೆಂಡಾವನ್ನು ಅನುಸರಿಸಲು ಇನ್ನು ಮುಂದೆ ಅವರಿಗೆ ಒಂದು ಮುಖವಾಡದ ಅಗತ್ಯವಿಲ್ಲ ಎಂಬುದು ಸ್ಪಷ್ಟವಾಗಿತ್ತು.

ಎನ್‌ಡಿಎ ಅಡಿಯಲ್ಲಿ ಬಿಜೆಪಿ ನೇತೃತ್ವದ ಸಮ್ಮಿಶ್ರ ಕೂಟ ಅಟಲ್ ಬಿಹಾರಿ ವಾಜಪೇಯಿಯವರ ನೇತೃತ್ವದಲ್ಲಿ ಕೇಂದ್ರ ಸರಕಾರದ ಅಧಿಕಾರ ಸೂತ್ರಗಳನ್ನು ಹಿಡಿದಾಗ, ಆ ಪ್ರಧಾನ ಮಂತ್ರಿಯನ್ನು ಅಂದಿನ ಒಬ್ಬ ಪ್ರಭಾವಿ ಸಿದ್ಧಾಂತಿ ಮತ್ತು ಪ್ರಚಾರಕ ಒಂದು ಮುಖವಾಡ ಎಂದು ವರ್ಣಿಸಿದರು. ತಕ್ಷಣವೇ ಆ ಪ್ರಚಾರಕನನ್ನು ಸಂಘದಿಂದ ಹೊರಹಾಕಲಾಯಿತು, ಎಲ್ಲ ಹುದ್ದೆಗಳಿಂದ ತೆ-ಗೆದು ಹಾಕಲಾಯಿತು, ಆತ ಇಂದಿನ ವರೆಗೂ ಬಹುಷ್ಕೃತನಾಗಿಯೇ ಉಳಿದಿದ್ದಾರೆ. ಅವರು ಮಾಡಿದ್ದಿಷ್ಟೇ– ಸತ್ಯವನ್ನು ಹೇಳಿದ್ದು.

ಆರೆಸ್ಸೆಸ್‌ಗೆ ಆಗ ಕೇಂದ್ರ ಸರಕಾರವನ್ನು ರಚಿಸಲು ರಾಜಕೀಯ ಮಿತ್ರರನ್ನು ಆಕರ್ಷಿಸುವ ಅಗತ್ಯವಿತ್ತು, ಅದಕ್ಕೆ ಅಟಲ್ ಬಿಹಾರಿ ವಾಜಪೇಯಿ ಮುಖವಾಡವಾಗಿದ್ದರು. ಆ ಮುಖವಾಡದ ಹಿಂದೆ ಆರೆಸ್ಸೆಸ್ ತನ್ನ ಅಜೆಂಡಾವನ್ನು ಅವಿರತವಾಗಿ ಅನುಸರಿಸಿತು. ಈಗ ಬಿಜೆಪಿ ತಾನೇ ಬಹುಮತವನ್ನು (ನಿಜ, ಮತದಾನ ಮಾಡಿದವರ ಮತಗಳಲ್ಲಿ ಕೇವಲ 31ಶೇ. ವನ್ನು ಪಡೆದು) ಗಳಿಸಿರುವಾಗ ಇಂತಹದೊಂದು ಮುಖವಾಡದ ಅಗತ್ಯ ಇಲ್ಲ ಎಂದನಿಸಿರಬೇಕು.

ಈ ಬಗ್ಗೆ ಯಾರಿಗಾದರೂ ಇನ್ನೂ ಸಂದೇಹವಿದ್ದರೆ ಅದು ಈಗ ದೃಢಗೊಂಡಿದೆ. ನವಂಬರ್ 21, 2014ರಂದು ಆರಂಭವಾದ ಮೂರು ದಿನಗಳ ವಿಶ್ವ ಹಿಂದೂ ಮಹಾಸಮ್ಮೇಳನದ ಉದ್ಘಾಟನಾ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತ ವಿಹೆಚ್‌ಪಿ ಮುಖಂಡ ಅಶೋಕ ಸಿಂಘಲ್ ನರೇಂದ್ರ ಮೋದಿ 2014ರ ಲೋಕಸಭಾ ಚುನಾವಣೆಗಳಲ್ಲಿ ಭಾರತೀಯ ಜನತಾ ಪಕ್ಷವನ್ನು ವಿಜಯದತ್ತ ಮುನ್ನಡೆಸಿದರು ಎಂದು ಹಾಡಿ ಹೊಗಳಿದರು; ಎಂಟು ನೂರು ವರ್ಷಗಳ ನಂತರ ಅಧಿಕಾರ ಒಬ್ಬ ಸ್ವಾಭಿಮಾನಿ ಹಿಂದುವಿನ ಕೈಗೆ ಹಿಂದುರಿಗಿದೆ ಎಂದರು: ದಿಲ್ಲಿಯಲ್ಲಿ ಅಧಿಕಾರ "ಪ್ರಥ್ವಿರಾಜ ಚೌಹಾನನಿಂದ ಹೊರಟು ಹೋದ ಎಂಟುನೂರು ವರ್ಷಗಳ ನಂತರ ಅದು ಒಬ್ಬ ಸ್ವಾಭಿಮಾನಿ ಹಿಂದುವಿನ ಕೈಗಳಿಗೆ ಬಂದಿದೆ. 800 ವರ್ಷಗಳ ನಂತರ ಇದು ಸಂಭವಿಸಿದೆ."

ಈ ಮಹಾಸಮ್ಮೇಳನ "ಎಲ್ಲ ಹಿಂದುಗಳು.... ಒಂದು ನೇತೃತ್ವದ ಪಾತ್ರ ವಹಿಸಿ ಜಗತ್ತಿಗೆ ನೇತೃತ್ವ ಕೊಡಬೇಕು" ಎಂಬ ಕರೆಯೊಂದಿಗೆ ಮುಕ್ತಾಯವಾಯಿತು.

ಇದು ಒಬ್ಬ ವಿಹೆಚ್‌ಪಿ ಮುಖಂಡನ, ಕೇವಲ ಧೂಳೆಬ್ಬಿಸುವಾತನ ಹೇಳಿಕೆಗಳೆಂದು ಉಪೇಕ್ಷಿಸದಿರಲಿ ಎಂದು ನವಂಬರ್ 22ರಂದು ಸ್ವತಃ ಕೇಂದ್ರ ಗ್ರಹಮಂತ್ರಿಗಳೇ ಈ ರೀತಿಯ ಮುಖವಾಡ ಕಳಚಿದ್ದನ್ನು ದೃಢಪಡಿಸಿದರು. ಬಿಜೆಪಿ ಸರಕಾರದ ಮೇಲೆ ಆರಸ್ಸೆಸ್ ರಿಮೋಟ್ ಕಂಟ್ರೋಲ್ ಹೊಂದಿದೆ ಎಂಬ ಮಾತುಗಳನ್ನು ಅಲ್ಲಗಳೆದ ರಾಜನಾಥ್ ಸಿಂಗ್ ಅದರ ಅಗತ್ಯವೇನೂ ಇಲ್ಲ ಎಂದು ಸ್ಪಷ್ಟೀಕರಿಸಿದರು. "ಆರೆಸ್ಸೆಸ್ ಹೊರಗಿನ ಶಕ್ತಿಯೇನೂ ಅಲ್ಲ, ನಾನು ಅರೆಸ್ಸೆಸ್‌ನಿಂದ ಬಂದಿದ್ದೇನೆ, ಪ್ರಧಾನ ಮಂತ್ರಿಗಳು ಒಬ್ಬ ಆರೆಸ್ಸೆಸ್ ಸ್ವಯಂಸೇವಕರು. ನಾವು ಬಾಲ್ಯದಿಂದಲೂ ಆರೆಸ್ಸೆಸ್ ಸದಸ್ಯರಾಗಿದ್ದೇವೆ, ನಾವು ಬದುಕಿರುವ ವರೆಗೂ ಆಗಿರುತ್ತೇವೆ" ಎಂದು ಅವರು ಇತ್ತೀಚಿನ 'ಹಿಂದುಸ್ತಾನ್ ಟೈಮ್ಸ್ ಲೀಡರ್‌ಶಿಪ್ ಸಮ್ಮಿಟ್' ನಲ್ಲಿ ಹೇಳಿದರು.

ಮುಂದುವರೆದು "ನಾವೇ ಆರೆಸ್ಸೆಸ್‌ನಿಂದ ಬಂದಿರುವಾಗ ಅದು ಯಾವ ಪ್ರಭಾವವನ್ನು ಬೀರಬೇಕಾಗಿದೆ? ಒಂದು ಭಿನ್ನ ಗುರುತಿನ, ಒಂದು ಭಿನ್ನ ಸಿದ್ಧಾಂತದ ಯಾವುದೇ ಸಂಘಟನೆ ಪ್ರಭಾವ ಬೀರುತ್ತಿದ್ದರೆ ಈ ತರ್ಕವನ್ನು ಅರ್ಥ ಮಾಡಿಕೊಳ್ಳಬಹುದಿತ್ತು." ಎಂದು ಅವರು ಹೇಳಿದರು. ಅಂದರೆ, ಇದು ಆರೆಸ್ಸೆಸ್ ಸರಕಾರ ಎಂಬುದು ಸ್ಪಷ್ಟ.

ಇತ್ತೀಚಿನ ಈ ಹೇಳಿಕೆಗಳನ್ನು ಈ ಹಿಂದೆ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್‌ರ ಪ್ರತಿಪಾದನೆಯ ಜತೆಗಿಟ್ಟು ನೋಡಬೇಕಾಗಿದೆ. ಬ್ರಿಟನ್ನಿನಲ್ಲಿ ಜೀವಿಸಿರುವವರು ಬ್ರಿಟಿಶರು ಎಂದು ಕರೆಯಲ್ಪಡುತ್ತಾರೆ, ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಇರುವವರು ಅಮೆರಿಕನ್ನರು ಎಂದು ಕರೆಸಿಕೊಳ್ಳುತ್ತಾರೆ. ಹಾಗಿರುವಾಗ ಹಿಂದುಸ್ತಾನದಲ್ಲಿ ಇರುವವರೆಲ್ಲ ಹಿಂದುಗಳು ಎಂದ ಅವರು ಹಿಂದುಸ್ತಾನದ ಈ ಭೂಮಿಗಳಲ್ಲಿ ವಾಸಿಸಿದ ಎಲ್ಲ ಜನಗಳ ಸಂಸ್ಕೃತಿ ಸದಾ ಹಿಂದುತ್ವವೇ ಆಗಿತ್ತು ಎಂದರು.

ವಿಶ್ವ ಹಿಂದು ಮಹಾಸಮ್ಮೇಳನದ ವಿವಿಧ ಅಧಿವೇಶನಗಳಲ್ಲಿ ಒಂದು ಹಿಂದು ಶೈಕ್ಷಣಿಕ ಸಮ್ಮೇಳನದ ಮೇಲೆ ಒತ್ತು ನೀಡಲಾಯಿತು. ನಾಗರಿಕತೆಯ ಪುನರುಜ್ಜೀವನಕ್ಕಾಗಿ(ಹಿಂದು ಪುನರುಜ್ಜೀವನಕ್ಕಾಗಿ ಎಂದು ಓದಿಕೊಳ್ಳಿ) ಶೈಕ್ಷಣಿಕ ಸಂಪನ್ಮೂಲಗಳನ್ನು ಸೃಷ್ಟಿಸುವುದು ಮತ್ತು ಅಂತಹ ಒಂದು ಜಾಲವನ್ನು ನಿರ್ಮಿಸುವುದು ಈ ಸಮ್ಮೇಳನದ ವಿಷಯವಾಗಿರಬೇಕು ಎಂದು ಹೇಳಲಾಗಿದೆ. ಇಂತಹ ಪುನರುಜ್ಜೀವನಕ್ಕೆ ನೆರವಾಗಬಲ್ಲ 'ಹಿಂದು' ಮೌಲ್ಯಗಳನ್ನು ಪ್ರೋತ್ಸಾಹಿಸಲು ಶಿಕ್ಷಣ ವ್ಯವಸ್ಥೆಯ ಜೀರ್ಣೋದ್ದಾರ ಕೆಲಸ ಆಗಲೇ ಆರಂಭವಾಗಿದೆ. ಆರೆಸ್ಸೆಸ್ ಸದಾ ಕೇಂದ್ರ ಸರಕಾರದ ಮೇಲಿನ ತನ್ನ ಹತೋಟಿಯನ್ನು ಪಠ್ಯಕ್ರಮವನ್ನು ಬದಲಿಸಲು ಮತ್ತು ಅದಕ್ಕನುಗುಣವಾಗಿ ಭಾರತೀಯ ಇತಿಹಾಸದ ಪುನರ್ಲೇಖನ ಮಾಡಲು ಬಳಸಿದೆ. ಹಿಂದಿನ ಸಂದರ್ಭದಲ್ಲಿ ಆಗಿನ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿಗಳು ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳ ಪಠ್ಯಕ್ರಮವನ್ನು 'ಹಿಂದುತ್ವ ಸಂಸ್ಕೃತಿ'ಯ ವೈಭವೀಕರಣಕ್ಕಾಗಿ ಆಮೂಲಾಗ್ರವಾಗಿ ಬದಲಿಸುವ ಪ್ರಯತ್ನ ಮಾಡಿದ್ದರು. ಜ್ಯೋತಿಷ್ಯ, ವೈದಿಕ ಗಣಿತಶಾಸ್ತ್ರ, ವಾಸ್ತುಶಾಸ್ತ್ರ ಇತ್ಯಾದಿ, ಇತ್ಯಾದಿಗಳನ್ನು ಆರಂಭಿಸಲಾಯಿತು. ಹಿಂದುತ್ವ ಸಂಸ್ಕೃತಿಯ ಹೆಸರಿನಲ್ಲಿ ಕಂದಾಚಾರ ಮತ್ತು 'ಹಿಂದು'ಗಳ ವೈಭವೀಕರಣವನ್ನು ಪಠ್ಯಕ್ರಮದ ಎಲ್ಲ ವಿಷಯಗಳಲ್ಲಿ ಮತ್ತೆ-ಮತ್ತೆ ಕಾಣಿಸಿಕೊಳ್ಳುವ ಸಂಗತಿಯಾಗಿ ಮಾಡಲಾಯಿತು.

ಇದನ್ನು ಇನ್ನೂ ಬಲಯುತವಾಗಿ ಸಾಬೀತುಪಡಿಸಲೋ ಎಂಬಂತೆ ಪ್ರಸಕ್ತ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿಗಳು ತನ್ನ ಭವಿಷ್ಯವನ್ನು ತಿಳಿಯಲು ಒಬ್ಬ ಜ್ಯೋತಿಷಿಯ ಬಳಿ ಹೋಗಿದ್ದರೆಂದು ವರದಿಯಾಗಿದೆ! ದೇಶದ ಶಿಕ್ಷಣ ಮಂತ್ರಾಲಯ ಶೈಕ್ಷಣಿಕ ವ್ಯವಸ್ಥೆಯ ಮೂಲಕ ನಮ್ಮ ಮಕ್ಕಳಲ್ಲಿ 'ವೈಜ್ಞಾನಿಕ ಮನೋಭಾವ'ವನ್ನು ಪ್ರೋತ್ಸಾಹಿಸಬೇಕು ಮತ್ತು ಉತ್ತೇಜಿಸಬೇಕು ಎಂಬ ನಮ್ಮ ಸಂವಿಧಾನದ ನಿರ್ದೇಶನಕ್ಕೆ ಬದ್ಧವಾಗಿರಬೇಕಾಗಿದೆ. ಆದರೆ ಈ ಮಂತ್ರಾಲಯದ ಮುಖ್ಯಸ್ಥರಾಗಿರುವವರು ಇಂತವರು! ಹೀಗಿವೆ ನಾವಿಂದು ಜೀವಿಸಿರುವ ದಿನಗಳು.

ಕಂದಾಚಾರ ಮತ್ತು ಮತಾಂಧತೆಗೆ ಉತ್ತೇಜನೆ ನೀಡುತ್ತಿರುವುದು ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ, ಅದರಲ್ಲೂ ಮುಸ್ಲಿಮರ ವಿರುದ್ಧ ದ್ವೇಷ ಹರಡಿಸಿ ಕೋಮುವಾದಿ ಧ್ರುವೀಕರಣವನ್ನು ಬಲಯುತಗೊಳಿಸುವ ಗುರಿಯಿಂದಲೇ. ಅರೆಸ್ಸೆಸ್/ಬಿಜೆಪಿ ದೇಶದ ಶಿಕ್ಷಣ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಿಸುವ ಮತ್ತು ಅದನ್ನು 'ಹಿಂದೂರಾಷ್ಟ್ರ'ದ ಪ್ರತಿಪಾದನೆ ಮತ್ತು ಪ್ರಚಾರಕ್ಕೆ ಅನುಕೂಲವಾಗುವಂತೆ ಮಾಡುವ ಕೆಲಸವನ್ನು ಕೈಗೆತ್ತಿಕೊಂಡಿರುವುದು ಸ್ಪಷ್ಟವಾಗಿದೆ.

ಈ ಗುರಿಸಾಧನೆಗೆ ಆರೆಸ್ಸೆಸ್/ಬಿಜೆಪಿ ಒಂದು ಸೀಳುನಾಲಗೆಯ ಧೋರಣೆ ಅನುಸರಿಸುತ್ತಿದೆ ಎಂದು ನಾವು ಈ ಅಂಕಣದಲ್ಲಿ ಮತ್ತೆ-ಮತ್ತೆ ನೋಡಿದ್ದೇವೆ. ಎಲ್ಲ ರಂಗಗಳಲ್ಲಿ ತನಗೆಂದೇ ಒಂದು ವೋಟ್ ಬ್ಯಾಂಕ್ ನಿರ್ಮಿಸಿಕೊಳ್ಳಲು ಅದು ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸುತ್ತದೆ, ಅದೇ ವೇಳೆಗೆ ಕೋಮುವಾದಿ ವಿಷಪ್ರಾಶನವನ್ನು ತೀಕ್ಷ್ಣಗೊಳಿಸುವ ಪ್ರಚಾರಗಳ ಮೂಲಕ ಧರ್ಮದ ದುರುಪಯೋಗ ಮಾಡಿಕೊಂಡು ಜನಗಳ ಭಾವನೆಗಳನ್ನು ಉದ್ರೇಕಿಸುತ್ತದೆ. ಅದು ಈಗ ನಡೆಸುತ್ತಿರುವ 'ಲವ್ ಜಿಹಾದ', ಖಾಪ್ ಪಂಚಾಯತ್‌ಗಳ ಅನುಮೋದನೆ ಇತ್ಯಾದಿಗಳ ಮೂಲಕ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಹರಡಿಸಿ ಇಂತಹ ಧ್ರುವೀಕರಣ ನಡೆಸುತ್ತಿದೆ ಎಂಬುದನ್ನು ಕಾಣಬಹುದಾಗಿದೆ.

ಹೀಗೆ ಒಂದೆಡೆ 'ಅಭಿವೃದ್ಧಿ', 'ಒಳ್ಳೆಯ ದಿನಗಳು ಬರಲಿವೆ' ಇತ್ಯಾದಿ ಆರ್ಥಿಕ ಭ್ರಮೆಗಳನ್ನು ಸೃಷ್ಟಿಸುವ, ಮತ್ತೊಂದೆಡೆ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಒಂದು ಮರಣಾಂತಿಕ ಮಿಶ್ರಣ ನಮ್ಮ ಜನತೆಯ ಮುಂದಿದೆ. ಇನ್ನೂ ಹೊಲಸೆಂದರೆ, ಈ ಪ್ರಯತ್ನ ನಡೆಯುತ್ತಿರುವುದು ನಮ್ಮ ವಿಶಾಲ ಜನಸಮೂಹಗಳ ಮೇಲೆ ಹೆಚ್ಚೆಚ್ಚು ಆರ್ಥಿಕ ಹೊರೆಗಳ ಜತೆಜತೆಗೇ.

ಹೀಗೆ ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಹಾಗೂ ಭಾರತೀಯ ಸಂಸ್ಕೃತಿಯ ಶ್ರೀಮಂತ ಚಿತ್ತಾರವನ್ನು ಮತ್ತು ಅದರ ಸಮ್ಮಿಶ್ರ ನಾಗರಿಕತೆಯ ಹಂದರವನ್ನು ಬೆಸೆದಿರುವ ನಮ್ಮ ಜನಸಮೂಹಗಳ ನಡುವಿನ ಶತಮಾನಗಳ ಬಾಂಧವ್ಯವನ್ನು ಧ್ವಂಸ ಮಾಡುವ ಉದ್ದೇಶದ ಇಂತಹ ವಿಷಮಿಶ್ರಣದ ಅಪಾಯದಿಂದ ನಮ್ಮ ಭಾರತವನ್ನು ಕಾಪಾಡಬೇಕಾಗಿದೆ.

'ಇಂಡಿಯಾ, ಅಂದರೆ ಭಾರತ'ವನ್ನು ಕ್ರೋಡೀಕರಿಸಲಿಕ್ಕಾಗಿ ಮತ್ತು ನಮ್ಮೆಲ್ಲ ಜನತೆಗೆ ಒಂದು ಉತ್ತಮ ಭಾರತವನ್ನು ನಿರ್ಮಿಸಲಿಕ್ಕಾಗಿ ಇಂತಹ ತಂತ್ರಗಳನ್ನು ಎದುರಿಸಬೇಕಾಗಿದೆ, ಸೋಲಿಸಬೇಕಾಗಿದೆ.


•



A new uniform soon—cap to prevent cold, airy shorts with more legroom.

**ಬೇಗನೇ ಹೊಸದೊಂದು ಸಮವಸ್ತ್ರ –ಟೋಪಿ ಚಳಿ ತಡೆಯಲಿಕ್ಕೆ ಮತ್ತು ಚಡ್ಡಿ ಹೆಚ್ಚು ಗಾಳಿಯಾಡಲಿಕ್ಕೆ ಮತ್ತು ಸಲೀಸಾಗಿ ಓಡಾಡಲಿಕ್ಕೆ.
–ಟೈಂಸ್ ಆಫ್ ಇಂಡಿಯಾದಲ್ಲಿ ನೈನನ್.**

**ಕೇಸರೀಕರಣದ ಹೊರೆ–ಕೇಶವ್, ದಿ ಹಿಂದು**



## ಸಿಪಿಐ(ಎಂ)ನ 21ನೇ ಬೆಂಗಳೂರು ದಕ್ಷಿಣ ಜಿಲ್ಲಾ ಸಮ್ಮೇಳನ

# ಬೆಂಗಳೂರು: ಬೆಳೆದ ಮಹಾನಗರ ಶ್ರಮಜೀವಿಗಳ ಶೋಷಣೆಯ ವಿಸ್ತಾರ

### ಪ್ರಬಲ ರಾಜಕೀಯ ಆಂದೋಲನಕ್ಕೆ ನಿರ್ಧಾರ

**ಸಿಪಿಐ(ಎಂ)ನ 21ನೇ ಬೆಂಗಳೂರು ದಕ್ಷಿಣ ಜಿಲ್ಲಾ ಸಮ್ಮೇಳನವು 22–23, ನವೆಂಬರ್ 2014 ರಂದು ಕೆಂಗೇರಿಯಲ್ಲಿ ನಡೆಯಿತು. ಸಮ್ಮೇಳನದಲ್ಲಿ ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ದಕ್ಷಿಣ–ರಾಮನಗರ ಜಿಲ್ಲೆಯ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಿಚಾರಗಳ ಚರ್ಚೆ, ವಿಶ್ಲೇಷಣೆ ನಡೆಸಿದೆ. ಅದರ ಸಾರ ಸಂಗ್ರಹ ಮತ್ತು ಸಮ್ಮೇಳನದ ವರದಿ ಇಲ್ಲಿದೆ.**

2008ರ ಜಾಗತಿಕ ಆರ್ಥಿಕ ಹಿಂಜರಿತದಿಂದ ಹೊರ ಬರಲಾಗುತ್ತಿದೆ ಎಂಬ ಬಂಡವಾಳಶಾಹಿ ಜಗತ್ತಿನ ಸ್ವಘೋಷಣೆಯ ನಡುವೆಯೂ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಈಗಲೂ ಹಿಂಜರಿತದಿಂದ ಪೂರ್ಣ ಪ್ರಮಾಣದಲ್ಲಿ ಹೊರ ಬರಲು ಸಾಧ್ಯವಾಗಿಲ್ಲ.

200 ವರ್ಷಗಳ ಜಗತ್ತಿನ ಬಂಡವಾಳಶಾಹಿ ಬೆಳವಣಿಗೆಯ ಅಧ್ಯಯನ ನಡೆಸಿರುವ ಫ್ರೆಂಚ್ ಪ್ರಾಧ್ಯಾಪಕ ಥಾಮಸ್ ಪಿಕೆಟಿ ಬರೆದಿರುವ “21ನೇ ಶತಮಾನದಲ್ಲಿ ಬಂಡವಾಳ” ಎಂಬ ಪುಸ್ತಕದಲ್ಲಿ “ಹೆಚ್ಚುತ್ತಿರುವ ಅಸಮಾನತೆಯು ಬಂಡವಾಳಶಾಹಿ ಮುಕ್ತ ಮಾರುಕಟ್ಟೆಯ ಅನಿವಾರ್ಯ ಪ್ರತಿಫಲ” ಎಂದಿದ್ದಾರೆ. ಇದನ್ನು ಅಧರಿಸಿ ಪೋಪ್ ಫ್ರ್ಯಾನ್ಸಿಸ್ ಕೂಡ ಹೆಚ್ಚುತ್ತಿರುವ ಸಂಪತ್ತಿನ ಶೇಖರಣೆ–ಯ ಕುರಿತು “ನಾವು ಹಣವನ್ನೇ ದೈವವನ್ನಾಗಿ ಕೇಂದ್ರೀಕರಿಸಿ, ಅದರ ಮೂರ್ತ ರೂಪದ ಆರಾಧನೆಯ ಪಾಪಕೃತ್ಯದಲ್ಲಿ ಬಿದ್ದಿದ್ದೇವೆ” ಎನ್ನುತ್ತಾ“ ನಾವು ಇರುವ ಈ ಜಾಗತಿಕ ಆರ್ಥಿಕ ವ್ಯವಸ್ಥೆಯು ಒಳ್ಳೆಯದಲ್ಲ” ಎಂದಿದ್ದಾರೆ.

ಭಾರತದ ಕುರಿತು “ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆಯ” ಅಧ್ಯಯನದಲ್ಲಿ “ಕಳೆದ ಕೆಲವು ದಶಕಗಳಲ್ಲಿ ಗಳಿಕೆಯಲ್ಲಿನ ಅಸಮಾನತೆಯು ದ್ವಿಗುಣಗೊಳ್ಳುವ ಮೂಲಕ, ಹೊರಹೊಮ್ಮುತ್ತಿರುವ ಆರ್ಥಿಕತೆಗಳ ಪೈಕಿ ಭಾರತವನ್ನು ಅತ್ಯಂತ ಕಳಪೆ ಪ್ರದರ್ಶಕನನ್ನಾಗಿಸಿದೆ. ಕಳೆದ 15 ವರ್ಷಗಳಲ್ಲಿ ರಾಷ್ಟ್ರದಲ್ಲಿನ ಬಿಲಿಯಾಧಿಪತಿ ಸಮುದಾಯದ ನಿವ್ವಳ ಆಸ್ತಿಯು 12 ಪಟ್ಟು ಹೆಚ್ಚಾಗಿದೆ. ಇದ–ರಿಂದ ಭಾರತದಲ್ಲಿನ ಬಡತನವನ್ನು ಪೂರ್ಣವಾಗಿ 2 ಬಾರಿ ನಿರ್ಮೂಲನೆ ಮಾಡಬಹುದು ಎಂದು ವಿಶ್ವ ಆರ್ಥಿಕ ವೇದಿಕೆ ಹೇಳಿದೆ. ಭಾರತ ಹಾಗು ಜಗತ್ತಿನಾದ್ಯಂತ ಬಂಡವಾಳಶಾಹಿ ಆರ್ಥಿಕ ಬಿಕ್ಕಟ್ಟಿನ ಹೊರೆಯನ್ನು ದುಡಿಯುವ ಜನತೆಯ ಮೇಲೆ ಸರ್ಕಾರಗಳು ಹೊರಿಸುತ್ತಿವೆ.

ಬಿಬಿಎಂಪಿ ಮತ್ತು ಬೆಂಗಳೂರು ದಕ್ಷಿಣ ಹಾಗೂ ಆನೇಕಲ್ ತಾಲ್ಲೂಕು ವ್ಯಾಪ್ತಿಯಲ್ಲಿ ಕಾರ್ಮಿಕರು ಪ್ರಧಾನವಾಗಿದ್ದಾರೆ. ಬಿಬಿಎಂಪಿ 63 ವಾರ್ಡ್‌ಗಳಲ್ಲಿ ಕಾರ್ಮಿಕರು, ಅಸಂಘಟಿತ ಕಾರ್ಮಿಕರು, ಮಧ್ಯಮ/ತಳ ಮಧ್ಯಮವರ್ಗದ ಜನಸಂಖ್ಯೆಯು ಪ್ರಮುಖವಾಗಿದೆ. ಸ್ಲಂಗಳಲ್ಲಿನ ಜನಸಂಖ್ಯೆ ಶೇ.10 ರಷ್ಟಿದೆ. ಶೇ.60 ರಷ್ಟು ಜನಸಂಖ್ಯೆಯು ವಲಸಿಗರು. ಬೆಂಗಳೂರು ಜನಾಂಗೀಯ ವೈವಿಧ್ಯತೆಯ ನಗರವಾಗಿದೆ.

**ಆರ್ಥಿಕ ಪರಿಸ್ಥಿತಿ :**

ಕಾರ್ಮಿಕರು, ಅಸಂಘಟಿತ ಕಾರ್ಮಿಕರು ಹೆಚ್ಚುತ್ತಿದ್ದಾರೆ. ದೊಡ್ಡ ಪ್ರಮಾಣದ ಆದಾಯವುಳ್ಳ ಉದ್ದಿಮೆದಾರರು, ಮಾಹಿತಿ ತಂತ್ರಜ್ಞಾನ(ಸಾಫ್ಟ್‌ವೇರ್) ಉದ್ಯೋಗಿಗಳು, ವ್ಯಾಪಾರಸ್ತರು, ಮಧ್ಯಮ ವರ್ಗದ ಜನರೂ ಇದ್ದಾರೆ. ದೊಡ್ಡ ಮಾಲ್‌ಗಳು, ಹೋಟೆಲ್‌ಗಳು, ವ್ಯಾಪಾರ ವಹಿವಾಟಿನ ಕೇಂದ್ರಗಳು ಸಹ ಇವೆ. ಕೃಷಿ ಭೂಮಿಯ ಮಾರಾಟ, ರಿಯಲ್ ಎಸ್ಟೇಟ್ ವ್ಯಾಪಾರ, ಅಪಾರ್ಟ್‌ಮೆಂಟ್‌ಗಳ ಮತ್ತು ಕಛೇರಿ ಸ್ಥಳಗಳ ಬೇಡಿಕೆ ಎಲ್ಲವು ಸೇರಿ ದುಬಾರಿ ಜೀವನ ಶೈಲಿಯು ಮೇಲ್ಮಟ್ಟದಲ್ಲಿ ಕಂಡು ಬರುತ್ತದೆ. ನಗರ ಜಿಲ್ಲೆಯ ಅರ್ಥಿಕ ಪ್ರಗತಿಯು ಶೇ.10.3 ರಷ್ಟಿದೆ. ಆದರೆ ಅಸಂಘಟಿತ ಕಾರ್ಮಿಕರು ಮಾಸಿಕ ಆರೇಳು ಸಾವಿರಕ್ಕಿಂತ ಕಡಿಮೆ ಆದಾಯದಲ್ಲಿ ಬದುಕಬೇಕಿದೆ. ವೇತನ ಹೆಚ್ಚಳವಾಗದಿರುವ ಹಿನ್ನಲೆಯಲ್ಲಿ ಏರುತ್ತಿರುವ ಬಸ್, ಸಾರಿಗೆ ದರಗಳು, ಆಹಾರ ಬೆಲೆಗಳು, ಮನೆ ಬಾಡಿಗೆಗಳು ಹೆಚ್ಚಿರುವ ಕಾರಣ ಒಬ್ಬರ ದುಡಿಮೆಯಿಂದ ಜೀವನ ನಿರ್ವಹಣೆ ಅಸಾಧ್ಯವಾಗಿದೆ. ಗಂಡ–ಹೆಂಡತಿ ಇಬ್ಬರೂ ದುಡಿಯಲೇಬೇಕಾದ ಅನಿವಾರ್ಯತೆ ಹೆಚುತ್ತಿದೆ.



ವೇದಿಕೆಯಲ್ಲಿ ಎಡದಿಂದ ಕಾಂ. ಜಿ.ಎನ್. ನಾಗರಾಜ್, ಕಾಂ. ಎಸ್. ಪ್ರಸನ್ನಕುಮಾರ್, ಕಾಂ. ವಿಜೆಕೆ ನಾಯರ್, ಕಾಂ. ಕೆ. ಪ್ರಕಾಶ್, ಕಾಂ. ಟಿ. ಸುರೇಂದ್ರರಾವ್, ಕಾಂ. ಬಿ.ಎನ್. ಉಮೇಶ್.

**ಕೈಗಾರಿಕಾ ಪರಿಸ್ಥಿತಿ ಮತ್ತು ಕಾರ್ಮಿಕ ಶೋಷಣೆ**

2014–19ರ ರಾಜ್ಯ ನೂತನ ಕೈಗಾರಿಕಾ ನೀತಿಯಲ್ಲಿ ದಕ್ಷಿಣ ಜಿಲ್ಲಾ ಸಮಿತಿ ವ್ಯಾಪ್ತಿಯ ಬೆಂಗಳೂರು ದಕ್ಷಿಣ, ಆನೇಕಲ್ ಮತ್ತು ರಾಮನಗರ ತಾಲೂಕುಗಳನ್ನು ಕೈಗಾರಿಕಾವಾರು ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು ಎಂದೂ ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿ ತಾಲೂಕುಗಳನ್ನು ಅಭಿವೃದ್ಧಿ ಹೊಂದುತ್ತಿರುವ ತಾಲೂಕುಗಳೆಂದು ಗುರುತಿಸಿದೆ. ಬೆಂಗಳೂರಿನ ಮೇಲಿನ ಒತ್ತಡ ಕಡಿಮೆ ಮಾಡಲು ರಾಜ್ಯದ ಇತರೆ ಪ್ರದೇಶಗಳನ್ನು ‘ವಿಶೇಷ ಹೂಡಿಕೆ ಪ್ರದೇಶ’(ಎಸ್‌ಐಆರ್)ಗಳೆಂದು ಯೋಜನೆ ಗುರುತಿಸಿದೆ.

ದಕ್ಷಿಣ ಜಿಲ್ಲಾ ಸಮಿತಿ ವ್ಯಾಪ್ತಿಯಲ್ಲಿ ಅತ್ತಿಬೆಲೆ, ಬೊಮ್ಮಸಂದ್ರ, ಯಾರಂಡಹಳ್ಳಿ, ವೀರಸಂದ್ರ, ಎಲೆಕ್ಟ್ರಾನಿಕ್ ಸಿಟಿ, ಜಿಗಣಿ, ಕುಂಬಳಗೊಡು ಪ್ರಮುಖ ಕೈಗಾರಿಕಾ ಪ್ರದೇಶಗಳಾಗಿವೆ. ರಾಮನಗರ ಜಿಲ್ಲೆಯಲ್ಲಿ ಹಾರೋಹಳ್ಳಿ ಮತ್ತು ಬಿಡದಿ ಪ್ರಮುಖ ಕೈಗಾರಿಕಾ ಪ್ರದೇಶಗಳಾಗಿವೆ. ನೂತನ ಕೈಗಾರಿಕಾ ನೀತಿಯಲ್ಲಿ ಬೆಂಗಳೂರು–ಮಂಡ್ಯ–ಮೈಸೂರು–ಚಾಮರಾಜನಗರ ಕೈಗಾರಿಕಾ ಕಾರಿಡಾರನ್ನು ಜ್ಞಾನ ಆಧಾರಿತ ಕೈಗಾರಿಕಾ ಕಾರಿಡಾರಾಗಿ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ.

ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶ ಪ್ರಾಧಿಕಾರ ಸ್ಥಾಪಿಸಿ ಕೈಗಾರಿಕೋದ್ಯಮಗಳಿಗೆ ಅದರ ನಾಗರಿಕ ಸೌಲಭ್ಯಗಳ ನಿರ್ವಹಣೆ ಜವಾಬ್ದಾರಿಯನ್ನು ನೀಡಲು ಯೋಜನೆ ಪ್ರಕಟವಾಗಿದೆ.

ಜಿಗಣಿಯಲ್ಲಿ ರಾಸಾಯನಿಕ ಮತ್ತು ತೈಲ ಉತ್ಪನ್ನ ಬಿಡದಿಯಲ್ಲಿ ಆಟೋಮೊಬೈಲ್, ಮೈಸೂರು ರಸ್ತೆಯಲ್ಲಿ ಜವಳಿ, ಎಲೆಕ್ಟ್ರಾನಿಕ್ಸ್ ಸಿಟಿಯಲ್ಲಿ ಎಲೆಕ್ಟ್ರಾನಿಕ್ಸ್ ಕುರಿತ ಕೌಶಲ್ಯ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ಇಲ್ಲಿ ರಾಷ್ಟ್ರದ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನದ ಪ್ರಮುಖ ಸಂಸ್ಥೆಗಳಿವೆ. ಮಾಹಿತಿ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳ 187 ಸಂಸ್ಥೆಗಳು ಮತ್ತು ಜೈವಿಕ ತಂತ್ರಜ್ಞಾನದ 97 ಸಂಸ್ಥೆಗಳು ಎಲೆಕ್ಟ್ರಾನಿಕ್ಸ್ ಸಿಟಿ ಪ್ರದೇಶದಲ್ಲಿವೆ.

ಬಿಹೆಚ್‌ಇಎಲ್ ಕಾರ್ಖಾನೆಯು ಸರ್ಕಾರದ ಶೇರು ವಿಕ್ರಯ ನೀತಿಗೆ ಬಲಿಯಾಗುತ್ತಿದೆ. ಖಾಸಗಿ ಬಹುರಾಷ್ಟ್ರೀಯ ಘನ ಕೈಗಾರಿಕೆಗಳಾದ ಬಾಷ್, ಟಯೋಟಾ ಸಮೂಹದ ಕಂಪನಿಗಳು ಮುಂತಾದವು ಈ ವ್ಯಾಪ್ತಿಯಲ್ಲಿವೆ. ಸೇವಾ ರಂಗದ ಉದ್ದಿಮೆಗಳು, ಮಾಹಿತಿ ತಂತ್ರಜ್ಞಾನ/ಜೈವಿಕ ತಂತ್ರಜ್ಞಾನ(ಐಟಿ–ಬಿಟಿ), ಬಿಪಿಓ ಕಂಪೆನಿಗಳು, ಆರೋಗ್ಯ ಕೇಂದ್ರಿತ ಆರೋಗ್ಯ ಪ್ರವಾಸೋದ್ಯಮ, ಉತ್ಪಾದನಾ ಕೈಗಾರಿಕೆಗಳು, ಗಾರ್ಮೆಂಟ್ಸ್, ಮನೋರಂಜನ ಪಾರ್ಕ್ ಮತ್ತಿತರ ಸಣ್ಣ ಮಧ್ಯಮ ಉದ್ದಿಮೆಗಳು ಹೆಚ್ಚುತ್ತಿವೆ.

ಉದ್ಯೋಗ ಪರಿಸ್ಥಿತಿ ಕುರಿತು ರಾಷ್ಟ್ರದ ಮಾಲೀಕರ ಸಂಘವಾದ ASSOCHAM ಕೈಗೊಂಡಿರುವ ಅಧ್ಯಯನದಲ್ಲಿ ಬೆಂಗಳೂರನ್ನು ಉದ್ಯೋಗ ಸೃಷ್ಠಿಯ ಸಕಾರಾತ್ಮಕ ನಗರ ಎಂದು ಗುರುತಿಸಲಾಗಿದೆ. “ಭಾರತದ ಆರ್ಥಿಕ ಭೌಗೋಳ 2025 : ರಾಜ್ಯಗಳು, ಕೈಗಾರಿಕಾ ಸಮುಚ್ಚಯಗಳು ಮತ್ತು ನಗರಗಳು” ಕುರಿತು Mckinsey ವರದಿಯು “ಬೆಂಗಳೂರಿನಲ್ಲಿ ನಡೆದಿರುವ ಬೆಳವಣಿಗೆಯ ಸ್ಫೋಟವು ನಗರವನ್ನು ಗಂಭೀರ ನಾಗರಿಕ ಸಮಸ್ಯೆಗಳಿಗೆ ದೂಡಿದೆ” ಎಂದು ಗುರುತಿಸಿ, “ವಾಹನದಿಂದ ತುಂಬಿ ಹೋಗಿರುವ ರಸ್ತೆಗಳು, ಪದೇ ಪದೇ ಕೈ ಕೊಡುವ ವಿದ್ಯುತ್ ಸರಬರಾಜು, ಖಚಿತತೆ ಇಲ್ಲದ ನೀರು ಸರಬರಾಜು ಮತ್ತು ಕಳಪೆ ಒಳಚರಂಡಿಯಂತಹ ಕಷ್ಟಕರ ಸಮಸ್ಯೆಗಳಿಂದಾಗಿ ಹೂಡಿಕೆದಾರರು ಬೆಂಗಳೂರಿನ ಬದಲು ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ಗುಡ್‌ಗಾಂವ್ ಮತ್ತು ನೋಯಿಡಗಳನ್ನು ಆಯ್ಕೆ ಮಾಡುತ್ತಿದ್ದಾರೆ.” ಎಂದು ಗುರುತಿಸಿದೆ. “ಭಾರತದ ಮಾಹಿತಿ ತಂತ್ರಜ್ಞಾನ ರಾಜಧಾನಿಯಾದ ಬೆಂಗಳೂರಿನ ಕುಸಿಯುತ್ತಿರುವ ಮೂಲ ಸೌಕರ್ಯವೇ ಇದಕ್ಕೆ ಕಾರಣ” ಎಂದಿದೆ. ಮತ್ತೊಂದೆಡೆ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಕೇಂದ್ರೀಕರಿಸಿ ಹಲವು ಹೂಡಿಕೆದಾರರು ಬೆಂಗಳೂರಿನ ಉತ್ತರ ಭಾಗಕ್ಕೆ ಸ್ಥಳಾಂತರಿಸುತ್ತಿದ್ದಾರೆಂದು ಸಹಾ ಗುರುತಿಸಲಾಗಿದೆ.

ವಿಶ್ವ ಬಂಡವಾಳಗಾರರ ಸಮಾವೇಶ 2010ರ ಮೂಲಕ ಹೂಡಿಕೆ ಮಾಡಲು ಉದ್ದೇಶಿಸಲಾಗಿದ್ದ ಬಂಡವಾಳದಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ರೂ.336.69 ಕೋಟಿ ಹೂಡಿಕೆಯೊಂದಿಗೆ 13 ಯೋಜನೆಗಳು ಜಾರಿಯಾಗಿದ್ದು, 3,196 ಉದ್ಯೋಗಗಳು ಸೃಷ್ಠಿಯಾಗಿವೆ. ರಾಮನಗರ ಜಿಲ್ಲೆಯಲ್ಲಿ ರೂ.581.18 ಕೋಟಿ ಹೂಡಿಕೆಯೊಂದಿಗೆ 9 ಯೋಜನೆಗಳು ಜಾರಿಯಾಗಿದ್ದು, 2,029 ಉದ್ಯೋಗಗಳು ಸೃಷ್ಠಿಯಾಗಿವೆ.

2012ರ ಸಮಾವೇಶದಲ್ಲಿ ರೂ.6.7 ಲಕ್ಷ ಕೋಟಿ ಬಂಡವಾಳ ಹೂಡಿಕೆಯೊಂದಿಗೆ 751 ಯೋಜನೆಗಳನ್ನು 17 ಲಕ್ಷ ಉದ್ಯೋಗ ಸೃಷ್ಠಿಯೊಂದಿಗೆ ಆರಂಭಿಸುವ ಭರವಸೆ ಸಿಕ್ಕಿದ್ದರೂ ಸಹಾ ರಾಜ್ಯಾದ್ಯಂತ ಇದುವರೆಗೆ ರೂ.17,308.44 ಕೋಟಿ ಬಂಡವಾಳ ಹೂಡಿಕೆಯೊಂದಿಗೆ 24,694 ಉದ್ಯೋಗ ಸೃಷ್ಠಿಸಿ 58 ಯೋಜನೆಗಳು ಆರಂಭವಾಗಿರುವ ವರದಿಯಿದೆ.

ರಾಜ್ಯದಲ್ಲಿ ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಕಾರ್ಖಾನೆಗಳ ಸಂಖ್ಯೆ ಹೆಚ್ಚಾಗಿದ್ದರೂ, ಕಾರ್ಮಿಕರ ಸಂಖ್ಯೆ ಕಡಿಮೆಯಾಗಿದೆ. ಪ್ರತಿ ಲಕ್ಷ ಜನಸಂಖ್ಯೆಗೆ ಇರುವ ಕಾರ್ಮಿಕರ ಸಂಖ್ಯೆಯು ಕಡಿಮೆ ಆಗಿದೆ. ಇದರ ಶೇ. 50ರಷ್ಟು ಪ್ರಮಾಣ ಬೆಂಗಳೂರು ಕೇಂದ್ರಿತವಾಗಿದೆ. ಗುತ್ತಿಗೆ, ಅರೆಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ. ಸಂಘಟಿ–ತ ವಲಯದೊಳಗೆ ಅಸಂಘಟಿತ ವಲಯದ ಕಾರ್ಮಿಕರು ಹೆಚ್ಚುತ್ತಿರುವುದರ ಸೂಚಕ ಇದಾಗಿದೆ. ಸೇವಾ ವಲಯದ ಮಾಲ್‌ಗಳು ಮಲ್ಟಿಪ್ಲೆಕ್ಸ್‌ಗಳು ಹೆಚ್ಚಿ ಅವುಗಳ ಆಧಾರಿತ ಉದ್ಯೋಗಗಳು ಹೆಚ್ಚುತ್ತಿವೆ.

**ಮಾಲೀಕರ ಪರ ಸರ್ಕಾರದ ಕ್ರಮಗಳು**

ಕಾರ್ಮಿಕರ ಮೇಲಿನ ದಬ್ಬಾಳಿಕೆಗಳು ಹೆಚ್ಚಾಗಿವೆ. ಕಾರ್ಮಿಕರ ಸಂಘ ಮಾನ್ಯ ಮಾಡದೆ, ಮುಂದಾಳುಗಳನ್ನು ಅಮಾನತ್ತುಗೊಳಿಸುವುದು, ವರ್ಗಾವಣೆ ಹೆಸರಿನಲ್ಲಿ ವಜಾಗೊಳಿಸುವುದು ಹೆಚ್ಚುತ್ತಿವೆ. ಆಡಳಿತ ಮಂಡಳಿ ಕಿರುಕುಳ ತಾಳಲಾರದೆ ಕಾರ್ಖಾನೆ ಒಳಗೆ ಕಾರ್ಮಿಕನೊಬ್ಬ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಬಿಡದಿ ಕೈಗಾರಿಕಾ ಪ್ರದೇಶದ ಟಾಟಾ ಜಾನ್‌ಸನ್ ಕಾರ್ಖಾನೆಯಲ್ಲಿ ನಡೆದಿದೆ. ಕಾರ್ಖಾನೆಗಳ ಒಳಗೆ ಮಾಲೀಕರ ಪರ ವಕಾಲತ್ತು ವಹಿಸಿ ಕಾರ್ಮಿಕರಿಗೆ ಬೆದರಿಕೆ ಹಾಕುವ ಯತ್ನಗಳನ್ನು ಪೋಲೀಸರು ನಡೆಸಿದ್ದಾರೆ.

ಉಚ್ಚ ನ್ಯಾಯಾಲಯದ ನಿರ್ದೇಶನದ ನಂತರವೂ ಗಾರ್ಮೆಂಟ್ಸ್ ಕಾರ್ಮಿಕರ ಕನಿಷ್ಠ ವೇತನ ನಿಗದಿಯಲ್ಲಿನ 2011ರ ತಪ್ಪುಗಳನ್ನು



ಸರಿಪಡಿಸುವ ನೆಪದಲ್ಲಿ ವಿವಿಧ ವಲಯಗಳಿಗೆ ನಿಗದಿಪಡಿಸುವ ಕನಿಷ್ಠ ವೇತನದಲ್ಲಿ ದೊಡ್ಡ ಅಂತರವಿರಿಸಿ ಮಾಲೀಕರಿಗೆ ಸಹಕರಿಸಿದೆ. ಬೀಡಿ ಕಾರ್ಮಿಕರ ತುಟ್ಟಿ ಭತ್ಯೆ ನೀಡಲು ನಿರಾಕರಿಸಿದ ಮಾಲೀಕರಿಗೆ ಅನುವುಗೊಳಿಸಲು ತಿಂಗಳುಗಟ್ಟಲೆ ರಾಜಿಸಂಧಾನವನ್ನು ಮಾಲೀಕರ ಹಿತಾಸಕ್ತಿಗಾಗಿ ನಡೆಸಲಾಯಿತು. ಆನಂತರ ಕಾರ್ಮಿಕ ರಂಗದ ಹೋರಾಟದಿಂದಾಗಿ ತುಟ್ಟಿಭತ್ಯೆ ನೀಡುವಂತೆ ನಿರ್ದೇಶಿಸಲಾಯಿತು.

ಆದರೆ ಬಾಷ್ ಕಾರ್ಮಿಕರ ಮತ್ತು ಟಯೋಟಾ ಕಿರ್ಲೋಸ್ಕರ ಕಾರ್ಮಿಕರ ಮುಷ್ಕರಗಳಲ್ಲಿ ರಾಜಿ ಸಂಧಾನ ತಾರ್ಕಿಕ ಅಂತ್ಯಕಾಣುವ ಮುನ್ನ ಮುಷ್ಕರ ನಿಷೇಧಿಸಲಾಯಿತು. ಬಾಷ್ ಕಾರ್ಮಿಕರ ಮುಷ್ಕರ ನಿಷೇಧ ವೇಳೆ ನೀಡಬಹುದಾದ ಪರಿಹಾರ ಕೋರಿ ಮನವಿ ಸಲ್ಲಿಸಲು ಮುಂದಾದ ಪಕ್ಷದ ಮುಖಂಡರನ್ನು ಒಳಗೊಂಡು ಕಾರ್ಮಿಕರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡುವ, ವಾಹನಗಳನ್ನು ಜಪ್ತಿ ಮಾಡಿ ನ್ಯಾಯಾಲಯಕ್ಕೆ ನೀಡುವ, ಧರಣಿ ನಿರತರ ಶಾಮಿಯಾನ ಕಿತ್ತು ಹಾಕುವಂತಹ ಕ್ರಮಗಳನ್ನು ಸರ್ಕಾರ ಪೊಲೀಸರ ಮೂಲಕ ನಡೆಸಿ ತನ್ನ ಮಾಲೀಕರ ಪರ ನಿಷ್ಠೆ ಪ್ರದರ್ಶಿಸಿದೆ.

ಕೈಗಾರಿಕಾ ಕಾರ್ಮಿಕರ ನಿವೃತ್ತಿ ವಯಸ್ಸನ್ನು 58 ರಿಂದ 60ಕ್ಕೆ ಹೆಚ್ಚಿಸುವ ಕರಡು ಅಧಿಸೂಚನೆಯನ್ನು ಹಿಂದಿನ ಸರ್ಕಾರದಂತೆ ಅಂತಿಮ ಪಡಿಸದೆ ಕೊಳೆಯುವಂತೆ ಮಾಡಿದೆ. ಗುತ್ತಿಗೆ ಕಾರ್ಮಿಕರು, ಟ್ರೈನಿಗಳನ್ನು ಖಾಯಂಗೊಳಿಸುವ ಮತ್ತು ಕಾರ್ಮಿಕ ಸಂಘಗಳನ್ನು ಮಾನ್ಯ ಮಾಡುವ ರಾಜ್ಯ ಶಾಸನ ರೂಪಿಸಬೇಕೆಂಬ ಕಾರ್ಮಿಕ ರಂಗದ ಬೇಡಿಕೆ ಈಡೇರಿಸಲು ಕ್ರಮವಹಿಸದೆ ವಿಳಂಬ ಮಾಡುತ್ತಿದೆ. ಮುಷ್ಕರದ ವೇಳೆ ಟ್ರೈನಿಗಳು, ಆಡಳಿತ ಸಿಬ್ಬಂದಿ, ಗುತ್ತಿಗೆ ಮುಂತಾದ ಕಾರ್ಮಿಕರ ಮೂಲಕ ಉತ್ಪಾದನೆಯನ್ನು ಆಬಾಧಿತವಾಗಿ ನಡೆಸುವ ಪ್ರವೃತ್ತಿ ಹೆಚ್ಚುತ್ತಿದೆ. ನ್ಯಾಯಾಲಯಗಳು ನೀಡುತ್ತಿರುವ ತಡೆಯಾಜ್ಞೆ ಇದಕ್ಕೆ ಅನುವುಗೊಳಿಸಿದೆ.


ಕಾಂ. ಶ್ರೀನಿವಾಸಮೂರ್ತಿಯವರಿಗೆ ಕಾಂ. ವಿಜೆಕೆ ನಾಯರ್‌ರವರು ಸನ್ಮಾನ ಮಾಡುತ್ತಿರುವುದು

ಪರಿಣಾಮವಾಗಿ ಮುಷ್ಕರ ತಿಂಗಳುಗಳ ಕಾಲ ನಡೆದರೂ ಲಕ್ಷ್ಯ ಮಾಡದೆ, ಸ್ವಯಂ ನಿವೃತ್ತಿ ಪ್ರಕಟಿಸುವ, ಆಮಿಷಗಳ ಮೂಲಕ ಕಾರ್ಮಿಕರನ್ನು ಬಲಿಪಶುಮಾಡುವ ಪ್ರವೃತ್ತಿ ಹೆಚ್ಚುತ್ತಿದೆ.

ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿ ಯೋಜನೆಗಳನ್ನು ರೂಪಿಸದೆ, ಅಗತ್ಯ ನಿಧಿಯನ್ನು ಬಜೆಟ್‌ನಲ್ಲಿ ನೀಡದೆ, ಫಲಾನುಭವಿಗಳನ್ನು ನೋಂದಾಯಿಸದೆ ವಂಚಿಸುವ ಹಿಂದಿನ ಸರ್ಕಾರದ ಧೋರಣೆಯನ್ನು ಈಗಿನ ಸರ್ಕಾರವು ಮುಂದುವರಿಸಿದೆ. ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ನಿಧಿಯನ್ನು ಅನ್ಯ ಕಾರ್ಯಗಳಿಗೆ ಬಳಸಲು ಯತ್ನಿಸಿದೆ, ಮತ್ತು ಈಗಲೂ ಹೊಂಚುಹಾಕಿ ಕುಳಿತಿದೆ. ತ್ರಿಪಕ್ಷೀಯ ಸಮಿತಿಗಳಿಗೆ ಕಾರ್ಮಿಕ ರಂಗದ ಪ್ರತಿನಿಧಿಗಳನ್ನು ನೇಮಿಸಿಲ್ಲ. ಕಾರ್ಮಿಕ ಸಚಿವರಂತೂ ಕಾರ್ಮಿಕ ರಂಗದ ಯಾವುದೇ ಆಹ್ವಾನಕ್ಕೂ ಬಾರದೆ ನಿರ್ಲಕ್ಷ ಮಾಡಿದ್ದಾರೆ.

ಬಿಬಿಎಂಪಿಯು ತನ್ನ ಗುತ್ತಿಗೆ ಕಾರ್ಮಿಕರಿಗೆ ರೂ.227 ಕೋಟಿಗಳ ಭವಿಷ್ಯ ನಿಧಿ ಬಾಕಿ ಉಳಿಸಿಕೊಂಡಿದೆ. ನೂರಾರು ಕೋಟಿ ರೂಪಾಯಿಗಳ ನೌಕರರ ವಿಮಾ ಕಂತನ್ನು ಭಾರತೀಯ ಜೀವ ವಿಮಾ ನಿಗಮಕ್ಕೆ ಸಲ್ಲಿಸದೆ ನೌಕರರ ವಿಮಾ ಸೌಲಭ್ಯಕ್ಕೆ ಬಿಬಿಎಂಪಿ ಕಲ್ಲು ಹಾಕುವ ಪ್ರಯತ್ನ ಮಾಡುತ್ತಿದೆ.

ಮಹಿಳಾ ಕಾರ್ಮಿಕರನ್ನು ಹೊಂದಿರುವ ರಾಜ್ಯದಲ್ಲಿನ 2,856 ಕಾರ್ಖಾನೆಗಳಲ್ಲಿ 1,662 ಕಾರ್ಖಾನೆಗಳಲ್ಲಿ ಮಾತ್ರ ಸುಪ್ರೀಂ ಕೋರ್ಟ್‌ನ ವಿಶಾಖಾ ತೀರ್ಪಿನ ಆಧಾರದಲ್ಲಿ ಸಮಿತಿಗಳನ್ನು ರಚಿಸಲಾಗಿದೆ. 311 ದೂರುಗಳು ದಾಖಲಾಗಿವೆ.

**ಕಾರ್ಷಿಕ ಪರಿಸ್ಥಿತಿ :**

ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ, ಆನೇಕಲ್‌ಗಳಲ್ಲಿ ಕೈಗಾರಿಕಾ ಬೆಳವಣಿಗೆ, ವಸತಿ, ಉಪನಗರ ನಿರ್ಮಾಣದಿಂದಾಗಿ ಕೃಷಿ ಭೂಮಿ ವಶಪಡಿಸಿಕೊಳ್ಳುವ ಯತ್ನಗಳು ತೀವ್ರಗೊಂಡಿವೆ. ಬಿಬಿಎಂಪಿಯಿಂದ 18 ಕಿ.ಮೀ.ವ್ಯಾಪ್ತಿಯಲ್ಲಿ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡದೆ, ಸಲ್ಲಿಸಿರುವ ಅರ್ಜಿಗಳನ್ನು ತಿರಸ್ಕರಿಸಿ, ಒಕ್ಕಲೆಬ್ಬಿಸುವ ಯತ್ನಗಳು ನಡೆದಿವೆ. ಅದರ ವಿರುದ್ಧ ಪ್ರತಿಭಟನೆಗಳನ್ನು ರೈತ ರಂಗವು ಸಂಘಟಿಸುತ್ತಿದೆ. ಎ.ಟಿ.ರಾಮಸ್ವಾಮಿ ವರದಿ ಆಧರಿಸಿ ಸರ್ಕಾರಿ ಭೂಮಿ ಅತಿಕ್ರಮಣ ತೆರವು ತೀವ್ರಗೊಳಿಸಲಾಗಿದೆ.

ಬೆಂ.ದಕ್ಷಿಣ ತಾಲ್ಲೂಕಿನ 6882.21 (33130) ಮತ್ತು ಆನೇಕಲ್ ತಾಲ್ಲೂಕಿನ 9359.33 (32952) ಎಕರೆ ಸೇರಿ ಒಟ್ಟು 16241.54 (66082) ಎಕರೆ ಒತ್ತುವರಿಯಾಗಿರುವ ಸರ್ಕಾರಿ ಜಮೀನಿನಲ್ಲಿ ಇದುವರೆಗೆ ಬೆಂ.ದ.ದಲ್ಲಿ 2022.18 ಮತ್ತು ಆನೇಕಲ್ ತಾಲ್ಲೂಕಿನಲ್ಲಿ 2820.31 ಎಕರೆ ಸೇರಿ ಒಟ್ಟು 4842.49 ಎಕರೆ ಒತ್ತುವರಿ ಭೂಮಿ ವಶಪಡಿಸಿಕೊಳ್ಳಲಾಗಿದೆ. ಉಳಿದದ್ದು ಬಾಕಿ ಇದೆ. ಇಡಿ ಜಿಲ್ಲೆಯ ಒಟ್ಟು 34,111.15 ಎಕರೆ ಒತ್ತುವರಿ ಭೂಮಿಯಲ್ಲಿ ಇದುವರೆಗೆ 1,4708.25 ಎಕರೆಯನ್ನು ವಶಪಡಿಸಿಕೊಂಡಿದೆ. (ಆವರಣದಲ್ಲಿರುವುದು ಒಟ್ಟು ಸರ್ಕಾರಿ ಭೂಮಿ).

ರಾಮನಗರ ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಕೂಲಿ ಕೊಡದೇ ವಂಚಿಸಲಾಗುತ್ತಿದೆ. ಬಿಎಂಐಸಿ–ನೈಸ್‌ರಸ್ತೆ–ಟೌನ್‌ಶಿಪ್ ನಿರ್ಮಾಣಕ್ಕೆ ಭೂಮಿ ವಶಪಡಿಸಿಕೊಳ್ಳುವಿಕೆ ವಿರುದ್ಧ ಹೋರಾಟಗಳು ನಡೆದಿವೆ.

**ಸಾಮಾಜಿಕ ಪರಿಸ್ಥಿತಿ :**

ಮಹಿಳೆಯರು, ಯುವತಿಯರ ಮೇಲೆ ಅತ್ಯಾಚಾರ ಪ್ರಕರಣ ಹೆಚ್ಚೆಚ್ಚು ವರದಿಯಾಗುತ್ತಿವೆ. ಅದರ ವಿರುದ್ಧ ವ್ಯಾಪಕ ಚರ್ಚೆ ಪ್ರತಿಭಟನೆ ನಡೆದಿವೆ. ಖಾಸಗಿ ಶಾಲೆಗಳಲ್ಲಿ ಬಾಲಕಿಯರ ಮೇಲಿನ ಅತ್ಯಾಚಾರ ಪ್ರಕರಣಗಳು ಹೆಚ್ಚೆಚ್ಚು ಬಯಲಿಗೆ ಬರುತ್ತಿವೆ.

ಒಂಟಿ ಮಹಿಳೆಯರ ಮೇಲೆ ದಾಳಿ, ಕೊಲೆ, ದರೋಡೆ, ರೌಡಿ ಪಟಾಲಂಗಳ ನಡುವೆ ಬೀದಿ ಜಗಳ ಗ್ಯಾಂಗ್ ವಾರ್‌ಗಳು ಹೆಚ್ಚಿವೆ. ಬಿಡದಿ ನಿತ್ಯಾನಂದ ಸ್ವಾಮಿ ರಂಜಿತಾ ಪ್ರಕರಣ, ತನಿಖೆ, ಮುಂತಾದ ಅಂಶಗಳು ರೋಚಕ ಪ್ರಚಾರ ಪಡೆದಿವೆ.

ರಾಜ್ಯ, ಭಾಷೆ ಆಧಾರಿತ ಅನ್ಯಾಕ್ರಮಣಶೀಲತೆ ಹೆಚ್ಚಿದೆ. ಯುವಜನತೆಯಲ್ಲಿ ಭಾಷೆ, ಜಾತಿ, ಪ್ರದೇಶ, ಧರ್ಮ ಆಧಾರಿತ ಅಂಧಾಭಿಮಾನ ಹೆಚ್ಚಿಸುವ, ಇತರರ ಮೇಲೆ ದೌರ್ಜನ್ಯಕ್ಕೆ ಉತ್ತೇಜನ ನೀಡುವ ಯತ್ನಗಳು ಬಲಗೊಳ್ಳುತ್ತಿವೆ. ಜಾತಿ, ಉಪಜಾತಿ, ಧರ್ಮ ಆಧಾರಿತವಾಗಿ ಯುವಜನತೆಯನ್ನು ಸೆಳೆಯುವ ವಿಭಿನ್ನ ವೇದಿಕೆಗಳನ್ನು ಸೃಷ್ಠಿಸಿ ಆಕರ್ಷಿಸುವ ಯತ್ನ ನಡೆದಿದೆ.

**ಸಂಪೂರ್ಣ ಸರಕಾಗುತ್ತಿರುವ ಶಿಕ್ಷಣ**

ಶಿಕ್ಷಣ ತೀರಾ ದುಬಾರಿಯಾಗುತ್ತಿದೆ. ಶಿಕ್ಷಣದ ಹಕ್ಕು (ಆರ್.ಟಿ.ಇ) ಕೋಟಾ ಅಡಿ ಬಡವರ ಮಕ್ಕಳಿಗೆ ಖಾಸಗಿ ಶಾಲೆಗಳಲ್ಲಿ 25 ಶೇ. ಸೀಟು ಪಡೆಯಲು ಹೋರಾಟಗಳನ್ನು ನಡೆಸಬೇಕಾಗಿದೆ.

**ದುಬಾರಿಯಾಗುತ್ತಿರುವ ಆರೋಗ್ಯ :**

ಸರ್ಕಾರದ ಸ್ಪಂದನೆಯ ಕೊರತೆ, ಸರ್ಕಾರಿ ಆಸ್ಪತ್ರೆಗಳ ವೈದ್ಯರು, ಸಿಬ್ಬಂದಿ ಮತ್ತು 108 ಆರೋಗ್ಯ ಕವಚ ಹೊರಮೂಲ ಸಿಬ್ಬಂದಿಯ ಮುಷ್ಕರ ಹೋರಾಟಗಳಿಗೆ ಅನುವುಗೊಳಿಸಿದೆ. ಉತ್ತಮ ಸರ್ಕಾರಿ ಆಸ್ಪತ್ರೆಗಳ ಇಲ್ಲದೇ ಬಡ ಜನರೂ ದುಬಾರಿ ಖಾಸಗಿ ಆಸ್ಪತ್ರೆಗಳ ಕೈಗೆ ಸಿಕ್ಕು ನರಳುತ್ತಿದ್ದಾರೆ. ನಗರದಲ್ಲಿನ ಕೊಳೆಗೇರಿಗಳ ವಾಸಿಗಳು ಮತ್ತು ಬಡವರ ಪೈಕಿ ಶೇ.20ರಷ್ಟು ಮಂದಿ ಮಾತ್ರ ಸರ್ಕಾರಿ ಆಸ್ಪತ್ರೆಗಳಿಗೆ ಹೋಗುತ್ತಿದ್ದಾರೆ. ಬಡವರ ಪೈಕಿ ಶೇ.16ರಷ್ಟು ಮಂದಿ ಮನೆಗಳಲ್ಲೇ ಮಕ್ಕಳಿಗೆ ಜನ್ಮ ನೀಡುತ್ತಾರೆ.


ಕಾಂ. ಕೋದಂಡರಾಮು ರವರಿಗೆ ಕಾಂ. ಜಿ.ಎನ್ ನಾಗರಾಜುರವರು ಸನ್ಮಾನ ಮಾಡುತ್ತಿರುವುದು

ಸ್ಲಂ ನಿವಾಸಿಗಳಲ್ಲಿ ಶೇ.36ರಷ್ಟು ಹೆರಿಗೆ ಮನೆಗಳಲ್ಲೆ ಆಗುತ್ತಿದೆ. ವಾಣಿಜ್ಯ ವಾಹನ ಚಾಲಕರಿಗೆ ರೂ.25 ನೊಂದಣಿ ಶುಲ್ಕ ಪಡೆದು ರೂ.2 ಲಕ್ಷ ಅಪಘಾತ ವಿಮೆಯು ಚಾಲಕರನ್ನು ಆಕರ್ಷಿಸಿದೆ. ಆದರೆ ಅದರ ನೊಂದಾವಣಿ ಕಾರ್ಯವನ್ನು ಖಾಸಗಿ ಗುತ್ತಿಗೆಗೆ ನೀಡಿರುವ ಕಾರಣ, ಅದರ ಸಮರ್ಪಕ ನೊಂದಾವಣಿ ಆಗುತ್ತಿಲ್ಲ. ಕಾರ್ಖಾನೆಗಳಲ್ಲಿ ಸುರಕ್ಷತಾ ಕ್ರಮಗಳ ಕೊರತೆ ಕಾರಣ ಅಪಘಾತಗಳು ಹೆಚ್ಚುತ್ತಿವೆ. ಕಟ್ಟಡ ಕಾರ್ಮಿಕರ ದುರ್ಮರಣಗಳು ಹೆಚ್ಚಿವೆ. ಇಎಸ್‌ಐ ಆಸ್ಪತ್ರೆಗಳು–ಸೌಲಭ್ಯಗಳು ಉತ್ತಮಗೊಳ್ಳುತ್ತಿರುವಾಗಲೆ ಕೇಂದ್ರ ಸರ್ಕಾರ ಉದ್ದೇಶಿತ ವೈದ್ಯರು–ಕಾರ್ಮಿಕರ ಸಂಖ್ಯೆಯನ್ನು ಹಾಲಿ 700 ರಿಂದ 2000ಕ್ಕೆ ಹೆಚ್ಚಿಸುವ ಮತ್ತು ಆಸ್ಪತ್ರೆಗಳು ಕಾರ್ಮಿಕರ ಸಂಖ್ಯೆಯನ್ನು 25000 ದಿಂದ 1 ಲಕ್ಷಕ್ಕೆ ಹೆಚ್ಚಿಸುವ ಕ್ರಮಗಳು ಕಾರ್ಮಿಕರ ಆರೋಗ್ಯ ಪ್ರಶ್ನೆಯನ್ನು ಹಾಗು ಇಎಸ್‌ಐಸಿ ಹಣವನ್ನು ಖಾಸಗಿ ಕಾರ್ಪೊರೇಟ್ ಆಸ್ಪತ್ರೆಗಳಿಗೆ ವರ್ಗಾಯಿಸಲಿದೆ.

ದುಬಾರಿಯಾಗುತ್ತಿರುವ ಖಾಸಗಿ ಆಸ್ಪತ್ರೆಗಳ ಚಿಕಿತ್ಸೆಗಳು, ಇಎಸ್‌ಐಸಿಯಿಂದ ಹೊರಗಿರುವ ಕಾರ್ಮಿಕರ ವೈದ್ಯಕೀಯ ವಿಮಾ ವೆಚ್ಚಗಳನ್ನು ಹೆಚ್ಚಿಸಿ, ನಿವ್ವಳ ವೇತನದಲ್ಲಿನ ಹೆಚ್ಚಳ ಕಡಿಮೆಯಾಗುವಂತೆ ಮಾಡುತ್ತಿವೆ. ಮಾಲೀಕರು ವೆಚ್ಚ ಹೆಚ್ಚಳದ ಪಾಲನ್ನು ಕಾರ್ಮಿಕರ ಮೇಲೆ ಹೊರಿಸಲು ಮುಂದಾಗುತ್ತಿರುವ, ಕಾರ್ಮಿಕರು ಪ್ರತಿರೋಧಿಸುವ ಪ್ರವೃತ್ತಿಗಳು ಹೆಚ್ಚುತ್ತಿವೆ. ಬೀದಿ ಬದಿ ವ್ಯಾಪಾರಿಗಳು, ಮನೆಕೆಲಸಗಾರರು ಮುಂತಾದ ಅಸಂಘಟಿತ ಕಾರ್ಮಿಕರಿಗೆ ಆರ್‌ಎಸ್‌ಬಿವೈ ಕಾರ್ಡ್ ನೀಡುವಲ್ಲಿನ ವಿಳಂಬ ಅವರಲ್ಲಿ ಮೂಡಿದ್ದ ವಿಶ್ವಾಸವನ್ನು ಕಮರಿಸುತ್ತಿದೆ.

**ನಾಗರಿಕ ಪ್ರಶ್ನೆಗಳು :**

ನೀರು, ರಸ್ತೆ, ಚರಂಡಿ, ಕಸ ವಿಲೇವಾರಿ, ಸಾರಿಗೆ, ವಸತಿ ಸಮಸ್ಯೆಗಳು ಜನತೆಯನ್ನು ತೀವ್ರವಾಗಿ ಕಾಡಿವೆ. ಬೆಂಗಳೂರು ನಗರದಲ್ಲಿ 4500 ಟನ್ ಕಸ ಮತ್ತು ವಾರ್ಷಿಕ 57 ಸಾವಿರ ಟನ್ ಎಲೆಕ್ಟ್ರಾನಿಕ್ಸ್ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಅದರ ವೈಜ್ಞಾನಿಕ ವಿಲೇವಾರಿ ಇಲ್ಲ. ಮಂಡೂರು ಮುಂತಾದೆಡೆ ಸುರಿದಿರುವ ರಾಶಿ ರಾಶಿ ಕಸ, ಅದರ ಸಂಬಂಧಿತ ಸಮಸ್ಯೆಗಳು ಸ್ಥಳೀಯರನ್ನು ಬಿಬಿಎಂಪಿ ಹಾಗೂ ಸರ್ಕಾರದ ವಿರುದ್ಧ ಹೋರಾಟಕ್ಕೆ ಇಳಿಸಿದೆ. ಕಸ ವಿಲೇವಾರಿಯಲ್ಲಿ ಗುತ್ತಿಗೆದಾರರು–ಕಾರ್ಪೊರೇಟರ್‌ಗಳು–ಅಧಿಕಾರಿಗಳ ದುಷ್ಟಕೂಟದ ಮಾಫಿಯಾ ಹಿತಾಸಕ್ತಿ ಅಡಗಿದೆ.

ಸಾರಿಗೆ ದಟ್ಟಣೆ ಪರಿಹಾರಕ್ಕೆ ಸಮರ್ಪಕ ವೈಜ್ಞಾನಿಕ ದೂರಗಾಮಿ ಕ್ರಮವಿಲ್ಲ. ಮೆಟ್ರೋ ಕಾಮಗಾರಿಯ ಶೀಘ್ರ ಪೂರ್ಣಗೊಳಿಸುವಿಕೆ ಅಲ್ಪ ಪರಿಹಾರವಷ್ಟೆ. ಎಲ್ಲೆಲ್ಲೂ ರಸ್ತೆಗಳು ಹಾಳು ಬಿದ್ದಿವೆ. ಆಟೋಗೆ ಪ್ರತ್ಯೇಕ ಲೇನ್ ಎಂಬ ಅಪಹಾಸ್ಯದ ಯೋಜನೆ ಬಂದಿದೆ. ಡೀಸೆಲ್ ದರ ಇಳಿಕೆಯಾದರೂ ಬಿಎಮ್‌ಟಿಸಿ/ಕೆಎಸ್‌ಆರ್‌ಟಿಸಿ ದರ ಇಳಿಕೆ ಮಾಡದಿರುವ ಸರ್ಕಾರದ ಜನ ವಿರೋಧಿ ಕ್ರಮ ವ್ಯಾಪಕ ಟೀಕೆಗೆ ಗುರಿಯಾಗಿದೆ.

ಮನೆ ನಿವೇಶನಕ್ಕಾಗಿನ ಜನತೆಯ ಒತ್ತಾಸೆ ವ್ಯಾಪಕವಾಗಿದೆ. 2006ರಲ್ಲಿ ಪಕ್ಷದ ನೇತೃತ್ವದಲ್ಲಿ ನಡೆದ ಸರ್ಕಾರಿ ಭೂಮಿ ಹರಾಜು ವಿರೋಧಿ ಹೋರಾಟ, ವಸತಿ ನಿವೇಶನ ರಹಿತರಿಗೆ ವಸತಿ ನಿವೇಶಕ್ಕಾಗಿನ ಹೋರಾಟದ ಫಲವಾಗಿ ರಾಮನಗರದಲ್ಲಿ 7 ಎಕರೆ ಜಮೀನನ್ನು ವಸತಿ ನಿವೇಶನ ರಹಿತರ ನಿವೇಶನಕ್ಕಾಗಿ ಮೀಸಲಿರಿಸಲಾಗಿದೆ. ಬೆಂಗಳೂರು ನಗರದಲ್ಲಿಯೂ ಸಹಾ ಸರ್ಕಾರ ಜಮೀನು ನೀಡಿ ಬಿಡಿಎ ಮೂಲಕ ನಿರ್ಮಿಸಿರುವ ವಸತಿ ಸಮುಚ್ಚಯಗಳು ಹೋರಾಟದ ಫಲವಾಗಿದೆ. ಬಡವರು ಸ್ಲಂಗಳಲ್ಲಿ ಮಾತ್ರ ಸ್ವಂತ ಮನೆ ಹೊಂದಲು ಸಾಧ್ಯ. ಸ್ಲಂಗಳ ಬಡವರ ಪೈಕಿ ಶೇ.57 ರಷ್ಟು ಮಂದಿ ಮನೆ ಮಾಲೀಕತ್ವ ಹೊಂದಿದ್ದಾರೆ. ಇದಕ್ಕೆ ವಿರುದ್ಧವಾಗಿ ನಗರದ ಇತರ ಬಡಾವಣೆಗಳಲ್ಲಿ ವಾಸವಿರುವ ಬಡವರ ಪೈಕಿ ಶೇ.81 ರಷ್ಟು ಮಂದಿ ಬಾಡಿಗೆ ಮನೆಗಳಲ್ಲಿ ಇದ್ದಾರೆ. ಬೆಂಗಳೂರಿನ ಹಳ್ಳಿಗಳಲ್ಲಿರುವ ಬಡವರ ಪೈಕಿ ಶೇ.75 ರಷ್ಟು ಮಂದಿಗೂ ಬಾಡಿಗೆ ಮನೆಗಳೇ ಗತಿ. ದುಬಾರಿಯಾಗುತ್ತಿರುವ ಮನೆ ಬಾಡಿಗೆ ವಿರುದ್ಧ, ಮನೆ ಬಾಡಿಗೆ ನಿಯಂತ್ರಣಕ್ಕೆ ಒತ್ತಾಯ ವ್ಯಾಪಕವಾಗುತ್ತಿದೆ. ಬೆಂಗಳೂರಿನಲ್ಲಿ ಶೇ.29.2 ಕಡು ಬಡವರು ಕೊಳೆಗೇರಿಗಳಲ್ಲಿದ್ದರೆ, ಶೇ.63.2 ಕಡು ಬಡವರು ಇತರೆ ಬಡಾವಣೆಗಳಲ್ಲಿದ್ದಾರೆ ಎಂದು ನಿಯಾಸ್ ವರದಿ ನಿರೂಪಿಸಿದೆ. ವರದಿಯ ಪ್ರಕಾರ ಶೇ.40.4 ಜನತೆ ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದಾರೆ. ಶೇ.3 ಮನೆಗಳಲ್ಲಿ ಶೌಚಾಲಯಗಳಿಲ್ಲ. ಶೇ.10.2 ಜನತೆ ಸಿರಿವಂತರಿದ್ದಾರೆ.

ಕುಡಿಯುವ ನೀರಿನ ದರ ಏರಿಕೆ ವಿರುದ್ಧ ಚಳುವಳಿ ನಡೆದಿದೆ. ಕಾವೇರಿ ನೀರನ್ನು ಒದಗಿಸುವಲ್ಲಿ ವಿಳಂಬ, ದಂಡ ವಿಧಿಸುವುದರ ವಿರುದ್ಧ ಜನಾಭಿಪ್ರಾಯ ಮೂಡಿಸಲು ಪ್ರತಿಭಟಿಸಲು ಸಿಪಿಐ(ಎಂ) ಯತ್ನಿಸಿದೆ. ಶಾಶ್ವತ ನೀರಾವರಿ ಯೋಜನೆಗಾಗಿ ಪ್ರತಿಭಟನೆಗಳನ್ನು ನಡೆಸಿದೆ.

ಬೆಂಗಳೂರು ನಗರವು ಸಮುದ್ರ ಮಟ್ಟದಿಂದ 3,000 ಅಡಿ ಎತ್ತರದಲ್ಲಿದ್ದು, ಬಂಗಾಳಕೊಲ್ಲಿ ಹಾಗು ಅರಬ್ಬಿ ಸಮುದ್ರದಿಂದ ಬಹುತೇಕ ಸಮಾನ ಅಂತರದಲ್ಲಿರುವ ಕಾರಣ, ಎರಡು ಕಡೆಯಿಂದ ಬರುವ ಚಂಡಮಾರುತಗಳು ನಗರಕ್ಕೆ ಮಳೆ ತರುವ ಎಲ್ಲಾ ಸಾಧ್ಯತೆಗಳಿರುವುದನ್ನು ಪರಿಗಣಿಸದ ವ್ಯವಸ್ಥೆ ಮತ್ತು ನಗರ ಕೇಂದ್ರ ಹಲವು ಬಡಾವಣೆಗಳಲ್ಲಿ ಸಮರ್ಪಕ ಒಳಚರಂಡಿಯ ಕೊರತೆ ಹಾಗು

**ಪುಟ 15 ಕ್ಕೆ**

## ನೂತನ ಜಿಲ್ಲಾ ಕಾರ್ಯದರ್ಶಿಯಾಗಿ ಕೆ.ಎನ್.ಉಮೇಶ್



ಸಮ್ಮೇಳನವು 19 ಜನರ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು. 7 ಜನರ ಕಾರ್ಯದರ್ಶಿ ಮಂಡಳಿಯನ್ನು ಹಾಗೂ ಕೆ.ಎನ್. ಉಮೇಶ್ ಅವರನ್ನು ಕಾರ್ಯದರ್ಶಿಯನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಕರ್ನಾಟಕ ರಾಜ್ಯದಲ್ಲಿ ಗ್ರಾಮ ಪಂಚಾಯ್ತಿಗಳಲ್ಲಿ ನಾನಾ ಹುದ್ದೆಗಳಲ್ಲಿ ಕೆಲಸ ಮಾಡುವ ನೌಕರರು ತಮ್ಮ ಸೇವೆಯ ಖಾಯಂಮಾತಿಗಾಗಿ ನ್ಯಾಯಬದ್ಧ ವೇತನಕ್ಕಾಗಿ ನಡೆಸುತ್ತ ಬರುತ್ತಿರುವ ಹೋರಾಟ ಒಂದು ಪ್ರಮುಖ ಘಟ್ಟಕ್ಕೆ ಬಂದಿದೆ. 'ಅನುಮೋದನೆಗೊಂಡ' ಪಂಚಾಯತ್ ನೌಕರರ ಸೇವೆ ಖಾಯಮಾತಿ ಸರಕಾರದ ಪರಿಶೀಲನೆಯಲ್ಲಿದೆ. ಅಧಿಕಾರ ವಿಕೇಂದ್ರೀಕರಣ ಒಂದು ಮಹತ್ವ ಆಶಯ. ಹಗಲು–ಇರುಳು ದುಡಿಯುವ ಈ ಸಿಬ್ಬಂದಿಯ ಪರಿಶ್ರಮವಿಲ್ಲದೇ ಅದು ಯಶಸ್ವಿಯಾಗಲಾರದು. ಆದ್ದರಿಂದ ನೌಕರರ ಮಧ್ಯೆ ಅನುಮೊದನೆ ಆದವರು, ಇಲ್ಲದವರು ಎಂಬ ಹೆಸರಿನಲ್ಲಿ ತಾರತಮ್ಯ ಮಾಡದೇ ಸರಕಾರ ಎಲ್ಲ ಸಿಬ್ಬಂದಿಯನ್ನು ಖಾಯಂ ಮಾಡಬೇಕು.
ಈ ಸಂದರ್ಭದಲ್ಲಿ ಪಂಚಾಯತ್ ನೌಕರರ ಚಳುವಳಿ ಬೇಡಿಕೆಗಳ ಕುರಿತು ಬರೆದಿದ್ದಾರೆ

ಸಿಐಟಿಯು ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಎಸ್. ವರಲಕ್ಷ್ಮಿಯವರು.

## ಅಧಿಕಾರ ವಿಕೇಂದ್ರೀಕರಣದ ಸಾಕಾರಕ್ಕಾಗಿ ದುಡಿಯುತ್ತಿರುವ

# ಗ್ರಾಮ ಪಂಚಾಯ್ತಿ ನೌಕರರ ಬದುಕು ಬದಲಾಗುವುದು ಬೇಡವೇ?

**ತಲೆಯ ಮೇಲೆ ಕೈ ಹೊತ್ತು, ಕಣ್ಣಗಲಿಸಿ ಕುಳಿತವರು...**

ಸಿಐಟಿಯುವಿನ ಸಭೆಗಳಿಗಾಗಿ ನಾನು ಹಲವು ಜಿಲ್ಲೆಗಳಿಗೆ ಪ್ರವಾಸ ಮಾಡುತ್ತಾ ಇರುತ್ತೇನೆ. ನಮ್ಮ ಸಭೆಗಳಿಗೆ ಬರುವಂತಹವರು ಹೆಚ್ಚಿನವರು ಗ್ರಾಮಾಂತರ ಪ್ರದೇಶದ ಅಸಂಘಟಿತ ಕ್ಷೇತ್ರಗಳಲ್ಲಿ ಕೆಲಸ ಮಾಡುವವರು. ತುಂಬಾ ವಯಸ್ಸಾದವರು, 'ಹಿರಿಯರು', ಮಧ್ಯವಯಸ್ಸಿನವರು. ಅವರಲ್ಲಿ ಅತ್ಯಂತ ಹಿರಿಯ ಪುರುಷರು ಯಾರು ಎಂದ–ರೆ ಅವರೇ ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ಮಾಡುವ ವಾಟರ್ ಮನ್‌ಗಳು(ನೀರಗಂಟಿಗಳು), ಜವಾನರು, ಕಸಗುಡಿಸುವವರು. ಇವರು ಸಭೆ ಪ್ರಾರಂಭವಾಗುವ ತನಕ ಸಭಾಂಗಣದ ಹೊರಗೆ ಬೀಡಿ ಸೇದುತ್ತಾ ಮರದ ಕೆಳಗೆ, ಕಲ್ಲಿನ ಮೇಲೆ, ನೆಲದ ಮೇಲೆಯೇ ಕುಳಿತಿರುತ್ತಾರೆ. ಸಭೆ ಪ್ರಾರಂಭ ಎಂದ ಕೂಡಲೇ ಒಳಗೆ ಬರುತ್ತಾರೆ. ಕೆಲವರದು ಪಂಚೆ, ಕೆಲವರದು ಚಡ್ಡಿ ಉಡುಪು. ಅವರು ಸಭೆಯಲ್ಲಿ ತಲೆಯ ಮೇಲೆ ಕೈ ಹೊತ್ತೇ ಕುಳಿತು, ಕಣ್ಣುಗಳನ್ನು ಅಗಲಿಸಿ ನಮ್ಮ ಮಾತುಗಳನ್ನು ಆಲಿಸುತ್ತಾರೆ. ಅವರ ಮುಖಗಳನ್ನು ನೋಡಿದರೆ ಸಾಕು ಹಲವು ದುಗುಡಗಳಿಂದ ಕೂಡಿರುವುದು ಗೊತ್ತಾಗುತ್ತದೆ. ನಾನು ಇವರನ್ನು ಯಾವಾಗಲೂ 'ಯಜಮಾನರೇ..' ಎಂದು, ಇಲ್ಲ ಅಂದರೆ 'ಅಣ್ಣಾವ್ರೆ..' ಎಂದು ಕರೆಯುತ್ತೇನೆ. ಹಾಗೆ ಕರೆದರೆ ಇವರಿಗೆ ಬಹಳ ಖುಷಿ.!

ಖುಷಿ ಯಾಕೆ ಗೊತ್ತೇ ? ಇವರಿಗೆ ಸಿಗುವುದು ಅತ್ಯಂತ ಕಡಿಮೆ ಸಂಬಳ. ಅಂದರೆ ತಿಂಗಳಿಗೆ 300 ರೂ. 500 ರೂ. ಗೆ ಸಹ ಇವರು ಕೈ ಚಾಚಿ, ಬೇಡಿ ತೆಗೆದುಕೊಳ್ಳುವ ಪರಿಸ್ಥಿತಿ ಇಂದಿಗೂ ಇದೆ. ಇವರಲ್ಲಿ 50, 60, 65, 70 ವರ್ಷ ವಯಸ್ಸಾಗಿರುವವರು ಇದ್ದಾರೆ. ಪಂಚಾಯ್ತಿ ಚುನಾವಣೆಗಳಲ್ಲಿ ಆಯ್ಕೆ ಆಗಿ ಬಂದ ಯುವ ಚುನಾಯಿತ ಪ್ರತಿನಿಧಿಗಳು ಚೇರಿನ ಮೇಲೆ ಕೂತ–ರೆ, ಇವರು ಕೆಳಗೆ ಕೂರಬೇಕು. ಹಲವಾರು ಸಾರಿ ವಯಸ್ಸಿಗೂ ಮರ್ಯಾದೆ ಕೊಡದೆ ಏಕವಚನದಲ್ಲಿ ಸಂಭೋಧಿಸಲಾಗುತ್ತದೆ. ಸಾಧ್ಯವಾದಷ್ಟು ಅವರ ಮುಷ್ಠಿಯಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸಲಾಗುತ್ತದೆ. ಅಧಿಕಾರಸ್ಥರ ಕೈಯಲ್ಲಿ, ಅಧಿಕಾರಿಗಳ ಕೈಯಲ್ಲಿ ಏಕವಚನದಲ್ಲಿ ಕರೆಸಿಕೊಂಡು, ಬೈಯಿಸಿ ಕೊಂಡು, ಸೂಕ್ತ ವೇತನವಿಲ್ಲದ ಬಡತನದಿಂದ ಇವರ ಬದುಕು ಜರ್ಜರಿತವಾಗಿದೆ.

**ಹಿನ್ನೆಲೆ**

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಕಮ್ಯೂನಿಸ್ಟರ ಆಶಯ ಇದ್ದದ್ದು ಸ್ವಾತಂತ್ರ್ಯಾನಂತರ ಕಟ್ಟಕಡೆಯ ಮನುಷ್ಯನಿಗೂ ಅಧಿಕಾರ ಸಿಗಬೇಕೆಂಬ ಆಶಯ. ಮಹಾತ್ಮ ಗಾಂಧೀಜಿಯವರು ಗ್ರಾಮ ಸ್ವರಾಜ್ಯದ ಬಗೆಗೆ ಅಧಿಕಾರ ವಿಕೇಂದ್ರೀಕರಣದ ಬಗೆಗೆ ಸಾಕಷ್ಟು ಪ್ರತಿಪಾದಿಸಿದ್ದರು. ಇಂತಹ ಉದ್ದೇಶವನ್ನು ಹೇಳಿಕೊಂಡು 1956 ರಲ್ಲಿ ಅಧಿಕಾರ ವಿಕೇಂದ್ರೀಕರಣದ ಪರಿಕಲ್ಪನೆ ಆಧಾರದಲ್ಲಿ ಸ್ಥಳೀಯ ಸಂಸ್ಥೆಗಳು ಹುಟ್ಟನ್ನು ಪಡೆದವು. ಇದರ ಭಾಗವಾಗಿ ಗ್ರಾಮ ಪಂಚಾಯ್ತಿಗಳು ಹುಟ್ಟಿಕೊಂಡವು. ಈ ಪಂಚಾಯ್ತಿಗಳಲ್ಲಿ ಕರ ವಸೂಲಿ ಮಾಡಲು ಕರವಸೂಲಿಗಾರ(ಬಿಲ್ ಕಲೆಕ್ಟರ್), ನೀರು ಬಿಡುವವರು(ವಾಟರ್ ಮನ್), ಜವಾನರು, ಕಸಗುಡಿಸುವವರನ್ನು ಅಂದಿನಿಂದಲೇ ಯಾವುದೇ ರೀತಿಯ ಖಾತ್ರಿಯಾದಂತಹ ನಿರ್ದೇಶನಗಳು ಇಲ್ಲದೇ ಗ್ರಾಮ ಪಂಚಾಯ್ತಿಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳಲಾಯಿತು. 1993 ರ ತನಕ ಪಂಚಾಯ್ತಿಯೇ ಇವರ ಮಾಲೀಕ ಸಂಸ್ಥೆಯಾಗಿತ್ತು.



ಬೆಂಗಳೂರು

1993 ರ ನಂತರದಲ್ಲಿ ರಾಜ್ಯ ಸರ್ಕಾರ ಈ ಜವಾಬ್ದಾರಿಯನ್ನು ಹೊತ್ತುಕೊಂಡಿತು. ಅ ಸಂದರ್ಭದಲ್ಲಿ ಅವರಿಗೆ ವೇತನ, ಹುದ್ದೆ ಮತ್ತು ಇತರ ಕೆಲವು ಸವಲತ್ತುಗಳನ್ನು ಕೊಡಬೇಕೆಂದೂ ನಿರ್ದೇಶಿಸಿತು. ಆದರೆ ಇವರು ಬಹಳಷ್ಟು ಗ್ರಾಮ ಪಂಚಾಯ್ತಿ ಮತ್ತು ಸ್ಥಳೀಯ ಸಂಸ್ಥೆಗಳು ಪಾಳೇಗಾರಿ, ಬಂಡವಾಳಶಾಹಿ ಭೂಮಾಲಕರ ಕಪಿ ಮುಷ್ಠಿಯಲ್ಲಿದ್ದುದರಿಂದ ನಿರ್ದೇಶನ ಜಾರಿಯಾಗಲಿಲ್ಲ.

**ಗ್ರಾಮ ಪಂಚಾಯ್ತಿ ನೌಕರರ ಸಂಘದ ರಚನೆ ಮತ್ತು ಚಳುವಳಿ**

1988 ರಲ್ಲಿ ನಮ್ಮ ರಾಜ್ಯದ ಎಡಪಂಥೀಯ ಚುಳುವಳಿಯನ್ನು ಕಟ್ಟಿದ ಪ್ರಮುಖ ನಾಯಕರಲ್ಲಿ ಒಬ್ಬರಾದ ಕಾ॥ ಎನ್.ಕೆ. ಉಪಾಧ್ಯಾಯರವರು ಮತ್ತು ಕಾ॥ ಮಾರುತಿ ಮಾನ್ಪಡೆಯವರು ಈ ನೌಕರರನ್ನು ಬಿಜಾಪುರ, ಗುಲ್ಬರ್ಗಾ ಮತ್ತು ಬೀದರ್‌ಗಳಲ್ಲಿ ಸಂಘಟಿಸಿ ರಾಜ್ಯ ಮಟ್ಟದ ಸಂಘವನ್ನು ಸ್ಥಾಪಿಸಿದರು. ನಂತರ ಸಂಘಟನೆ ಇಂದು ಹಲವು ಸಂಗಾತಿಗಳ ಪರಿಶ್ರಮದಿಂದ ದೊಡ್ಡ ಪ್ರಮಾಣದಲ್ಲಿ ಬೆಳೆದು ನೌಕರರ ನ್ಯಾಯಬದ್ದ ಹಕ್ಕುಗಳಿಗಾಗಿ ನಿರಂತರ ಹೋರಾಟಗಳನ್ನು ನಡೆಸುತ್ತಿದೆ.

ಗ್ರಾ. ಪಂ. ನೌಕರರಿಗೆ 1993–94ರಲ್ಲಿ ಗ್ರಾಮ ಪಂಚಾಯ್ತಿಗಳಲ್ಲಿ ಸಿಬ್ಬಂದಿಯ ಸ್ವರೂಪ, ವೇತನ ಶ್ರೇಣಿ ಮತ್ತು ನೇಮಕಾತಿ ವಿಧಾನವನ್ನು ನಿರ್ಧಿಷ್ಟಪಡಿಸಿತು. ಇದರ ಪ್ರಕಾರ ಗುಮಾಸ್ತ, ಅಕೌಂಟೆಂಟ್, ಬೆರಳಚ್ಚುಗಾರರು, ಬಿಲ್ ಕಲೆಕ್ಟರ್, ವಾಟರ ಮನ್, ಪಂಪ್ ಆಪರೇಟರ್ ಹಾಗೂ ಮೆಕಾನಿಕ್, ಜವಾನ/ಅಟೆಂಡರ್ ಅನ್ನುವ ಹುದ್ದೆಗಳನ್ನು ನಿರ್ಧಿಷ್ಟ ಪಡಿಸಿ ಕ್ರಮವಾಗಿ 990, 990, 600, 500 ರೂ. ಗಳಿಗೆ ದುಡಿಸುತ್ತಿದ್ದರು.

ಸಂಘಟನೆಯ ನಿರಂತರ ಹೋರಾಟದ ಫಲವಾಗಿ 2006–08 ರಲ್ಲಿ ಮತ್ತೊಂದು ಆದೇಶ ಹೊರಟಿತು. ಅದರಲ್ಲಿ ಸ್ವಚ್ಛತಾಗಾರರು ಎಂಬ ಹೊಸ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳಲು ಅವಕಾಶವಾಯಿತು. ಮತ್ತು ಸಿಬ್ಬಂದಿ ವರ್ಗದ ಪದನಾಮ ಹಾಗೂ ವಿದ್ಯಾರ್ಹತೆಯನ್ನು ಪರಿಷ್ಕರಿಸಲಾಯಿತು.

ಗುಮಾಸ್ತರಿಗೆ ಮೊದಲು ಎಸ್‌ಎಸ್‌ಎಲ್‌ಸಿ, ಈಗ ಪದವಿ, ಗಣಕಯಂತ್ರ ಪರಿಣತಿ. ಕರವಸೂಲಿಗಾರರಿಗೆ ಮೊದಲು ಎಸ್‌ಎಸ್‌ಎಲ್, ಈಗ ಗಣಕಯಂತ್ರ ಪರಿಣತಿ, ಕಾವಲುಗಾರ/ ವಾಟರಮನ್ ಹುದ್ದೆಗೆ ಮೊದಲು 7ನೇ ತರಗತಿ, ಈಗ ಎಸ್‌ಎಸ್‌ಎಲ್‌ಸಿ ಉತ್ತೀರ್ಣತೆ, ಹೊಸ ಹುದ್ದೆಯಾದ ಸ್ವಚ್ಛತಾಗಾರಿಗೆ 7ನೇ ತರಗತಿ ಉತ್ತೀರ್ಣರಾಗಿರಬೇಕೆಂದೂ ಪರಿಷ್ಕರಿಸಲಾಗಿದೆ.

ನೇಮಕಾತಿ ಹೊಂದಿದ ಗ್ರಾಮ ಪಂಚಾಯ್ತಿ ನೌಕರರಿಗೆ ಒಂದು ವರ್ಷ ಪರೀಕ್ಷಾರ್ಥ ಅವಧಿ, ಶಿಸ್ತು ಪ್ರಾಧಿಕಾರ ಗ್ರಾ.ಪಂ.ಗೆ, ಈ ಕಾರ್ಮಿಕರಿಗೆ 15 ದಿನಗಳ ಸಾಂದರ್ಭಿಕ ರಜೆ, 15 ದಿನಗಳ ಗಳಿಕೆ ರಜೆ(ಸಂಬಳ ರಹಿತ) ಮಹಿಳೆಯರಿಗೆ ಸೇವಾವಧಿಯಲ್ಲಿ 90 ದಿನಗಳಿಗೆ ಮೀರದಂತೆ ಹೆರಿಗೆ ರಜೆ, ನಿವೃತ್ತಿಯಾಗುವ ನೌಕರರಿಗೆ ಗ್ರಾಜ್ಯುಟಿ, ವರ್ಷಕ್ಕೆ(15 ದಿನಗಳಂತೆ 15 ತಿಂಗಳ ವೇತನ ಮೀರದಂತೆ). ಇದನ್ನು ಗ್ರಾಮ ಪಂಚಾಯ್ತಿಯ ಒಟ್ಟಾರೆ ಆದಾಯದಲ್ಲಿ ಭರಿಸುವುದು. ಹಾಗೆಯೇ ಕಾರ್ಮಿಕ ಕಾಯ್ದೆಯನ್ವಯ ನೀಡಲಾಗುತ್ತಿರುವ ಕನಿಷ್ಟ ಮಾಸಿಕ ವೇತನ 5,687 ರಿಂದ 7,122 ರವರೆಗೆ ಕೊಡಲು ಆದೇಶಿಸಲಾಗಿತ್ತು.

ಆದರೆ ಈ ಆದೇಶಗಳು ಕನಿಷ್ಠ ಮಟ್ಟದಲ್ಲಿ ಮಾತ್ರ ಜಾರಿಯಾಯಿತು. ಈ ಆದೇಶಗಳು ಜಾರಿಯಾಗಬೇಕೆಂದೂ ಒತ್ತಾಯಿಸಲು ಪುನಃ ಸಂಘಟನೆ ಹಲವು ನಿರಂತರ ಹೋರಾಟಗಳನ್ನು ನಡೆಸಿತು. ಆಗ ಸರ್ಕಾರ ಪಂಚಾಯ್ತಿಗಳಿಗೆ ಕೊಡುವ ಅನುದಾನದಲ್ಲಿ 40% ನೌಕರರ ಸಂಬಳ ಸವಲತ್ತುಗಳಿಗೆ ಮಾತ್ರ ಉಪಯೋಗಿಸಬೇಕೆಂದೂ ಆದೇಶಿಸಿತು. ಆದರೂ ಹಲವಾರು ಗ್ರಾಮ ಪಂಚಾಯ್ತಿಗಳು ಇಂದಿಗೂ ಈ ಆದೇಶ ಜಾರಿ ಮಾಡಿಲ್ಲ.

3ನೇ ಹಣಕಾಸು ಆಯೋಗವು ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಹಂಚಿಕೆ ಮಾಡಿರುವ ಅನುದಾನದಲ್ಲಿ 32% ರಷ್ಟು ಹಣವನ್ನು ಜಿಲ್ಲಾ ಪಂಚಾಯ್ತಿ, ತಾಲೂಕು ಪಂಚಾಯ್ತಿ ಮತ್ತು ಗ್ರಾ. ಪಂ.ಗಳ ಸಿಬ್ಬಂದಿ ವೇತನಕ್ಕೆ ಬಳಸಬೇಕೆಂದೂ ನಿರ್ದೇಶಿಸಿದೆ.

ಪಂಚಾಯಿತ್ ರಾಜ್ ಅಧಿನಿಯಮ 1993ರ ಸೆಕ್ಷನ್ 206 – ಸರಕಾರವು ಪ್ರತಿಯೊಂದು ಗ್ರಾ. ಪಂ. ಅದು ಕಾಲ ಕಾಲಕ್ಕೆ ಅನುಸೂಚಿಸಬಹುದಾದಂತೆ ಅಂತಹ ಮೊಬಲಗಿನ, ಆದರೆ ರೂ. 5 ಲಕ್ಷ ರೂ. ಗಳಿಗೆ ಕಡಿಮೆ ಇಲ್ಲದ ಅನುದಾನ ನೀಡತಕ್ಕದ್ದು. ಅದನ್ನು ಚಾರ್ಜಗಳನ್ನು ಭರಿಸಲು, ನೀರು ಸರಬರಾಜು ಯೋಜನೆಗಳು, ನೈರ್ಮಲ್ಯ ವ್ಯವಸ್ಥೆ ನಿರ್ವಹಣೆ ಮತ್ತು ಇತರ ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸತಕ್ಕದ್ದು. ಅನುದಾನದ ಯಾವುದೇ ಭಾಗವನ್ನು, ಮೇಲಿನ ಉದ್ದೇಶಗಳಿಗೆ ಸಂಬಂಧಿಸಿರದ ಸಿಬ್ಬಂದಿ ವೆಚ್ಚಗಳಿಗೆ ಖರ್ಚು ಮಾಡತಕ್ಕದ್ದಲ್ಲ.

**'ಶಾಸನಬದ್ಧ ಬಜೆಟ್ ಅನುದಾನದ 40% ರಷ್ಟು ಸಿಬ್ಬಂದಿ ವೇತನಕ್ಕೆ' ಎಂಬುದೂ ಜಾರಿಯಾಗುತ್ತಿಲ್ಲ**

8 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಪ್ರತಿ ಗ್ರಾ. ಪಂ.ಗೆ 10 ಲಕ್ಷ, 8 ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಪ್ರತಿ ಗ್ರಾ. ಪಂ.ಗಳಿಗೆ 12 ಲಕ್ಷ ಶಾಸನಬದ್ಧ ಅನುದಾನವನ್ನು ರಾಜ್ಯ ಬಜೆಟ್‌ನಲ್ಲಿ ಒದಗಿಸಲಾಗಿದೆ. ಈ ಅನುದಾನದಲ್ಲಿ 60% ರಷ್ಟನ್ನು ವಿದ್ಯುತ್ ಬಿಲ್‌ನ್ನು ಪಾವತಿಸಲು, 40% ರಷ್ಟು ಸಿಬ್ಬಂದಿ ವೇತನಕ್ಕಾಗಿ ಎಂದು ಆದೇಶ ನೀಡಲಾಗಿದೆ. ಅದರೆ ಇದು ಜಾರಿಯಾಗುತ್ತಿಲ್ಲ.

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಪರ ಕಾರ್ಯದರ್ಶಿಗಳ ಅಧ್ಯಕ್ಷತೆಯ ಸಮಿತಿ ಶಿಫಾರಸ್ಸುಗಳು**

ರಾಜ್ಯದಲ್ಲಿ 8 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯ ಗ್ರಾ.ಪಂ. 4,211 ಇವೆ. 8 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವವು 1,418 ಇವೆ. ಈ ನೌಕರರ ಒಟ್ಟು ಸಮಸ್ಯೆಗಳನ್ನು ಪರಿಶೀಲಿಸಲು ಮತ್ತು ಪರಿಹಾರಗಳನ್ನು ರೂಪಿಸಲು 'ಗ್ರಾ. ಪಂ. ಸಿಬ್ಬಂದಿಗಳ ನೇಮಕಾತಿ ನಿಯಮಗಳನ್ನು ರೂಪಿಸುವ/ಪರಿಷ್ಕರಿಸುವ ಹಾಗೂ ಗ್ರಾ.ಪಂ. ನೌಕರರ ಇನ್ನಿತರೆ ಬೇಡಿಕೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಸರ್ಕಾರದ ಆಪರ ಕಾರ್ಯದರ್ಶಿ(ಆಡಳಿತ) ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ ಎಂ.ಎಸ್.ಸ್ವಾಮಿ–ಅಧ್ಯಕ್ಷತೆಯಲ್ಲಿ ಪಿ. ಶಿವಶಂಕರ್ (ಅಬ್ದುಲ್ ನಜೀರ ಸಾಬ್ ರಾಜ್ಯ ಗ್ರಾಮೀಣಾಭಿವೃಧಿ ಸಂಸ್ಥೆ), ಅಮರೇಶ ನಾಯಕ, ಬಾಗಲಕೋಟೆ ಜಿಲ್ಲಾ ಪಂಚಾಯ್ತಿ, ಎಂ. ಜಿ. ಶಿವಲಿಂಗಯ್ಯ, ಬೆಂಗಳೂರು ನಗರ ಜಿಲ್ಲಾ ಪಂಚಾಯ್ತಿ, ಶ್ರೀ ಕೃಷ್ಣ ಬುಗಟ್ಯಗೋಳ, ಆರ್ಥಿಕ ಸಲಹೆಗಾರರು, ನಿರ್ದೇಶಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸದಸ್ಯರಾಗಿರುವ ಸಮಿತಿಯನ್ನು ನೇಮಿಸಿದೆ.

**ಸಮಿತಿಯ ಶಿಫಾರಸ್ಸುಗಳು**

- ಗ್ರಾ.ಪಂ.ಗಳಲ್ಲಿ ಡಾಟಾ ಎಂಟ್ರಿ (ಕಂಪೂಟರ್) ಆಪರೇಟರ್ ಸಿಬ್ಬಂದಿಯನ್ನು ಪಂ. ರಾಜ್ ಅಧಿ ನಿಯಮದಡಿ ಸೇರಿಸುವುದು. ನೌಕರರಿಗೆ ಈಗಿರುವ ರಜೆಗಳನ್ನು ಮುಂದುವರಿಸುವುದು. ಮಹಿಳಾ ನೌಕರರಿಗೆ 180 ದಿನಗಳ ಹೆರಿಗೆ ರಜೆ ಕೊಡುವುದು. ಕಾರ್ಮಿಕ ಇಲಾಖೆಯಡಿಯಲ್ಲಿ ಇಎಸ್ಐ ಅಥವಾ ಇತ–ರೇ ಇಲಾಖೆಯಡಿಯಲ್ಲಿರುವ ವೈದ್ಯಕೀಯ ಸೌಲಭ್ಯವನ್ನು ನೀಡುವುದು.
- ಗ್ರಾ.ಪಂ.ಗಳಲ್ಲಿ ನೇಮಕಗೊಂಡು

➡

➡
ಅನುಮೋದನೆಗೆ ಬಾಕಿಯಿರುವ ಪ್ರಸ್ತಾವನೆಗಳನ್ನು ಸದರಿ ನೇಮಕಾತಿಗಳನ್ನು ನಿಯಮಾನುಸಾರ ಧೃಢೀಕರಿಸಿಕೊಂಡು (ಪೂರ್ವಾನುಮತಿ ಷರತ್ತು ಹೊರತುಪಡಿಸಿ) ಭವಿಷ್ಯವರ್ತಿ(ಅನುಮೋದಿಸ ಲಾಗುವ)ದಿನಾಂಕದಿಂದ ಮುಖ್ಯ ನಿರ್ವಾಹಕ ಅಧಿಕಾರಿ ಅನುಮೋದನೆ ನೀಡಬಹುದು. ಗರಿಷ್ಠ 10 ವರ್ಷಗಳ ಸೇವೆಯನ್ನು ಸೇವಾ ಜೇಷ್ಠತೆ ಹಾಗೂ ನಿವೃತ್ತಿ ಉಪದಾನಗಳಿಗೆ ಮಾತ್ರ ಪರಿಗಣಿಸಬಹುದು. ಗ್ರಾ.ಪಂ. ಗಳು ಮಾಡಿಕೊಳ್ಳುವ ನೇಮಕಾತಿಗಳು "ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್‌ರವರು ಅನುಮೋದನೆ ನೀಡಿದ ದಿನಾಂಕದಿಂದ ಜಾರಿಗೆ ಬರುತ್ತವೆ".

- ಗ್ರಾ.ಪಂ.ಗಳಿಗೆ 3 ಲಕ್ಷ ವಿಶೇಷ ಅನುದಾನ. ಸಿಬ್ಬಂದಿಗಳ ವೇತನ ಬಾಬ್ತು 40% ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಸಬಾರದೆಂಬ ಕಡ್ಡಾಯವಾದ ಸೂಚನೆ. ಪಿ.ಎಫ್. ವಿಷಯದಲ್ಲಿ 'ಉದ್ಯೋಗದಾತರ ಪಾಲ'ನ್ನು ಪಾವತಿಸದಿದ್ದರೆ ಶಿಕ್ಷಾರ್ಹ ಅಪರಾಧವಾದ್ದರಿಂದ ಅದರ ಕಟ್ಟುನಿಟ್ಟಿನ ಜಾರಿಗೆ ಆದೇಶ.
- ಈ ನೌಕರರಿಗೆ ಸರ್ಕಾರಿ ನೌಕರರ ಕನಿಷ್ಠ ವೇತನ ಶ್ರೇಣಿ ಮಾಸಿಕ 9,600 ದಿಂದ 14,550 ರೂ. ನೀಡುವುದು. 11,600 ದಿಂದ 21,000 ರೂ. ನೀಡುವುದನ್ನು ಪರಿಶೀಲಿಸಬಹುದು.
- ಕರವಸೂಲಿಗಾರ, ಸ್ವಚ್ಛತಾಗಾರ, ವಾಹನ ಚಾಲಕ ಮತ್ತು ಡಾಟಾಎಂಟ್ರಿ ಅಪರೇಟರ್‌ಗಳ 14,515 ಹೆಚ್ಚುವರಿ ಹುದ್ದೆಗಳ ಸ್ಥಾಪನೆ ಮಾಡಬಹುದು.

**ಜಾರಿಗೆ ಬಾರದ 'ಸಂಪನ್ಮೂಲ ಹಂಚಿಕೆ' ನಿರ್ದೇಶನ**

ಅಧಿಕಾರ ವಿಕೇಂದ್ರೀಕರಣದ ಮುಖ್ಯ ಉದ್ದೇಶಗಳಲ್ಲಿ ಸಂಪನ್ಮೂಲ ಹಂಚಿಕೆಯೂ ಒಂದು. ಕೇಂದ್ರ ಸರ್ಕಾರ ರಾಜ್ಯಗಳೊಂದಿಗೆ ಸಂಪನ್ಮೂಲ ಹಂಚಿಕೆ ಮಾಡುವಂತೆ, ಪಂಚಾಯಿತಿಗಳಿಗೂ ಒಂದು ವ್ಯವಸ್ಥೆಯನ್ನು ಸಂವಿಧಾನ ತಿದ್ದುಪಡಿಯ ಮೂಲಕ ಮಾಡಿದೆ. ಸಂವಿಧಾನದ 73ನೇ ತಿದ್ದುಪಡಿಯಲ್ಲಿ ಪಂಚಾಯತಿಗಳ ಆರ್ಥಿಕ ಪರಿಸ್ಥಿತಿಯನ್ನು ಕಾಲಕಾಲಕ್ಕೆ ಪರಿಶೀಲಿಸಲು ರಾಜ್ಯ ಹಣಕಾಸು ಆಯೋಗವನ್ನು 5 ವರ್ಷಗಳಿಗೊಮ್ಮೆ ರಚಿಸುವುದನ್ನು ಕಡ್ಡಾಯ ಮಾಡಲಾಗಿದೆ. (ಕಲಂ 241 ಐ) ಹಣಕಾಸು ಅಯೋಗದ ಕೆಲಸವೆಂದರೆ ರಾಜ್ಯಗಳಿಗೆ ಬರುವ ತೆರಿಗೆ, ಕರ, "ಶುಲ್ಕ ಮೊದಲಾದ ನಿವ್ವಳ ಆದಾಯದಲ್ಲಿ ಒಂದು ಪಾಲನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕೊಡುವುದು ಮತ್ತು ಅದನ್ನು ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ನಡುವೆ ಹಂಚುವುದು. ಪಂಚಾಯತ್ ರಾಜ್ ಸಂಸ್ಥೆಗಳೇ ಸಂಗ್ರಹಿಸಬಹುದಾದ ತೆರಿಗೆ, ಕರ, ಶುಲ್ಕ ಇವುಗಳನ್ನು ನಿರ್ಧರಿಸುವುದು. ರಾಜ್ಯದ ಸಂಸತ್ ನಿಧಿಯಿಂದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನ ಕೊಡುವುದನ್ನು ನಿರ್ಧರಿಸುವುದು ಮತ್ತು ಪಂಚಾಯಿತಿಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಸೂಚಿಸುವುದು. ರಾಜ್ಯ ಹಣಕಾಸು ಆಯೋಗದ ವರದಿ ಬಂದ ಕೂಡಲೇ ಸರ್ಕಾರ ಅದರ ಮೇಲೆ ಏನು ಕ್ರಮ ಕೈಗೊಂಡಿದೆ ಎನ್ನುವ ವಿವರಣೆಯೊಂದಿಗೆ ರಾಜ್ಯದ ವಿಧಾನ ಸಭೆಯಲ್ಲಿ ಮಂಡಿಸುವ ವ್ಯವಸ್ಥೆಯನ್ನು ರಾಜ್ಯಪಾಲರು ಮಾಡಬೇಕು." ಎಂಬ ಸಂವಿಧಾನ ತಿದ್ದುಪಡಿ ಸ್ಪಷ್ಟವಾಗಿ ಸೂಚಿಸಿದೆ.

ಆದರೆ ಅಧಿಕಾರ ಚುಕ್ಕಾಣಿ ಹಿಡಿದ ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಸರಕಾರಗಳು ಈ ಕರ್ತವ್ಯವನ್ನು ಸರಿಯಾಗಿ ನಿರ್ವಹಣೆ ಮಾಡಲಿಲ್ಲ. ವರದಿಗಳ ಶಿಫಾರಸ್ಸುಗಳನ್ನು ಸಹ ಜಾರಿ ಮಾಡಲಿಲ್ಲ.

**ತಾಲ್ಲೂಕು-ಜಿಲ್ಲಾ ಪಂಚಾಯ್ತಿ ನೌಕರರಿಗೆ ಇಲ್ಲದ ಅನುದಾನದ ಸಮಸ್ಯೆ ಗ್ರಾಮಪಂಚಾಯತ್ ನೌಕರರಿಗೇಕೆ?**

2008 ರಲ್ಲಿ ಕನಿಷ್ಠ ಕೂಲಿ ಕಾಯ್ದೆಯಡಿ 5,600 ರಿಂದ 7,100 ರೂ.ಗಳ ಕನಿಷ್ಠ ಕೂಲಿ ಜಾರಿಗೆ ಅಡೆತಡೆ ಬಂದಿದ್ದು ಅನುದಾನದ ಸಮಸ್ಯೆಯಿಂದ. ಅದರೆ ಈ ಅನುದಾನದ ಸಮಸ್ಯೆ ತಾಲೂಕು ಮತ್ತು ಜಿಲ್ಲಾ ಪಂಚಾಯ್ತಿಗಳ ಸಿಬ್ಬಂದಿಗೆ ಅನ್ವಯಿಸಲಿಲ್ಲ. ಏಕೆಂದರೆ ಅವರನ್ನು ರಾಜ್ಯ 3ನೇ ಹಣಕಾಸು ಅಯೋಗವು ಕಂಡಿಕೆ 28.14 (ಅ ಧ್ಯಾಯ 28) ರಲ್ಲಿ ಪಂಚಾಯಿತ್ ರಾಜ್ ಸಂಸ್ಥೆಗಳಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ವೇತನ ಭಾಗವನ್ನು ಪ್ರತ್ಯೇ ಕ ಘಟಕವಾಗಿ (Devolution of funds) ಕಾಣಿಸಲು ಶಿಫಾರಸ್ಸು ಮಾಡಿದೆ. ಗ್ರಾ.ಪಂ. ನೌಕರರು **'ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ'**ಯಾಗಿರುವುದಿಲ್ಲ. ಅದರೆ ಸದರಿ ಸಿಬ್ಬಂದಿಯು **'ಮಂಜೂರಾದ ಹುದ್ದೆಗಳೆದುರು ಕನಿಷ್ಠ ವೇತನ ಕಾಯ್ದೆಯಡಿ ನಿಗದಿಪಡಿಸಿರುವ ವೇತನವನ್ನು ಪಡೆಯುತ್ತಿರುವ ಗ್ರಾಮ ಪಂಚಾಯ್ತಿಯ ಸ್ಥಳೀಯ ಸಿಬ್ಬಂದಿ'**ಯಾಗಿರುತ್ತಾರೆ.


ಮೂಡಬಿದಿರೆ

ಸರ್ಕಾರಗಳ ತಪ್ಪು ಹೆಜ್ಜೆಗಳ ಪ್ರತಿಫಲವಾಗಿ ಅನುದಾನದ ವಿತರಣೆ, ಅನುದಾನ ಫಲಾನುಭವಿಗಳನ್ನು ತಲುಪುವ ವಿಧಾನಗಳಲ್ಲಿ ದೋಷ, ಭ್ರಷ್ಟಾಚಾರಗಳಿವೆ. ಅಧಿಕಾರದ ವಿಕೇಂದ್ರೀಕರಣ ಜಾರಿ ಸ್ವಲ್ಪ ಮಟ್ಟಿಗಾದರೂ ಯಶಸ್ವಿಯಾಗಿದ್ದರೆ ಅದರ ಕಾರಣಗಳಲ್ಲಿ ಗ್ರಾಮ ಪಂಚಾಯ್ತಿ ನೌಕರರ ಕೊಡುಗೆ ಶ್ರಮ ಮೇಲುಗೈಯನ್ನು ಪಡೆಯುತ್ತದೆ. ಗ್ರಾ.ಪಂ.ಗಳು ನೌಕರರಿಗೆ ಕೊಟ್ಟಿರುವ ಅನುಕೂಲಗಳು ಭದ್ರತೆ ಅಷ್ಟರಲ್ಲೇ ಇದೆ. ಇಂತಹ ಅನಾನುಕೂಲಕರ ಪರಿಸ್ಥಿತಿಗಳ ಮಧ್ಯೆಯೇ ನೌಕರರು ಕರವಸೂಲಿ, ಸ್ವಚ್ಛತೆ, ನೀರು ಪೂರೈಕೆ ಮುಂತಾದ ನಾನಾ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ.

ಭಾರತವನ್ನು ಹಳ್ಳಿಗಳ ದೇಶ ಎನ್ನುತ್ತಾರೆ. ಆದರೆ ಗ್ರಾಮ ಪಂಚಾಯ್ತಿಗಳ ಬಗ್ಗೆ ಇರುವ ಅನಾದಾರಣೆ ಮಾತ್ರ ಇನ್ನೂ ಹೋಗಿಲ್ಲ. ಮೇಲ್ಪಟ್ಟದ ಸ್ಥಾನಗಳಲ್ಲಿ ಮಾತ್ರ ಹುದ್ದೆಗಳಿಗೆ ಸರ್ಕಾರದ ನಿಯೋಜನೆ ಎನ್ನುತ್ತಲಿರುವ ಸರ್ಕಾರ ಈ ವಿಷಯದಲ್ಲಿ ಸರಿಯಾಗಿ ಚಿಂತನೆಯನ್ನು ಮಾಡಬೇಕಿದೆ.

**ನ್ಯಾಯಬದ್ಧ ವೇತನ ಕೊಡಲು ಎಷ್ಟು ಹಣ ಬೇಕು?**

ಗ್ರಾಮ ಪಂಚಾಯತ್ ನೌಕರರ ಖಾಯಮಾತಿಗೆ ಅಡ್ಡ ಇಡಲಾಗುತ್ತಿರುವ ಸರಕಾರದ ವಾದ ಇವರನ್ನು ಸರ್ಕಾರಿ ನೌಕರರ ಶ್ರೇಣಿಗೆ ಸೇರಿಸಬೇಕಾದರೆ ಅಪಾರ ಮೊತ್ತ ಬೇಕಾಗುತ್ತದೆ ಎಂಬುದು. ಅಂದರೆ ಕರವಸೂಲಿಗಾರರ, ಗುಮಾಸ್ತ, ವಾಟರಮೆನ್, ಪಂಪ್ ಅಪರೇಟರ್‌ಗಳಿಗೆ ಮಾಸಿಕ 11,600 ರಿಂದ 21,000 ರೂ.ಗಳ ವೇತನ, ಜವಾನ, ಸ್ವಚ್ಛಗಾರರಿಗೆ 9,600 ರಿಂದ 14,550 ರೂ. ಗಳಂತೆ ಈ ವರದಿಯಲ್ಲಿ ಲೆಕ್ಕ ಹಾಕಲಾಗಿದೆ. ಈಗ ಇವರ ವೇತನಕ್ಕಾಗಿ ಖರ್ಚು ಮಾಡುತ್ತಿರುವುದು ಕೇವಲ ವಾರ್ಷಿಕ 407.33 ಕೋಟಿ ಮಾತ್ರ. ಸರಕಾರದ ಮೇಲಿನ ವೇತನದ ಲೆಕ್ಕಾಚಾರ ಗ್ರಾಮ ಪಂಚಾಯ್ತಿತಿಗೆ 5 ಜನ ಸಿಬ್ಬಂದಿ ಪ್ರಕಾರ. ಆದರೆ ಎಲ್ಲ ಗ್ರಾಮ ಪಂಚಾಯತ್ ನೌಕರರನ್ನೂ ಖಾಯಂ ಮಾಡಿ ಸರ್ಕಾರಿ ವೇತನ ಶ್ರೇಣಿಯನ್ನು ನಿಗದಿಮಾಡಿದರೆ ಹೆಚ್ಚುವರಿಯಾಗಿ 591.09 ಕೋಟಿ ಮಾತ್ರ ಬೇಕಾಗುತ್ತದೆ. ಒಂದು ಲಕ್ಷ ಕೋಟಿ ದಾಟಿರುವ ರಾಜ್ಯ ಸರಕಾರದ ಬಜೆಟ್‌ನಲ್ಲಿ ಇದು ಒಂದು ತೀರಾ ಸಣ್ಣ ಮೊತ್ತ.

**ಅನುಮೋದನೆ ರಹಿತ ನೇಮಕಾತಿಗಳಿಗೆ ಸರಕಾರವೇ ಹೊಣೆಯಲ್ಲವೇ !!**

ಪಂಚಾಯ್ತಿಗಳಲ್ಲಿ ಹೆಚ್ಚಿನ ಕೆಲಸದ ಒತ್ತಡದಿಂದಾಗಿ ಸಿಬ್ಬಂದಿಗಳು ಕೆಲಸ ಅವಧಿಯೇ ಇಲ್ಲದಂತೆ ದುಡಿಯಬೇಕಾಗಿದೆ. ಸರ್ಕಾರದ ಎಲ್ಲಾ ಕಾರ್ಯಕ್ರಮ ಅನುಷ್ಠಾನದೊಟ್ಟಿಗೆ, ಸಮುದಾಯ ಮತ್ತು ಚುನಾಯಿತ ಪ್ರತಿನಿಧಿಗಳ ಜೊತೆಗಿನ ಕೆಲಸವೆಂದರೆ ಹಗಲಿರುಳು ಮೈಮರೆತು ಕೆಲಸದಲ್ಲಿ ತೊಡಗಿಕೊಳ್ಳಬೇಕಾದಂತಹ ಸಂದರ್ಭಗಳು ಹೆಚ್ಚುತ್ತಿವೆ. ಹಳ್ಳಿಗಳ ಜನಸಂಖ್ಯೆ ಹೆಚ್ಚುತ್ತಿರುತ್ತದೆ. ಹಳ್ಳಿಗಳೆಂದರೂ ಸಹ ಭೌಗೋಳಿಕವಾಗಿ ಎಷ್ಟೋ ಗ್ರಾಮಗಳು ದೊಡ್ಡವಾಗಿರುವುದು ಇರುತ್ತದೆ. ಉದಾಹರಣೆಗೆ ಹೋಬಳಿ ಮುಖ್ಯ ಕೇಂದ್ರಗಳು. ಸಣ್ಣನಗರಗಳ ಮುಖ್ಯ ಕೇಂದ್ರಗಳು. ಆದರೆ ಸರ್ಕಾರ ಭೌಗೋಳಿಕ ವ್ಯಾಪ್ತಿ ಮತ್ತು ಜನಸಂಖ್ಯೆಯ ಅಧಾರದಲ್ಲಿ ಸಿಬ್ಬಂದಿಯ ನೇಮಕಾತಿಗೆ ಸ್ಪಷ್ಟ ಸೂಚನೆಗಳನ್ನು ಕೊಟ್ಟಿಲ್ಲ. ಇಲ್ಲಿ ಕೆಲಸದ ಒತ್ತಡದಿಂದ ಗ್ರಾ.ಪಂಚಾಯ್ತಿಗಳೇ ಸ್ಥಳೀಯ ನಿರ್ಧಾರ ತೆ- ಗೆದುಕೊಂಡು ಅಗತ್ಯಕ್ಕೆ ತಕ್ಕ ಹಾಗೆ ನೇಮಕಾತಿ ಮಾಡಿಕೊಂಡಿವೆ. ಈಗ ಸರ್ಕಾರದ ವಾದ 11,239 ಸಿಬ್ಬಂದಿಗೆ ಮಾತ್ರ ಖಾಯಮಾತಿ ಎಂಬುದು. ಆದ- ರೆ ವಾಸ್ತವವಾಗಿ ನೌಕರರಾಗಿ ದುಡಿಯುತ್ತಲಿದ್ದೂ ಅನುಮೋದನೆಯಾಗದೆ ಇರುವವರು 39,494 ಜನರು. ಈಗ ಇವರ ಅನುಮೋದನೆಯನ್ನು ಜಿಲ್ಲಾ ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿಗಳ ವಿವೇಚನೆಗೆ ಬಿಡಲಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಬಾಕಿಯಿರುವ 39,494 ನೌಕರರ ಅನುಮೋದನೆಯನ್ನು ಜಿಲ್ಲಾ ಪಂಚಾಯ್ತಿಗಳು ಮಾಡಬೇಕು. ಅದಕ್ಕೆ ಜಿಲ್ಲಾ ಮಟ್ಟದಲ್ಲಿ ಹೋರಾಟಗಳು ತೀವ್ರವಾಗಬೇಕಿದೆ. ಹಾಗೆಯೇ ಸಮಿತಿಯ ಶಿಫಾರಸ್ಸಿನ ಪ್ರಕಾರ ಸರ್ಕಾರಿ ನೌಕರರ ಶ್ರೇಣಿಯ ವೇತನವನ್ನು ಗಳಿಸಲು ಮುನ್ನುಗ್ಗಬೇಕಿದೆ.

'ಅಹಿಂದ' ಹೆಸರಿನಲ್ಲಿ ಸಾಮಾಜಿಕ ನ್ಯಾಯ ಇತ್ಯಾದಿ ಮಾತನಾಡುವ ಸಿದ್ಧರಾಮಯ್ಯನವರ ಸರ್ಕಾರ ಈ ವರದಿಯನ್ನು ಗಂಭೀರವಾಗಿ ಪರಿಶೀಲಿಸಿ ಅಗತ್ಯವಾಗಿರುವ ಅನುದಾನವನ್ನು ಬಿಡುಗಡೆ ಮಾಡಬೇಕಿದೆ. ಚುನಾವಣೆಗಳ ಮೇಲೆ ಕಣ್ಣಿಟ್ಟು ಕೆಲವು ಜನಪ್ರಿಯ ಯೋಜನೆಗಳನ್ನು ಘೋಷಿಸುವ ಸರ್ಕಾರ ಈ ಗ್ರಾಮ ಪಂಚಾಯ್ತಿ ನೌಕರರಿಗೆ ನ್ಯಾಯ ದೊರಕಿಸಿಕೊಡಬಲ್ಲದೇ.? ●


**ಪಕೀರಪ್ಪ :**



ಬಾಗೇಪಲ್ಲಿ ತಾಲೂಕಿನ ತೋಳ್ಪಲ್ಲಿ ಪಂಚಾಯ್ತಿಯಲ್ಲಿ ಜಲಗಾರನಾಗಿ ಕೆಲಸ ಮಾಡುತ್ತಿದ್ದಾರೆ. 1989 ರಲ್ಲಿ ಬಿಳ್ಳೂರು ಮಂಡಲ್ ಪಂಚಾಯ್ತಿಯಲ್ಲಿ ಕೆಲಸಕ್ಕೆ ಸೇರಿದ್ದರು. ಮಂಡಲ್ ಪಂಚಾಯತ್‌ಗಳು ಗ್ರಾಮ ಪಂಚಾಯಿತಿಗಳಾಗಿ ಬದಲಾದ ನಂತರ ಗ್ರಾಮ ಪಂಚಾಯತ್ ಅಡಿಯಲ್ಲಿ ದುಡಿಯುತ್ತಿದ್ದಾರೆ. ಕೆಲಸಕ್ಕೆ ಸೇರಿದ್ದಾಗ ಇವರ ಸಂಬಳ 45 ರೂ. ಗಳು ಈಗ 1,700 ರೂ. ಸಂಬಳ. 2008 ರಲ್ಲಿ ಜಾರಿಯಾದ ಕನಿಷ್ಠ ಕೂಲಿ ಜಾರಿ ಮಾಡಿಲ್ಲ. 12 ತಿಂಗಳಿನಿಂದ ಈ ಸಂಬಳವೂ ಕೊಟ್ಟಿಲ್ಲ. 3 ಜನ ಮಕ್ಕಳು ತುಂಬಿದ ಸಂಸಾರ ಸಂಪಾದನೆಯಿಲ್ಲದೆ ಇರುವ ಸಣ್ಣ ಜಮೀನಿನಲ್ಲಿ ಬರುವ ಆದಾಯವೇ ಗತಿ. ಕೆಲಸದ ಅವಧಿಯಲ್ಲಿ ಹಳ್ಳಿಗಳಲ್ಲಿ ಕರೆಂಟ್ ಇರುವುದಿಲ್ಲ. ಮಧ್ಯರಾತ್ರಿ, ಬೆಳಗಿನ ಜಾವ ಯಾವಾಗ ಕರೆಂಟು ಬರುತ್ತದೋ ಆಗ ಕೆಲಸಕ್ಕೆ ಹಾಜರಾಗಬೇಕು. ರಾತ್ರಿಗಳಲ್ಲಿ ಕರೆಂಟು ಹೆಚ್ಚು ಇರುವುದರಿಂದ ಆಗ ನೀರು ಬಿಟ್ಟು ಊರ ಹೊರಗಿರುವ ಮೋಟರನ್ನು ಕಾಯ್ದುಕೊಂಡು ಕುಳಿತಿರಬೇಕು. ಪೈಪ್ ರಿಪೇರಿ, ಮೋಟಾರು ರಿಪೇರಿ, ಕರವಸೂಲಿ, ಇನ್ನಿತರ ಎಲ್ಲ ಕೆಲಸಗಳನ್ನು ಮಾಡಬೇಕು.

ಅ ಇವರು ದುಡಿದಿದ್ದರೂ ಇವರ ನೇಮಕಾತಿ ಅನುಮೋದನೆಯಾಗಿಲ್ಲ.

**ನರಸಮ್ಮ :**



ಚೇಳೂರು ಗ್ರಾಮ ಪಂಚಾಯ್ತಿಯಲ್ಲಿ 1989 ರಲ್ಲಿ 300 ರೂ.ಗೆ ಕಸ ಗುಡಿಸುವ ಕೆಲಸಕ್ಕೆ ಸೇರಿದ್ದು. ಈಗ 2,100 ರೂ. ಸಂಬಳ ಸಿಗುತ್ತದೆ. ಕೆಲಸಕ್ಕೆ ಅವಧಿಯಿಲ್ಲ. ಚೇಳೂರು ಹೋಬಳಿ ಕೇಂದ್ರ. 5 ಕೀ.ಮೀ. ನಗರ ವ್ಯಾಪ್ತಿಯಿದೆ. ಇಷ್ಟು ಬೃಹತ್ ಸ್ಥಳವನ್ನು 4 ಜನ ಮಾತ್ರ ಸ್ವಚ್ಛಗೊಳಿಸುತಾರೆ. ಸತ್ತ ನಾಯಿ, ಕಕಸ್ಸು ಎಲ್ಲವನ್ನೂ ಬಾಚಬೇಕು, ಮೋರಿಯನ್ನು ಸ್ವಚ್ಛ ಮಾಡಬೇಕು. ಮಕ್ಕಳ ಮದುವೆಗಾಗಲಿ, ಖಾಯಿಲೆ ಬಿದ್ದಾಗ ಆಗಲಿ ರಜೆ ಸಿಕ್ಕಿಲ್ಲ, ಹೆರಿಗೆಯಾದಾಗಲೂ ಬೇರೆಯವರನ್ನು ಕೆಲಸಕ್ಕೆ ನೇಮಿಸಲಾಗಿತ್ತು. ಮನೆಯಲ್ಲಿ ಏನೇ ಸಾವು – ನೋವು ಆದರೂ ಉದ್ಯೋಗದಾತ ಸಂಸ್ಥೆಯಿಂದ ಸ್ಪಂದನೆಯಿಲ್ಲ. ಇದು ಇವರ ಬದುಕಿನ ಸ್ಥಿತಿ.

# ದೇಹ ವ್ಯಾಪಾರ ... ವೆಂಬ ಅಂತರ ರಾಷ್ಟ್ರೀಯ ಜಾಲ



ಪ್ರಸಕ್ತ

ಕೆ.ಎಸ್. ವಿಮಲಾ

ಪುರುಷ ನಿರ್ಮಿತ ಸಮಾಜದ ಕಟ್ಟುಪಾಡುಗಳಲ್ಲಿ ಮಹಿಳೆಯನ್ನು ಬಂಧಿಸಿಟ್ಟ ನಂತರವೂ ತನ್ನದಲ್ಲದ ತಪ್ಪಿಗೆ ಅವಳಿಂದಲೇ ಬಲಿ ಬೇಡುವ ಸಮಾಜ ನಮ್ಮದು. ಪುರುಷನ ಎಲ್ಲ ಬೇಕು ಬೇಡಗಳನ್ನು ಸುಧಾರಿಸಿಕೊಳ್ಳುವ ಅವಳ ಮೇಲೆ ಲೈಂಗಿಕ ಶೋಷಣೆಯೂ ನಿರಂತರವಾಗಿ ನಡೆಯುತ್ತಿದೆ. ಪುರುಷನ ಲೈಂಗಿಕ ಅಗತ್ಯಗಳನ್ನು ಒಂದು ಅನಿವಾರ್ಯವೆಂಬಂತೆ ನೋಡುತ್ತಲೇ ಮಹಿಳೆಯ ಲೈಂಗಿಕತೆಯ ಬಗ್ಗೆ ಆಲೋಚಿಸುವುದೂ ಅಪರಾಧವೆಂಬ ಧೋರಣೆಯೂ ಇದೆ. ಅದೊಂದು ಅತ್ಯಂತ ಖಾಸಗೀ ಎಂದು ಒಪ್ಪಿಕೊಳ್ಳುತ್ತಲೇ, ಲೈಂಗಿಕ ಕ್ರಿಯೆ ಎಂಬುದಕ್ಕೆ ಇನ್ನಿಲ್ಲದ ಪಾವಿತ್ರ್ಯವನ್ನು ಆರೋಪಿಸಿ ಪುರುಷನ ಲೈಂಗಿಕ ಚಟವನ್ನು ತೀರಿಸಿಕೊಳ್ಳಲೋಸುಗವೇ 'ವೇಶ್ಯೆ'ಯರು ಇರಬೇಕೆಂಬುದನ್ನೂ ಪ್ರತಿಪಾದಿಸುತ್ತದೆ. ಅಷ್ಟೇ ಸಾಲದೆಂಬಂತೆ ಒಂದು ಸ್ವಸ್ಥ ಸಮಾಜದ ಅಗತ್ಯವದೆಂದು ಪ್ರತಿಪಾದಿಸುವವರೂ ಇದ್ದಾರೆ.

**'ಅಪರಾಧಗಳನ್ನು ತಡೆಗಟ್ಟಲು' ಎಂಬ ವಾದ!!**

ಇತ್ತೀತ್ತಲಾಗಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳನ್ನು ತಡೆಗಟ್ಟಲು ವೇಶ್ಯೆಯರನ್ನು ಕಾನೂನು ಬದ್ಧಗೊಳಿಸಿ ಅದನ್ನು ವೇಶ್ಯಾವೃತ್ತಿ ಎಂದು ಪರಿಗಣಿಸಬೇಕೆಂಬ ವಾದವೂ ಎದ್ದಿದೆ. ಈ ವಾದವನ್ನು ಮಾಡುವವರು ಒಂದು ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಅದೇನೆಂದರೆ..ಸೂಳೆಗಾರಿಕೆಗೆ ಈಗ ಕಾನೂನಿನ ಸಮ್ಮತಿ ಇಲ್ಲದಿದ್ದಾಗಲೂ ಬೇರೆ ಬೇರೆ ದೇಶಗಳೂ ಸೇರಿದಂತೆ ಭಾರತದಲ್ಲಿಯೂ ನಡೆದೇ ಇದೆ. ಆದರೂ ಮಹಿಳೆಯರು ಮತ್ತು ಮಕ್ಕಳ ಮೇಲಿನ ಅತ್ಯಾಚಾರಗಳು ಕಡಿಮೆಯಾಗಿಲ್ಲ. ಹಾಗೆ ಹೇಳಿದ ಮಾತ್ರಕ್ಕೆ ವೇಶ್ಯಾಗಾರಿಕೆ ಈಗ ಮಾತ್ರ ಇದೆ ಅಥವಾ ಭಾರತದಲ್ಲಿ ಮಾತ್ರ ಇದೆ ಎಂದೂ ಯಾರೂ ಭಾವಿಸಬೇಕಿಲ್ಲ.



ಪ್ರಾಚೀನ ನಾಗರೀಕತೆಗಳೆಂದು ಕರೆಸಿಕೊಳ್ಳುವ ಗ್ರೀಕ್, ರೋಮ್, ಮುಂತಾದ ನಾಗರೀಕತೆಗಳ ಕಾಲದಲ್ಲಿಯೂ ವೇಶ್ಯಾ ಪದ್ಧತಿ ಜಾರಿಯಲ್ಲಿತ್ತೆಂದು ಇತಿಹಾಸ ಹೇಳುತ್ತದೆ. ಅಂದಿನಿಂದಲೂ ಮಹಿಳೆಯನ್ನು ಭೋಗವಸ್ತುವಾಗಿಯೇ ನೋಡಿದ ಸಮಾಜ ಇಂದಿಗೂ ಅದನ್ನೇ ಮುಂದುವರೆಸಲು ಬಯಸುತ್ತಿದೆ ಎನ್ನುವುದೇ ಇಲ್ಲಿ ಚರ್ಚೆಯ ವಿಷಯ.

ಭಾರತದ ಸಂದರ್ಭಕ್ಕೆ ಮೀಸಲಿರಿಸಿ ಮಾತನಾಡುವುದಾದರೆ, ರಾಜ ಮಹಾರಾಜರ ಕಾಲದಲ್ಲಿ ಆಸ್ಥಾನ ನರ್ತಕಿಯರು, ಗಣಿಕೆ-ಯರು ಇತ್ಯಾದಿ ಹೆಸರಿನಲ್ಲಿ ಮಹಿಳೆಯರನ್ನು ರಾಜ ಮತ್ತವನ ಆಸ್ಥಾನದ ಮೇಲ್ಸ್ತರದ ವ್ಯಕ್ತಿಗಳಿಗೆ ಬಳಸಲಾಗುತ್ತಿತ್ತು. ಈ ಮಹಿಳೆಯರಿಗೆ ತಮ್ಮ ದೇಹ, ಮನಸ್ಸುಗಳ ಮೇಲೆ ಯಾವುದೇ ಅಧಿಕಾರವೂ ಇರಲಿಲ್ಲ. ಅಷ್ಟೇ ಅಲ್ಲ ರಾಜನ ಕೃಪಾ ಕಟಾಕ್ಷವಿರುವಷ್ಟು ದಿನ ಬಿಟ್ಟರೆ ಮತ್ತೆ ಅವಳ ಭವಿಷ್ಯಕ್ಕೂ ಯಾವ ಗತಿಯೂ ಇರಲಿಲ್ಲ. ಕೆಲವು ಸಂದರ್ಭಗಳಲ್ಲಿ ರಾಜನಿಂದ ಉಂಬಳಿಯಾಗಿ ಅಲ್ಪ ಸ್ವಲ್ಪ ಜಮೀನು ಜಹಗೀರುಗಳು ಸಿಗುತ್ತಿದ್ದುದೂ ಇತ್ತಾದರೂ ಅದು ಸಾರ್ವತ್ರಿಕವೇನೂ ಇರಲಿಲ್ಲ. ಸಾಮಾಜಿಕ ಸ್ಥಾನಮಾನಗಳೂ ಇರಲಿಲ್ಲ. ರಾಜನಿಂದ ಹುಟ್ಟಿದ ಮಕ್ಕಳಿಗೆ ಕೂಡ ಯಾವ ಆಸ್ತಿ, ಅಂತಸ್ತು ಅಧಿಕಾರದ ಹಕ್ಕುಗಳಿರಲಿಲ್ಲ. ಈಗ ರಾಜರಿಲ್ಲ, ಆಸ್ಥಾನಗಳಿಲ್ಲ. ಆದರೆ ವೇಶ್ಯಾಗಾರಿಕೆ ಮಾತ್ರ ಅಬಾಧಿತವಾಗಿ ಮುಂದುವರೆದಿದ್ದು ಅದನ್ನು ಕಾನೂನು ಬದ್ಧಗೊಳಿಸಬೇಕೆಂಬ ಹಕ್ಕೊತ್ತಾಯಗಳು ಕೇಳಿಬರುತ್ತಿವೆ.

ಮೇಲ್ನೋಟಕ್ಕೆ ಇದು ಪರಿಸ್ಥಿತಿಯ ಮೋಸದ ಬಲೆಗೆ ಸಿಕ್ಕೋ, ಸಂಪಾದನೆಯ ಕ್ಷಣಿಕ ಆಸೆಗೋ ಸಿಕ್ಕಿ ಈ ವಿಷ ವರ್ತುಲದೊಳಗೆ ಸಿಲುಕಿದ ಮಹಿಳೆಯರಿಗೆ ಅದನ್ನು ಕಾನೂನು ಬದ್ಧಗೊಳಿಸುವ ಮೂಲಕ ಒಂದಿಷ್ಟು ಸಹಾಯವಾಗಬಹುದೆನ್ನುವ ಭಾವನೆ ಇದೆ. ಅವರು ಪೋಲೀಸರಿಂದ, ಪಿಂಪ್‌ಗಳಿಂದ, ಮಧ್ಯವರ್ತಿಗಳಿಂದ, ತನ್ನ ಯೌವನದಲ್ಲಿ ತಾನೂ ಅನುಭವಿಸಿದ ಪಾಡನ್ನು ಮರೆತು ಈಗ 'ಘರವಾಲಿ'ಯಾಗಿರುವ ಮಹಿಳೆಯರಿಂದ ಅನುಭವಿಸುವ ದೌರ್ಜನ್ಯಗಳನ್ನು ಕೇಳುವಾಗ ಯಾರಿಗೂ ಹೀಗೆ ಅನಿಸಬಹುದು. ಆದರೆ ಹಾಗೆ ಯೋಚಿಸುವವರು ಅರ್ಥಮಾಡಿಕೊಳ್ಳಬೇಕಾದುದು ಇಂತಹ ಯಾವುದೇ ಕ್ರಮಗಳು ಮಹಿಳೆಯರಿಗೆ ಘನತೆಯ ಸ್ಥಾನವನ್ನಾಗಲಿ, ಬದುಕಿನ ಹಕ್ಕನ್ನಾಗಲೀ ನೀಡುವುದಿಲ್ಲ. ಬದಲಿಗೆ ಅವಳ ಶೋಷಣೆಯ ನೆಲೆಗಳು ಇನ್ನಷ್ಟು ಹೆಚ್ಚಾಗುತ್ತದಷ್ಟೇ. ಅಲ್ಲದೇ ಅದಕ್ಕೆ ಕಾನೂನಿನ ಮುದ್ರೆ ಕೂಡ ಸಿಕ್ಕಂತಾಗುತ್ತದೆ. ಈ ಕಾರಣದಿಂದಾಗಿ ಇನ್ನಷ್ಟು ಹೆಚ್ಚು ಮಹಿಳೆಯರು ಈ ಕೂಪಕ್ಕೆ ತಳ್ಳಲ್ಪಡುತ್ತಾರೆ. ಯಾವ ಎಗ್ಗು ಸಿಗ್ಗಿಲ್ಲದೇ ಮಕ್ಕಳು ಮಹಿಳೆಯರೂ ಈ ದುರಂತ ಬದುಕಿಗೆ ದೂಡಲ್ಪಡುತ್ತಾರೆ.

ಈಗಾಗಲೇ ಕೆಲವು ದೇಶಗಳಲ್ಲಿ ವೇಶ್ಯಾ ವೃತ್ತಿಯನ್ನು ಕಾನೂನು ಬದ್ಧಗೊಳಿಸಲಾಗಿದೆಯಾದರೂ ಅಲ್ಲಿ ಈ ಮಹಿಳೆಯರ ಪರಿಸ್ಥಿತಿಯಲ್ಲಿ ಯಾವ ಸು ಧಾರಣೆ-ಯೂ ಕಂಡು ಬಂದಿಲ್ಲ. ಬದಲಿಗೆ ಇನ್ನೂ ಈ ದಾರುಣ ಬದುಕಿಗೆ ತಳ್ಳಲ್ಪಟ್ಟ ಮಹಿಳೆಯರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಪರಿಹಾರ ಸಿಗಬೇಕು. ವೇಶ್ಯೆಯರಿಗೆ ಸಿಗಬೇಕಾದ ಮೂಲಭೂತ ಹಕ್ಕುಗಳು ದೊರೆಯಲೇಬೇಕೆಂದು ಒತ್ತಾಯಿಸುವುದನ್ನು ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸುವುದೆಂದು ತಪ್ಪಾಗಿ ಅರ್ಥೈಸಿಕೊಳ್ಳಬಾರದು. ಯಾರದೋ ಒತ್ತಡ, ಸಾಗಾಣಿಕೆ, ಮೋಸದಂತಹ ಕೃತ್ಯಗಳಿಗೆ ಒಳಗಾಗಿ ಆ ವಲಯದಲ್ಲಿ ಸಿಲುಕಿಕೊಂಡ ಮಹಿಳೆಯರಿಗೆ ರಕ್ಷಣೆ, ಆರೋಗ್ಯ ಅವರ ಮಕ್ಕಳಿಗೆ ಬದುಕಲು ಅಗತ್ಯವಾದ ಸೌಲಭ್ಯಗಳನ್ನು ಒತ್ತಾಯಿಸಬೇಕೇ ಹೊರತೂ ವೇಶ್ಯಾಗಾರಿಕೆಯನ್ನು ವೃತ್ತಿಯೆಂದು ಪರಿಗಣಿಸಿ ಅವರನ್ನು ಲೈಂಗಿಕ ಕಾರ್ಮಿಕರೆಂದು ಕರೆದು ಅದನ್ನೊಂದು ಉದ್ಯೋಗಾವಕಾಶ ಎಂದು ವರ್ಗೀಕರಿಸುವುದು ತಪ್ಪಾಗುತ್ತದೆ. ಸಾಮಾನ್ಯವಾಗಿ ಈ ಬದುಕಿಗೆ ಬಡ ಕೆಳ ಜಾತಿ ಮತ್ತು ವರ್ಗದ, ತುಳಿತಕ್ಕೊಳಗಾದ, ಶಿಕ್ಷಣ ವಂಚಿತರಾದ, ಕುಶಲತೆಯಿರದ, ಬೇರೆ ಉದ್ಯೋಗ ಸಿಗದ ಕಾರಣದಿಂದ ನಿರುಪಾಯರಾಗಿ ಮತ್ತು ಕೆಲವೊಮ್ಮೆ ಸರಕು ಸಂಸ್ಕೃತಿಯ ಪಾಶಕ್ಕೆ ಸಿಲುಕಿ ಇದರಿಂದ ಲಾಭಗಳಿಸುವವರ ಮೋಸದಾಟಕ್ಕೆ ದಾಳಗಳಾಗಿ ಮಹಿಳೆಯರು ವೇಶ್ಯಾವಾಟಿಕೆಗೆ ಬಲಿ ಬೀಳುತ್ತಾರೆಂಬುದನ್ನು ಯಾವುದೇ ಕಾರಣಕ್ಕೂ ನಾವು ಮರೆಯಕೂಡದು.

**ಧಾರ್ಮಿಕ ಮುದ್ರೆ-ಸ್ಥಿರೀಕರಣ**

ಹಿಂದೆ ದೇವದಾಸಿ ಪದ್ಧತಿಗೆ ಧಾರ್ಮಿಕ ಮುದ್ರೆಯೊತ್ತಿ ಅದನ್ನು ಸ್ಥಿರೀಕರಿಸಿದ ಮತ್ತು ದಲಿತ ಹೆಣ್ಣು ಮಕ್ಕಳನ್ನು ಬಲಿಕೊಡುತ್ತಿದ್ದ ಅಮಾನವೀಯ ಪಾಳೆಯಗಾರೀ ಪಿತೃಪ್ರಧಾನ ವ್ಯವಸ್ಥೆಯನ್ನು ನಿರಾಕರಿಸಿ, ಅದನ್ನು ನಿಷೇಧಿಸಿ ಕಾನೂನು ಮಾಡಿದ ನೆಲದಲ್ಲಿ ಮತ್ತೆ ಮಹಿಳೆಯರನ್ನು ಲೈಂಗಿಕವಾಗಿ ಶೋಷಿಸಲು ಕಾನೂನಿನ ಮುದ್ರೆಯೊತ್ತಲು ಹೊರಟಿರುವುದು ಎಂತಹ ವಿಪರ್ಯಾಸ!. ಇಂತಹ ಯಾವುದೇ ಕಾನೂನು ಮಹಿಳೆಯರನ್ನು ಶೋಷಿಸುವ ಪಿಂಪ್‌ಗಳು, ಏಜೆಂಟ್‌ರುಗಳಿಗೆ ಲಾಭ ತರುವುದೇ ಹೊರತು ಅದಕ್ಕೆ ತಳ್ಳಲ್ಪಟ್ಟ ಮಹಿಳೆಯರಿಗಲ್ಲ.

**ಅಲ್ಲಿ ಮಹಿಳೆಯರ ಸಾಮಾಜಿಕ ಘನತೆಯೇನೂ ಉತ್ತಮಗೊಂಡಿಲ್ಲ**

ಈಗಾಗಲೇ ವೇಶ್ಯಾಗಾರಿಕೆಯನ್ನು ಕಾನೂನು ಬದ್ಧಗೊಳಿಸಿರುವ ಜರ್ಮನಿ, ನೆದರ್‌ಲ್ಯಾಂಡ್ಸ್‌ನಂತಹ ದೇಶಗಳ ಅನುಭವವೇ ಹೇಳುವಂತೆ ಆ ಮಹಿಳೆಯರ ಸಾಮಾಜಿಕ ಘನತೆಯೇನೂ ಉತ್ತಮಗೊಂಡಿಲ್ಲ. ಅಷ್ಟೇ ಅಲ್ಲ ಇದನ್ನೊಂದು ಉದ್ಯಮವನ್ನಾಗಿಸಿಕೊಂಡು ಲಾಭಗಳಿಸುವ ಪುರುಷರಿಗೆ ಇದೊಂದು ವರದಾನವಾಗಿ ಪರಿಣಮಿಸಿದ್ದು ಮಹಿಳೆಯರು ಮತ್ತು ಮಕ್ಕಳ ಮಾರಾಟದ ಜಾಲಕ್ಕೆ ಸಿಹಿ ಊಟ ಉಣಬಡಿಸಿದಂತಾಗಿದೆ. ಒಂದು ವರದಿಯಂತೆ ಇದೊಂದು ವಾರ್ಷಿಕ 100 ಬಿಲಿಯನ್ ವ್ಯಾಪಾರದ ಅಂತರ ರಾಷ್ಟ್ರೀಯ ವಹಿವಾಟು ಎಂದು ಹೇಳಲಾಗಿದೆ!!

ವೇಶ್ಯಾಗಾರಿಕೆಯಲ್ಲಿ ತೊಡಗಿಸಿಕೊಂಡ ಮಹಿಳೆಯರು ಅವರು ವೇಶ್ಯಾವಾಟಿಕೆಗಳಲ್ಲಿ ಅನುಭವಿಸಿದ ಕ್ರೂರ ಹಿಂಸೆಗಳನ್ನು, ಬೀದಿಗಳಲ್ಲಿ ಅನುಭವಿಸುವ ನರಕ ಯಾತನೆಗಳನ್ನು, ಹೇಳುವಾಗ ಮನುಷ್ಯರಾದವರ ಎದೆ ಝಲ್ಲೆನ್ನಲೇ ಬೇಕು. ಅವರೇ ಹೇಳುವಂತೆ ತಮಗೊಂದು ಪರ್ಯಾಯ ಬದುಕಿನ ಮಾರ್ಗ ಕಲ್ಪಿಸಿಕೊಟ್ಟು ಘನತೆಯ ಬದುಕು ನೀಡಲು ಸಾಧ್ಯವಾಗಬೇಕು. ಅದಿಲ್ಲದಿದ್ದರೆ ಈಗ ಹೇಗೋ ಮುಚ್ಚುಮರೆಯಲ್ಲಿ ಈ ಕೆಲಸ ಮಾಡಿ ಜೀವನ ಸಾಗಿಸಿಕೊಳ್ಳುತ್ತಿದ್ದೇವೆ ವೇಶ್ಯಾವಾಟಿಕೆಯನ್ನು ಕಾನೂನು ಬದ್ಧಗೊಳಿಸಿ ನಮ್ಮ ಬದುಕನ್ನು ಇನ್ನಷ್ಟು ಹರಾಜುಹಾಕಬೇಡಿ ಎಂದು ಹೇಳುತ್ತಾರೆ. ಮತ್ತು ಅವರ್‍ಯಾರೂ (ಘರ್ವಾಲಿಗಳಾದವರನ್ನು ಹೊರತು ಪಡಿಸಿ) ಇನ್ನೊಬ್ಬ ಮಹಿಳೆ ಅಥವಾ ತಮ್ಮದೇ ಮಕ್ಕಳು ಈ ಕೆಲಸಕ್ಕೆ ಬರಬೇಕೆಂದು ಬಯಸುವುದಿಲ್ಲ. ಬಹಳ ಸಂದರ್ಭಗಳಲ್ಲಿ 'ಆಯ್ಕೆಯ ಸ್ವಾತಂತ್ರ್ಯ, ನನ್ನ ದೇಹ ನನ್ನ ಹಕ್ಕು, ಲೈಂಗಿಕತೆಯನ್ನು ಮಾರಾಟ ಮಾಡಿಕೊಳ್ಳುವುದು ನನ್ನ ಹಕ್ಕು.' ಎಂಬಿತ್ಯಾದಿ ಕಲಿಸಿಕೊಟ್ಟ ಗಿಳಿ ಮಾತುಗಳನ್ನು ಉಲಿಯುವ ಒಂದು ಸಣ್ಣ ವಿಭಾಗದ ಮಹಿಳೆಯರು ಮಹಿಳೆಯರ ದೇಹ ವ್ಯಾಪಾರವನ್ನೂ ಒಂದು ಉದ್ಯಮವನ್ನಾಗಿಸಿಕೊಂಡು ಲಾಭಗಳಿಸುತ್ತಿರುವ ಜನರ ಜಾಲಕ್ಕೆ ಸಿಕ್ಕು ಸಾಗಾಣಿಕೆಗೆ ಒಳಗಾದವರೇ ಇರುತ್ತಾರೆ. ಮತ್ತು ಹೆಚ್ಚಿನ ಸಂದರ್ಭದಲ್ಲಿ ಬಹಳ ಚಿಕ್ಕ ವಯಸ್ಸಿನಲ್ಲಿಯೇ ಈ ಕೂಪಕ್ಕೆ ತಳ್ಳಲ್ಪಟ್ಟವರೂ ಆಗಿರುತ್ತಾರೆ ಎಂಬುದನ್ನು ಕಾನೂನು ಬದ್ಧಗೊಳಿಸುವ ಪರವಾಗಿರುವವರು ಒಮ್ಮೆ ಆಲೋಚಿಸಬೇಕು. ವೇಶ್ಯಾಗಾರಿಕೆಯನ್ನು ಕಾನೂನು ಬದ್ಧಗೊಳಿಸುವ ಮೂಲಕ ಅವರಿಗೊಂದು ಘನತೆಯ ಬದುಕು ಮತ್ತು ಸುರಕ್ಷಿತ ಕೆಲಸವನ್ನು ಒದಗಿಸಲು ಸಾಧ್ಯವಿಲ್ಲ ಎಂದು ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಓ) ಅಭಿಪ್ರಾಯ ಪಡುತ್ತದೆ.

ಆದ್ದರಿಂದ ಈ ಕಾಲದ ತುರ್ತು ಏನೆಂದರೆ ಈಗಾಗಲೇ ಇರುವ ಐಟಿಪಿಏ ಕಾನೂನು-ಅನೈತಿಕ ಸಾಗಾಣಿಕೆ ನಿರ್ಬಂಧ ಕಾನೂನು ಸಮರ್ಪಕವಾಗಿ ಜಾರಿಗೊಂಡು, ಪಿಂಪ್‌ಗಳು ಸಾಗಾಣಿಕೆದಾರರುಗಳನ್ನು ಉಗ್ರವಾಗಿ ಶಿಕ್ಷಿಸಬೇಕು. ಜೊತೆಗೇ ವಿಶ್ವಸಂಸ್ಥೆಯ ಉದ್ದೇಶದಂತೆ "ಸಾಗಾಣಿಕೆಯನ್ನು ಹತ್ತಿಕ್ಕಬೇಕು ಮತ್ತು ಸಾಗಾಣಿಕೆದಾರರನ್ನು ಶಿಕ್ಷಿಸಬೇಕು." ಕ್ರಿಮಿನಲ್ ಲಾ ತಿದ್ದುಪಡಿ ಕಾನೂನು 2013-ರ ಕಲಂ 370 ನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ವಿಶ್ವಸಂಸ್ಥೆಯ ಈ ಅಭಿಪ್ರಾಯಕ್ಕೆ ಭಾರತ ತನ್ನ ಸಮ್ಮತಿಯನ್ನು ಸೂಚಿಸಿದೆ ಎಂಬುದನ್ನು ಸರ್ಕಾರ ಮರೆಯಬಾರದು. ವೇಶ್ಯಾಗಾರಿಕೆಯಲ್ಲಿ ತೊಡಗಿರುವವರ ಮೇಲೆ ಮಾತ್ರ ಕ್ರಮ ಕೈಗೊಳ್ಳುವ ಈಗಿನ ಕಾನೂನಿನ ಬದಲು ಅದರ ಗ್ರಾಹಕರು ಮತ್ತು ಮಧ್ಯವರ್ತಿಗಳನ್ನು ಶಿಕ್ಷೆಗೆ ಒಳಪಡಿಸಬೇಕು.

ವೇಶ್ಯಾಗಾರಿಕೆಯನ್ನು ಕಾನೂನುಬದ್ಧಗೊಳಿಸುವ ಬದಲು ಈಗಾಗಲೇ ಅದರಲ್ಲಿದ್ದುಬಿಟ್ಟಿರುವ ಮಹಿಳೆಯರು ಮತ್ತು ಮಕ್ಕಳಿಗೆ ಪರ್ಯಾಯ ಬದುಕಿನ ಮಾರ್ಗವನ್ನು ಕಲ್ಪಿಸಿಕೊಡಬೇಕು. ಒಂದು ನೀತಿ ನಿರೂಪಣಾ ಕ್ರಮಕ್ಕೆ ಮುಂದಾಗಿ ಅವರಿಗೆ ಸುರಕ್ಷಿತ ವಸತಿ, ವೈದ್ಯಕೀಯ ಸೌಲಭ್ಯ, ಅವರಿಗೆ ಮತ್ತು ಅವರ ಮಕ್ಕಳ ಶಿಕ್ಷಣ, ಆರ್ಥಿಕ ಸೌಲಭ್ಯ, ರೇಷನ್ ಕಾರ್ಡ್, ಪರ್ಯಾಯ ಜೀವನೋಪಾಯಕ್ಕೆ ವೃತ್ತಿ ತರಬೇತಿ, ಗ್ರಾಮೀಣ ಪ್ರದೇಶಗಳಲ್ಲಿ ಭೂಮಿಗಳನ್ನು ಒದಗಿಸಿ ಪೋಲೀಸರು ಗ್ರಾಹಕರು ಮಧ್ಯವರ್ತಿಗಳ ಹಾವಳಿಯಿಂದ ಅವರನ್ನು ರಕ್ಷಿಸಲು ಕ್ರಮ ಕೈಗೊಳ್ಳಲಾಗಬೇಕು. ಘನತೆಯ ಬದುಕಿನ ಪರ್ಯಾಯ ಮಾರ್ಗಗಳನ್ನು ಸಮಾಜ ಸರ್ಕಾರ ತಮಗೆ ಕೊಡುತ್ತದೆ ಎಂದಾಗಲೂ ಬಹುಷಃ ಯಾವ ಮಹಿಳೆಯೂ 'ನನ್ನ ದೇಹ ನನ್ನ ಹಕ್ಕು' ಎಂಬ ವಾದಕ್ಕೆ ಇಳಿಯಬಲ್ಲಳು ಎಂದು ನನಗೇನೂ ಅನಿಸುವುದಿಲ್ಲ. ಒಂದೊಮ್ಮೆ ಅಂತಹ ಆಯ್ಕೆಯನ್ನು ಬಯಸುವವರಿಗೆ ಈ ದೇಶದಲ್ಲಿ 'ಅಡಲ್ಟ್ರೀ ಅಪರಾಧ'ವಾದರೂ ಇಬ್ಬರು ವಯಸ್ಕರು ಪರಸ್ಪರ ಒಪ್ಪಿ ನಡೆಸುವ ಲೈಂಗಿಕ ಕ್ರಿಯೆಗೆ ಸಮ್ಮತಿ ಇದೆ. ಅದನ್ನು ವೇಶ್ಯಾವೃತ್ತಿ ಎಂದೇನೂ ಕರೆಯುವ ಆಗತ್ಯವಿಲ್ಲ. ವೇಶ್ಯಾಗಾರಿಕೆ ಸಮಾಜಕ್ಕೆ ಅಗತ್ಯ, ಅದನ್ನು ನಿವಾರಿಸುವ ಪ್ರಯತ್ನ ಸಾಧ್ಯವೇ ಇಲ್ಲ ಎಂದು ಯಾರಾದರೂ ಹೇಳುವರೆಂದರೆ ಅವರು ದೇವದಾಸಿಯಂತಹ ಹೀನ ಪದ್ಧತಿಯನ್ನೂ ಸಮರ್ಥಿಸುತ್ತಾರೆಂದೇ ಅರ್ಥ.


●

**'ದೇಹ ವ್ಯಾಪಾರ' ಕುರಿತು ಪ್ರತಿಕ್ರಿಯೆ ಕಳುಹಿಸಿ**

**ಓದುಗ ಬಂಧುಗಳೇ, ವೇಶ್ಯಾಗಾರಿಕೆ ಎಂಬುದು ಒಂದು ಗಂಭೀರ ಸಾಮಾಜಿಕ ಸಮಸ್ಯೆ. ಕೆಲವು ಸಂಘ ಸಂಸ್ಥೆಗಳು ವ್ಯಕ್ತಿಗಳು ಇದನ್ನು ಶಾಸನಬದ್ಧಗೊಳಿಸುವ ಮೂಲಕ ಪರಿಹಾರ ಕಂಡುಹಿಡಿಯುವ ಸಲಹೆ ನೀಡುತ್ತಿದ್ದಾರೆ. ಇತ್ತೀಚೆಗೆ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರು ಏಕಪಕ್ಷೀಯವಾಗಿ ಕೇಂದ್ರ ಸರಕಾರಕ್ಕೆ ಆ ಬಗ್ಗೆ ಸಲಹೆ ನೀಡಿದ್ದಾರೆ.**

**ಈ ಸಮಸ್ಯೆಯು ವೇಶ್ಯಾಗಾರಿಕೆ ಎಂದರೆ ಏನೆಂದು ಅರ್ಥೈಸುವಿಕೆಯಿಂದಲೇ ಶುರುವಾಗುತ್ತದೆ. ಇನ್ನೂ ವಿಷಯದ ಬಗೆಗೆ ವ್ಯಾಪಕವಾದ ಚರ್ಚೆ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ 'ಜನಶಕ್ತಿ' ಈ ವಿಷಯದ ಬಗೆಗೆ ಓದುಗರ ಚರ್ಚೆಯನ್ನು ಬಯಸಿದೆ. ದಯಮಾಡಿ ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಕಳುಹಿಸಿ. ನಿಮ್ಮ ಬರಹ 250 ರಿಂದ 300 ಪದಗಳ ಮಿತಿಯಲ್ಲಿದ್ದರೆ ಅನುಕೂಲ.**

**- ಸಂ.**




# ಸಾರ್ವಜನಿಕ ಸಾರಿಗೆ ಕೂಡ ಕಾರ್ಪೊರೇಟ್ ಕುಳಗಳ ವಶಕ್ಕೆ

## ಆದಾಯಗಳಿಗೆ ಡಾಲರ್ ಮಟ್ಟವಿಲ್ಲ, ದಂಡಗಳಿಗೆ ಮಾತ್ರ ಡಾಲರ್ ಮಟ್ಟ!

'ಒಳ್ಳೆಯ ದಿನ'ಗಳ ಸರಕಾರ ಕರಡು 'ರಸ್ತೆ ಸಾರಿಗೆ ಮತ್ತು ಸುರಕ್ಷಿತತೆ ಮಸೂದೆ, 2014' ಪ್ರಕಟಿಸಿದೆ. ದೇಶದಲ್ಲಿ ಹೆಚ್ಚು ಸುರಕ್ಷಿತ, ಹೆಚ್ಚು ವೇಗದ, ಮತ್ತು ಕಡಿಮೆ ವೆಚ್ಚದ ಪ್ರಯಾಣಿಕ ಮತ್ತು ಸರಕು ಸಾಗಾಣಿಕೆಯ ಕಣ್ಣೋಟದಿಂದ ಇದನ್ನು ರೂಪಿಸಲಾಗಿದೆ ಎಂದು ಸರಕಾರ ಹೇಳಿಕೊಂಡಿದೆ. ಸುರಕ್ಷಿತತೆ ಕುರಿತಂತೆ ಅಂತರ್ರಾಷ್ಟ್ರೀಯ ಆಚರಣೆಗಳನ್ನು ಗಮನಕ್ಕೆ ತಗೊಂಡು ಇದನ್ನು ರೂಪಿಸಲಾಗಿದೆ ಎಂದೂ ಹೇಳಿಕೊಂಡಿದೆ.

ಆದರೆ ವಾಸ್ತವವಾಗಿ ಇದು ಸಮಸ್ತ ಸಾರಿಗೆ ವಲಯವನ್ನು ಖಾಸಗೀಕರಿಸಿ ಕಾರ್ಪೊರೇಟ್‌ಗಳಿಗೆ ವಹಿಸಿಕೊಡಲಿಕ್ಕಾಗಿಯೇ ಬ್ರಿಟನ್ ಮತ್ತು ಅಮೆರಿಕಾದ ಸಾರಿಗೆ ಕಾನೂನುಗಳಿಂದ ಸಾಲುಗಳನ್ನು ಎತ್ತಿ-ಕೊಂಡು ಕಣ್ಣು ಮುಚ್ಚಿ ನಕಲು ಮಾಡಿದಂತಿದೆ ಎಂದು ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

ಇದು ದಂಡಗಳನ್ನು ನಿರೂಪಿಸಿರುವ ಶೆಡ್ಯೂಲ್ 3ರಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ದಂಡಗಳ ಮೊತ್ತ ಕನಿಷ್ಟ 2500ರೂ.ಗಳಿಂದ ರೂ.1,00,000(ಹೌದು, 1ಲಕ್ಷ ರೂ.) ವರೆಗೂ ಇದೆ-ಹೆಲ್ಮೆಟ್ ಧರಿಸದಿದ್ದರೆ 2500ರೂ, ಸೀಟ್ ಬೆಲ್ಟ್ ಹಾಕಿಕೊಳ್ಳದಿದ್ದರೆ 5000ರೂ., ಚಾಲನೆ ಮಾಡುವಾಗ ಮೊಬೈಲ್ ಬಳಸಿದರೆ ಮೊದಲ ಬಾರಿಗೆ 4000ರೂ, ಎರಡನೇ ಬಾರಿಗೆ 6000ರೂ, ಮೂರನೇ ಬಾರಿಗೆ 10,000ರೂ., ಸಿಗ್ನಲ್ ಉಲ್ಲಂಘಿಸಿದರೆ ಮೊದಲ ಬಾರಿಯಾದರೆ 5000ರೂ., ಎರಡನೇ ಬಾರಿ 10,000ರೂ, ಮೂರನೇ ಬಾರಿಗೆ 15,000ರೂ., ಒಂದು ತಿಂಗಳ ಲೈಸೆನ್ಸ್ ಅಮಾನತು ಮತ್ತು ಕಡ್ಡಾಯ ತರಬೇತಿ. ಸೀಟ್ ಬೆಲ್ಟ್‌ಗಳನ್ನು ಕಾರು ಬಳಸುವವರು ಮಾತ್ರವಲ್ಲ, ಬಸ್ ಬಳಸುವವರೂ ಹಾಕಿಕೊಳ್ಳಬೇಕು(ಬಸ್‌ಗಳಲ್ಲಿ ನಿಂತುಕೊಂಡೇ ಪ್ರಯಾಣಿಸಬೇಕಾದವರಿಗೆ ವಿನಾಯ್ತಿ?).

ಇವು ಈಗಿರುವ ದಂಡಗಳ ಹತ್ತು ಪಟ್ಟು. ವಾಸ್ತವವಾಗಿ ಇದು ಬಹುಶಃ ಅಮೆರಿಕಾದ ಕೆಲವು ರಾಜ್ಯಗಳಲ್ಲಿ ಜಾರಿಯಲ್ಲಿರುವ ಡಾಲರ್ ದಂಡಗಳನ್ನು ಕಣ್ಣು ಮುಚ್ಚಿ ರೂಪಾಯಿಗಳಿಗೆ ಪರಿವರ್ತಿಸಿರುವ ಫಲವಿರಬಹುದು ಎನ್ನುತ್ತಾರೆ ಪರಿಣಿತರು. ಅಲ್ಲಿ ದಂಡಗಳು 100ಡಾಲರುಗಳಿಂದ ಆರಂಭವಾಗುತ್ತವೆ, ಅಲ್ಲಿನ ಆದಾಯ-ಕ್ಕೆ ಹೋಲಿಸಿದರೆ ಇದು ಹೆಚ್ಚೆಂದರೆ ನಮ್ಮ 300ರೂ.ಗಳಿಗೆ ಸಮ. ಏಕೆಂದರೆ 100ಡಾಲರ್ ಎಂಬುದು ಅಲ್ಲಿನ ಮಧ್ಯಮ ವರ್ಗದ ರಸ್ತೆ ಬಳಕೆದಾರನ ಸರಾಸರಿ ದಿನದ ಆದಾಯಕ್ಕಿಂತ ಕಡಿಮೆ. ನಮ್ಮಲ್ಲಿ ಇಂತಹ ಸರಾಸರಿ ಆದಾಯ 300ರೂ.ಗಳಷ್ಟೂ ಇಲ್ಲ.

ಅಲ್ಲದೆ ನಮ್ಮ ದೇಶದಲ್ಲಿನ ರಸ್ತೆಗಳ ಪರಿಸ್ಥಿತಿ ಬಗ್ಗೆ ಈ ಕರಡು ರೂಪಿಸಿದವರಿಗೆ ಏನೂ ಗೊತ್ತಿರುವಂತಿಲ್ಲ. ಅಲ್ಲದೆ ಕೆಟ್ಟ ರಸ್ತೆಗಳಲ್ಲಿ ದಿನಕ್ಕೆ 15ರಿಂದ 18 ಗಂಟೆಗಳ ಕಾಲ, ವಿಶ್ರಾಂತಿ ಸ್ಥಳ, ವಾಹನ ನಿಲುಗಡೆ ವ್ಯವಸ್ಥೆ ಮುಂತಾದ ಕನಿಷ್ಟ ಸೌಕರ್ಯಗಳೂ ಇಲ್ಲದೆ ದುಡಿಯುವ ನಮ್ಮ ದೇಶದ ಡ್ರೈವರ್‌ಗಳನ್ನು ಇವೆಲ್ಲ ಸೌಕರ್ಯಗಳಿರುವ ಮುಂದುವರೆದ ದೇಶಗಳ ಡ್ರೈವರುಗಳಿಗೆ ಹೋಲಿಸುವುದು ಎಷ್ಟು ನ್ಯಾಯಯುತ ಎಂದು ಕೇಳಲಾಗುತ್ತಿದೆ. ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ವಿಧಿಸಿರುವ ಶೇ.1 ಕರಭಾರ(ಸೆಸ್)ವನ್ನು ಹೆದ್ದಾರಿಗಳ ಸುರಕ್ಷಿತತೆ ನಿಧಿಗೆ ಬಳಸಬೇಕು ಎಂಬ ನಮ್ಮದೇ ದೇಶದ ಸುಂದರ್ ಸಮಿತಿಯ ಶಿಫಾರಸು ಈ ಕರಡಿನಲ್ಲಿ ಕಾಣುತ್ತಿಲ್ಲ. ನಮ್ಮದೇ ದೇಶದಲ್ಲಿರುವ ವಿ ವಿ ಗಿರಿ ಲೇಬರ್ ಇನ್ಸಿಟ್ಯೂಟ್ ಶಿಫಾರಸು ಮಾಡಿರುವ ಅಸಂಘಟಿತ ಮೋಟಾರು ಸಾರಿಗೆ ಕಾರ್ಮಿಕರ ರಕ್ಷಣೆಯ ಶಿಫಾರಸುಗಳ ಪ್ರಸ್ತಾಪವೇ ಇಲ್ಲ.

ವಾಸ್ತವವಾಗಿ ಸುರಕ್ಷಿತತೆಯ ಹೆಸರಲ್ಲಿ ಸಾರಿಗೆ ವಲಯವನ್ನು ಸಂಪೂರ್ಣವಾಗಿ ಕಾರ್ಪೊರೇಟ್ ಕುಳಗಳಿಗೆ ವಹಿಸಿ ಕೊಡುವುದೇ ಈ ಮಸೂದೆಯ ಗುರಿ ಇರುವಂತಿದೆ. ನಿಯಂತ್ರಣ ಪ್ರಾಧಿಕಾರಗಳನ್ನು ರಚಿಸಿ ಸರಕಾರ ನಾಗರಿಕರಿಗೆ ಪ್ರತಿಯಾಗಿ ತನ್ನ ಜವಾಬ್ದಾರಿಗಳಿಂದ ಜಾರಿಕೊಳ್ಳುವುದು ನವ-ಉದಾರವಾದಿ ತತ್ವದ ಒಂದು ಮುಖ್ಯ ಅಂಶ. ಅ ಪ್ರಕಾರ ಸಾರಿಗೆ ವಲಯ ಸಂವಿಧಾನದ ಪ್ರಕಾರ ಸಮವರ್ತಿ ಪಟ್ಟಿಯಲ್ಲಿದ್ದರೂ ಅದಕ್ಕೆ ಒಂದು 'ಸ್ವತಂತ್ರ' ರಾಷ್ಟ್ರೀಯ ಸಾರಿಗೆ ನಿಯಂತ್ರಣ ಪ್ರಾಧಿಕಾರವನ್ನು ಈ ಮಸೂದೆ ರಚಿಸುತ್ತದೆ. ಅದೇ ರೀತಿ ರಾಜ್ಯಗಳಲ್ಲೂ ಇಂತಹ 'ಸ್ವತಂತ್ರ' ಪ್ರಾಧಿಕಾರಗಳಿರುತ್ತವೆ. ಅಂದರೆ ಸಾರಿಗೆ ವಲಯ ಕೇಂದ್ರ ಸರಕಾರದ ಹತೋಟಿಗೆ ಬರುತ್ತದೆ, ಅದನ್ನು ಅದು ಈ ಪ್ರಾಧಿಕಾರಕ್ಕೆ ಒಪ್ಪಿಸುತ್ತದೆ. ಮೋದಿಯವರ 'ಕನಿಷ್ಟ ಆಳ್ವಿಕೆ' ಎಂದರೆ ಇದೇ ತಾನೇ?

ಈ ಮಸೂದೆ ಅಂಗೀಕಾರಗೊಂಡರೆ ಸಾರ್ವಜನಿಕ ವಲಯದ ಸಾರಿಗೆ ನಿಗಮಗಳು ಮತ್ತು ಸಣ್ಣ ಪ್ರಮಾಣ ಖಾಸಗಿ ಕಂಪನಿಗಳೂ ಬೃಹತ್ ಗಾತ್ರದ ಕಾರ್ಪೊರೇಟ್ ಕುಳಗಳೊಂದಿಗೆ ಸ್ಪರ್ಧಿಸಬೇಕು. ಸರಕಾರಗಳು ನಾಗರಿಕರಿಗೆ ಏನಾದರೂ ರಿಯಾಯ್ತಿಗಳನ್ನು ಕೊಡಬೇಕೆಂದು ಬಯಸಿದರೂ ಅದಕ್ಕೆ ಈ ಪ್ರಾಧಿಕಾರದ ಅನುಮೋದನೆ ಪಡೆಯಬೇಕು. ನಿಜ, ಈ ಕುಳಗಳ ಹೂಡಿಕೆಗಳಿಗೆ ಭದ್ರತೆ ಒದಗಿಸುವುದಷ್ಟೇ ಸರಕಾರದ ಜವಾಬ್ದಾರಿ.

ವಾಹನಗಳ ಮೇಲೆ ತೆರಿಗೆ ವಿಧಿಸುವ ಹಕ್ಕು ಕೂಡ ಈ ಕರಡಿನ ಪ್ರಕಾರ ಸರಕಾರಗಳಿಗೆ ಇರುವುದಿಲ್ಲ. ಈಗ ಈ ರೀತಿಯ ತೆರಿಗೆಗಳು ಮತ್ತು ದಂಡ ವಸೂಲಿಯ ಮೊತ್ತಗಳು ರಾಜ್ಯ ಸರಕಾರಗಳ ಮುಖ್ಯ ಆದಾಯಗಳಲ್ಲಿ ಒಂದಾಗಿದೆ. ಈ ಕರಡಿನ ಪ್ರಕಾರ ಇವೆಲ್ಲ ಆದಾಯಗಳು ಏಕಗವಾಕ್ಷಿ ವ್ಯವಸ್ಥೆಯ ಮೂಲಕ ರಾಷ್ಟ್ರೀಯ ಪ್ರಾಧಿಕಾರಕ್ಕೆ ಹೋಗುತ್ತವೆ. ಅದರಲ್ಲಿ ಒಂದು ಸಣ್ಣ ಪಾಲನ್ನು ಮಾತ್ರ ರಾಜ್ಯಗಳಿಗೆ ಕೊಡಲಾಗುವುದು. ಸಂಸತ್ತು ರಾಜ್ಯ ಸರಕಾರಗಳ ಒಡೆತನದ ಸಾರಿಗೆ ನಿಗಮಗಳು ಪ್ರಯಾಣಿಕರಿಗೆ ದಕ್ಷ ಸೇವೆ ಒದಗಿಸಲು ಸಾಧ್ಯವಾಗುವಂತೆ ವಿಶೇಷ ಅವಕಾಶಗಳನ್ನು ಒದಗಿಸಿತ್ತು. ಈ ಕರಡಿನಲ್ಲಿ ಇದುವರೆಗೆ ಸಾರ್ವಜನಿಕ ವಲಯದ ಸಾರಿಗೆ ನಿಗಮಗಳಿಗೆ ಇರುವ ರಕ್ಷಣೆಯ ಯಾವ ಅಂಶಗಳನ್ನೂ ಸೇರಿಸಲಾಗಿಲ್ಲ. ಮೇಲೆ ಹೇಳಿದಂತೆ ರಕ್ಷಣೆ ಖಾಸಗಿ ಹೂಡಿಕೆಗಳಿಗೆ ಮಾತ್ರವೇ- ಇದೇ ತಾನೇ ನವ-ಉದಾರವಾದದ ಜೀವಾಳ.

ಅದ್ದರಿಂದಲೇ ದೊಡ್ಡ ಕಾರ್ಪೊರೇಟ್ ಕುಳಗಳಿಗೆ 'ಒಳ್ಳೆಯ ದಿನ'ಗಳನ್ನು ಕೊಡಮಾಡಲಿಕ್ಕಾಗಿ ಬಡ, ಮಧ್ಯಮವರ್ಗಗಳ ಪ್ರಯಾಣಿಕರಿಗೆ, ಸಾರಿಗೆ ಕಾರ್ಮಿಕರಿಗೆ ಕೆಟ್ಟದಿನಗಳನ್ನು ತರ ಹೊರಟಿರುವ ಈ ಕರಡಿಗೆ ದೇಶವ್ಯಾಪಿ ವಿರೋಧ ವ್ಯಕ್ತವಾಗುತ್ತಿದೆ.

# ಅಮೆರಿಕನ್ ವ್ಯಾಪಾರಸ್ಥರ 'ದಿಲ್ ಮಾಂಗೇ ಮೋರ್'

'ಯೇ ದಿಲ್ ಮಾಂಗೇ ಮೋರ್' ಎಂಬುದು ಅಮೆರಿಕಾದ ತಂಪು ಪಾನೀಯದ ಜಾಹೀರಾತಿನ ಘೋಷ ವಾಕ್ಯ. ಈ ಹೃದಯ ಇನ್ನೂ ಬೇಕೆನ್ನುತ್ತಿದೆ ಎಂಬುದು ಇದರರ್ಥ. ಮೋದಿಯವರು ಇದನ್ನು ತಮ್ಮ ಚುನಾವಣಾ ಪ್ರಚಾರದಲ್ಲಿ ವ್ಯಾಪಕವಾಗಿ ಬಳಸಿದ್ದರು.

ಈಗ ಅಮೆರಿಕಾದ ವ್ಯಾಪಾರಸ್ಥರೂ ಅದೇ ರಾಗ ಹಾಡುತ್ತಿದ್ದಾರೆ. ಭಾರತದ ಪ್ರಧಾನಿಗಳು ಅಮೆರಿಕಾದ ಆಧ್ಯಕ್ಷರನ್ನು ಭಾರತ ಪ್ರಜಾಪ್ರಭುತ್ವ ದಿನದ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಆಹ್ವಾನಿಸಿ ಹಿಂದಿನ ಯಾವ ಪ್ರಧಾನಿಯೂ ತೋರದ 'ದಿಟ್ಟತನ' ತೋರಿದ್ದಾರೆ ಎಂದು ಕಾರ್ಪೊರೇಟ್ ಮಾಧ್ಯಮಗಳಲ್ಲಿ ಪ್ರಶಂಸೆಯ ಹೊಸ ಸರಣಿ ಆರಂಭವಾಗಿರುವಾಗಲೇ ಈ ಸುದ್ದಿಯೂ ಬಂದಿದೆ. ಅಮೆರಿಕಾದ ವ್ಯಾಪಾರ ಪ್ರತಿನಿಧಿ ಮೈಕೆಲ್ ಫ್ರೋಮನ್ ಭಾರತದ ಕಾರ್ಪೊರೇಟ್ ಕುಳಗಳ ಸಂಸ್ಥೆಯಾದ ಫಿಕಿಯ ಸದಸ್ಯ ಉದ್ಯಮಿಗಳನ್ನು ಉದ್ದೇಶಿಸಿ ಮಾತಾಡುತ್ತ ಈ ರೀತಿ ಗೊಣಗಿದ್ದಾರಂತೆ.

ಕಳೆದ ವಾರವಷ್ಟೇ ಹಿಂದೆ ಮೋದಿ ಸರಕಾರ ಇಂತಹುದೇ 'ದಿಟ್ಟತನ' ಪ್ರದರ್ಶಿಸಿ ಭಾರತದ ಆಹಾರ ಭದ್ರತಾ ಕಾನೂನಿಗೆ ಡಬ್ಲ್ಯುಟಿಒ ಆಕ್ಷೇಪವನ್ನು ಸರಿಪಡಿಸದಿದ್ದರೆ ಮುಂದುವರೆದ ದೇಶಗಳು ಬಯಸುವ 'ವ್ಯಾಪಾರ ಸೌಕರ್ಯ ಒಪ್ಪಂದ'ಕ್ಕೆ ಸಹಿ ಹಾಕುವುದಿಲ್ಲ ಎಂದು ತಳೆದ ನಿಲುವನ್ನು ಸದ್ದಿಲ್ಲದೆ ಬಿಟ್ಟುಕೊಡುವ 'ದ್ವಿಪಕ್ಷೀಯ' ಒಪ್ಪಂದವನ್ನು ಇದೇ ಅಮೆರಿಕಾದೊಂದಿಗೆ ಮಾಡಿಕೊಂಡಿದ್ದರೂ ಏಕೆ ಈ ಅಮೆರಿಕನ್ ವ್ಯಾಪಾರ ಪ್ರತಿನಿಧಿಯ ಗೊಣಗಾಟ?

ಏಕೆಂದರೆ ಆ ಒಪ್ಪಂದದಲ್ಲಿ ಭಾರತ ತನ್ನ ಆಹಾರ ಭದ್ರತೆಯ ಕಾರ್ಯಕ್ರಮಗಳನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು ಎಂಬ 'ಗುರುತರ ಶರತ್ತು'(onerous condition) ಇದ್ದು ಅದನ್ನು ಭಾರತ ಇನ್ನೂ ಪಾಲಿಸಿಲ್ಲ. ಭಾರತದ ಪ್ರಧಾನಿ ಮತ್ತು ಅಮೆರಿಕಾದ ಅಧ್ಯಕ್ಷರ ಮಧ್ಯಪ್ರವೇಶದಿಂದ ಒಂದು 'ಬಹುಪಕ್ಷೀಯ' ಒಪ್ಪಂದದ ಕುರಿತು ಒಂದು 'ದ್ವಿಪಕ್ಷೀಯ' ಒಪ್ಪಂದ ಮಾಡಿಕೊಂಡು ಏನೋ ಉಪಕಾರ ಮಾಡಿದ್ದೇವೆ ಎನ್ನುವಂತೆ ಮಾತಾಡಿರುವ ಈತ ಮುಂದುವರೆದು "ನಾವು ಈಗಾಗಲೇ ಕೆಲವು ಸಕಾರಾತ್ಮಕ ಸಂಕೇತಗಳನ್ನು ಕಂಡಿದ್ದೇವೆ. ರಕ್ಷಣೆ ರೈಲು ಮುಂತಾದ ಪ್ರಮುಖ ವಲಯಗಳಲ್ಲಿ ವಿದೇಶಿ ಹೂಡಿಕೆಯ ಮೇಲಿನ ಮಿತಿಗಳನ್ನು ಏರಿಸಲಾಗಿದೆ. ಆದರೆ ಕೆಲವು ಸುಂಕದರಗಳನ್ನೂ ಏರಿಸಿರುವುದನ್ನು ಕಂಡಿದ್ದೇವೆ. ಆದರೂ ನಾವು ಆಶಾವಾದಿಗಳಾಗಿದ್ದೇವೆ, ಎಚ್ಚರಿಕೆಯಿಂದ ಆಶಾವಾದಿಗಳಾಗಿದ್ದೇವೆ" ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ. ಜತೆಗೆ 'ಚಲೇಂಗೆ ಸಾಥ್ ಸಾಥ್' ಎಂಬುದು ಈ ಇಬ್ಬರು ಮುಖಂಡರುಗಳ ಮಂತ್ರ ಎಂದೂ ಅವರು ನೆನಪಿಸಿದ್ದಾರೆ. ಇನ್ನಷ್ಟು ರಿಯಾಯ್ತಿಗಳನ್ನು ಗಿಟ್ಟಿಸಿಕೊಳ್ಳುವ ಒತ್ತಡ ತಂತ್ರವಿದು ಎಂಬುದು ನಿಸ್ಸಂದೇಹ.

ವಿಮಾ ವಲಯದಲ್ಲಿ ವಿದೇಶಿ ಹೂಡಿಕೆಗಳ ಮೇಲಿನ ಮಿತಿಯನ್ನು ಏರಿಸಲಾಗದಿರುವುದು ಅವರ ಗೊಣಗಾಟಕ್ಕೆ ಒಂದು ಪ್ರಮುಖ ಕಾರಣ, ಪ್ರಧಾನ ಮಂತ್ರಿಗಳ ಅಮೆರಿಕಾ ಭೇಟಿಯ ಮೊದಲೇ ಇದನ್ನು ಈಡೇರಿಸಬೇಕೆಂಬುದು ಮೋದಿ ಸರಕಾರದ ಆಶಯವಾಗಿತ್ತು. ಆದರೆ ಈ ಹಿಂದೆ ಇದೇ ಮಸೂದೆಯನ್ನು ಎಡಪಕ್ಷಗಳ ಜತೆಗೆ ಬಿಜೆಪಿಯೂ ವಿರೋಧಿಸಿದ್ದರಿಂದ ಮತ್ತು ಬಿಜೆಪಿಯ ಮುಖಂಡರೇ ಅಧ್ಯಕ್ಷರಾಗಿದ್ದ ಸೆಲೆಕ್ಟ್ ಕಮಿಟಿ ಈ ಮಸೂದೆಯನ್ನು ತಿರಸ್ಕರಿಸಿದ್ದರಿಂದ ಕಾಂಗ್ರೆಸ್ ಬೆಂಬಲದೊಂದಿಗೆ ಅದನ್ನು ಪಾಸು ಮಾಡಿಕೊಳ್ಳುವ ಅದರ ಹುನ್ನಾರ ಫಲಿಸಿರಲಿಲ್ಲ.

ಈಗ ಈ ಮಸೂದೆಯೂ ಸೇರಿದಂತೆ 39 ಮಸೂದೆಗಳನ್ನು 22 ದಿನಗಳ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಪಾಸು ಮಾಡಿಸಿಕೊಳ್ಳುವ ತರಾತುರಿಯಲ್ಲಿ ಸರಕಾರವಿದೆ. ಅಮೆರಿಕಾದ ಅಧ್ಯಕ್ಷರ ಭೇಟಿಯ ಮೊದಲಾದರೂ ಇದನ್ನು ಪೂರೈಸಿ ಕೃತಾರ್ಥರಾಗುವ ತರಾತುರಿ. ಈ ಹಿಂದೆ ಯುಪಿಎ ಸರಕಾರದ ಕಾಲದಲ್ಲಿ ಸಂಸತ್ತಿನ ಕಲಾಪಗಳಿಗೆ ಸತತ ಅಡ್ಡಿ ಮಾಡಿ ಅದಕ್ಕೆ ಪರೋಕ್ಷವಾಗಿ ನೆರವಾಗಿದ್ದನ್ನು ಬಹುಶಃ ನೆನಪಿಸಿಕೊಂಡಿರುವ ಬಿಜೆಪಿಯ ಪ್ರಧಾನ ಮಂತ್ರಿಗಳು ಸಂಸತ್ತಿನ ಚಳಿಗಾಲದ ಅಧಿವೇಶನ 'ಫಲಿತಾಂಶ' ನೀಡಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ!

# ಶಿಕ್ಷಣದ ಖಾಸಗೀಕರಣದೊಂದಿಗೆ ಕೇಸರೀಕರಣದ ದಿನಗಳು

'ಒಳ್ಳೆಯ ದಿನ'ಗಳನ್ನು ತರುವಲ್ಲಿ ಸದಾ ಸುದ್ದಿಯಲ್ಲಿರುವ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿಗಳು ಈ ವಾರ ಸಂಸ್ಕೃತವನ್ನು ಕಡ್ಡಾಯಗೊಳಿಸಬೇಕೆನ್ನುವ ವಿಷಯದಲ್ಲಿ ಮಾತ್ರವಲ್ಲ, ರಾಜಸ್ತಾನದ ಭೇಟಿಯ ಕಾಲದಲ್ಲಿ ಭಿಲ್ವಾರದಲ್ಲಿ ಪತಿಸಮೇತ ಒಬ್ಬ ಜ್ಯೋತಿಷಿಯನ್ನು ಭೇಟಿ ಮಾಡಿ ಸುದ್ದಿಯಲ್ಲಿದ್ದರು.

ಈ ಜ್ಯೋತಿಷಿಯನ್ನು ಈ ವರ್ಷದ ಆರಂಭದಲ್ಲಿ, ಅಂದರೆ ಮೋದಿ ಸರಕಾರ ಬರುವ ಮೊದಲು ಭೇಟಿಯಾಗಿದ್ದರಂತೆ. ಆಗ ಆತ ನಿಮಗೆ ಉಜ್ವಲ ರಾಜಕೀಯ ಭವಿಷ್ಯ ಇದೆ ಎಂದಿದ್ದರಂತೆ. ಅವರು ಅಮೇಥಿಯಲ್ಲಿ ಲೋಕಸಭಾ ಚುನಾವಣೆಯಲ್ಲಿ ಸೋತರೂ ಮಂತ್ರಿ ಪದವಿ ಪಡೆದ ನಂತರ ಅದಕ್ಕಾಗಿ ಧನ್ಯವಾದ ಅರ್ಪಿಸಲು ಈ ಭೇಟಿಯಂತೆ. ಸುಮಾರು ನಾಲ್ಕು ಗಂಟೆಗಳ ಕಾಲ ಈ ಭೇಟಿ ನಡೆದಿದ್ದು ತಮ್ಮ ಒಳ್ಳೆಯ ದಿನಗಳು ಬಂದಿದ್ದರೂ, ತಮ್ಮ ರಾಜಕೀಯ ಮತ್ತು ವೈಯಕ್ತಿಕ ಭವಿಷ್ಯದ ಬಗ್ಗೆ ಹಲವಾರು ಪ್ರಶ್ನೆಗಳನ್ನು ಕೇಳಿದರು ಎನ್ನಲಾಗಿದೆ. ಬಹುಶಃ ಇದೇ ಅವರ ಮುಖ್ಯಸ್ಥರಿಗೆ ಪ್ರಶ್ನಾರ್ಥಕವಾಗಿ ಕಂಡಿರಬೇಕು.

ಇದು ತನ್ನ ವೈಯಕ್ತಿಕ ವಿಷಯ, ನಿಮಗೆ ಟಿಆರ್‌ಪಿ ಹೆಚ್ಚುವುದಾದರೆ ನನಗೇನೂ ಅಭ್ಯಂತರವಿಲ್ಲ ಎಂಬುದು ಆಕೆಯ ಪ್ರತಿಕ್ರಿಯೆಯಾದರೆ, ಅವರ ಸಹೋದ್ಯೋಗಿ ನಜ್ಮಾ ಹೆಪತುಲ್ಲರವರು ನನಗೂ ಅದರಲ್ಲಿ ನಂಬಿಕೆಯಿದೆ, ಅದೊಂದು ವಿಜ್ಞಾನ ಎಂದರಂತೆ.

ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಇವರೆಲ್ಲ ಕರ್ಣ ಮತ್ತು ಗಣೇಶ ಪ್ರಾಚೀನ ಭಾರತೀಯರಿಗಾಗಲೇ ಜೈವಿಕ ತಂತ್ರಜ್ಞಾನ ಮತ್ತು ಪ್ಲಾಸ್ಟಿಕ್ ಸರ್ಜರಿ ತಿಳಿದಿತ್ತು ಎಂಬುದಕ್ಕೆ ಸಾಕ್ಷಿ ಎಂದು ಗಂಭೀರವಾಗಿಯೇ ಹೇಳಿರುವವರ ಸಂಪುಟದ ಸದಸ್ಯರು ತಾನೇ?

ನನ್ನ ಒಳ್ಳೆಯ ದಿನಗಳು ಯಾವಾಗ ಆರಂಭ ಪಂಡಿತ್ ಜೀ
–ಮಂಜುಲ್, ಡಿಎನ್ಎ



## ಮಂಡ್ಯ: ಮೆಗಾ ಡೈರಿ ನಿರ್ಮಾಣದ ಹೆಸರಿನಲ್ಲಿ ರೈತರ ಹಣ 'ಕಡಿತ'

### ಹಾಲು ಉತ್ಪಾದಕರಿಂದ 'ಮನ್‌ಮುಲ್' ಎದುರು ಬೃಹತ್ ಪ್ರತಿಭಟನೆ

ಎನ್.ಎಲ್. ಭರತ್‌ರಾಜ್

ಮಂಡ್ಯ ಜಿಲ್ಲೆ ಎಂದಾಕ್ಷಣ ಹೊರ ಜಿಲ್ಲೆಯವರಿಗೆ ಇದು ಶ್ರೀಮಂತ ಜಿಲ್ಲೆ ಎಂಬ ಕಲ್ಪನೆ ಇದೆ. ಆದರೆ ನೈಜ ಪರಿಸ್ಥಿತಿ ಬೇರೆನೇ ಇದೆ. ಡಾ. ನಂಜುಂಡಪ್ಪ ವರದಿ ಪ್ರಕಾರ ಜಿಲ್ಲೆಯ 7 ತಾಲ್ಲೂಕುಗಳಲ್ಲಿ ಮಳವಳ್ಳಿ, ನಾಗಮಂಗಲ, ಕೆ.ಆರ್.ಪೇಟೆಗಳು ಅತಿ ಹಿಂದುಳಿದ ತಾಲ್ಲೂಕುಗಳು. ಮದ್ದೂರು, ಪಾಂಡವಪುರ, ಶ್ರೀರಂಗಪಟ್ಟಣ ಹಿಂದುಳಿದ ತಾಲ್ಲೂಕುಗಳಾಗಿವೆ. ಒಂದೇ ಒಂದು ಮಂಡ್ಯ ತಾಲ್ಲೂಕು ಮಾತ್ರ ಮುಂದುವರೆದ ತಾಲ್ಲೂಕಾಗಿದೆ. ಈ ಜಿಲ್ಲೆಯಲ್ಲಿ 4 ಬೃಹತ್ ಸಕ್ಕರೆ ಕಾರ್ಖಾನೆಗಳನ್ನು ಹೊರತುಪಡಿಸಿದರೆ ಉಳಿದಂತೆ ಹೇಳಿಕೊಳ್ಳುವಂತಹ ದೊಡ್ಡ ದೊಡ್ಡ ಕೈಗಾರಿಕೆಗಳಿಲ್ಲ. ಅದ್ದರಿಂದ ಜಿಲ್ಲೆಯ



ಜನರು ಅತಿ ಹೆಚ್ಚು ಕೃಷಿಯನ್ನೇ ಅವಲಂಬಿಸಿದ್ದಾರೆ. ಮತ್ತು ಅತಿ ಹೆಚ್ಚು ಹೈನುಗಾರಿಕೆಯಲ್ಲಿ ತೊಡಗಿ ಜೀವನ ನಡೆಸುತ್ತಿದ್ದಾರೆ. ರಾಜ್ಯದಲ್ಲೇ ಮಂಡ್ಯ ಜಿಲ್ಲೆ ಹಾಲು ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಸರಾಸರಿ 6,50,000 ಲೀಟರ್ ದಿನವೊಂದಕ್ಕೆ ಉತ್ಪಾದನೆಯಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ನೀರುದ್ಯೋಗ ಸಮಸ್ಯೆ ಹೆಚ್ಚಾಗಿ ಯುವಜನರು ನಗರಪ್ರದೇಶಗಳಿಗೆ ಉದ್ಯೋಗಕ್ಕಾಗಿ ವಲಸೆಹೋದರೆ ಉಳಿದ ನೀರುದ್ಯೋಗಿ ಯುವಜನರು ರೇಷ್ಮೆ ಮತ್ತು ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಮಂಡ್ಯ ಜಿಲ್ಲಾ ಹಾಲು ಒಕ್ಕೂಟವು (ಮನ್‌ಮುಲ್) ಮೆಗಾ ಡೈರಿ ನಿರ್ಮಾಣ ಮಾಡಿ ಹಾಲು ಉತ್ಪಾದಕರ ಸಮಸ್ಯೆಗಳಿಗೆ ಸಂಜೀವಿನಿ ನೀಡುತ್ತೇವೆಂದು ಹೇಳಿ 200 ಕೋಟಿ ರೂಪಾಯಿ ಯೋಜನೆಯ ಮೆಗಾ ಡೈರಿ ಮಾಡಲು ಹೊರಟಿದೆ. ಈ ಯೋಜನೆಯ ಜಾರಿಗಾಗಿ ರೈತರಿಂದ ಲೀಟರ್‌ಗೆ 1.50 ರೂಪಾಯಿಗಳನ್ನು ಆಕ್ಟೋಬರ್ 1ರಿಂದ ಕಡಿತ ಮಾಡಲಾಗುತ್ತಿದೆ. ಲೀಟರ್‌ಗೆ 23.30 ಪೈಸೆ ಬದಲಾಗಿ 22.ರೂ ಕೊಡಲಾಗುತ್ತಿದೆ. ಈಗಾಗಲೇ ಹಾಲು ಉತ್ಪಾದನೆಯ ವೆಚ್ಚ ದುಬಾರಿಯಾಗಿ ಸಂಕಷ್ಟದಲ್ಲಿರುವ ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

**ದುಬಾರಿ ಪಶು ಆಹಾರ-ಸಂಕಷ್ಟದಲ್ಲಿ ಹೈನು ರೈತರು**

ಪಶು ಆಹಾರದ ಬೆಲೆ ಹೆಚ್ಚಳವಾಗಿದೆ. 5 ಲೀಟರ್ ಹಾಲು ಕರೆಯುವ ಹಸುವಿಗೆ 4 ಕೆ.ಜಿ. ಫೀಡ್ಸ್ ಹಾಕಬೇಕು. ಒಂದು ಕೆ.ಜಿ.ಗೆ 18 ರೂ.ನಂತೆ 72 ರೂಪಾಯಿ, ಒಂದು ಪಿಂಡಿ ಸೀಮೆಹುಲ್ಲು 30 ರೂ., ಒಂದು ಪಿಂಡಿ ಒಣಹುಲ್ಲು 25ರೂ., ಹಸುವಿನ ಬಂಡವಾಳ 60,000 ರೂ. ಆ ಹಸುವಿನ ನಿರ್ವಹಣೆಗಾಗಿ ಆಳಿನ ಕೂಲಿ 100 ರೂಪಾಯಿ, ಹೀಗೆ ಸುಮಾರು ದಿನಕ್ಕೆ 270 ರೂಪಾಯಿಗಳ ಖರ್ಚು ಬರುತ್ತದೆ. ಆದಾಯ 220 ಆಗುತ್ತದೆ. ದಿನಕ್ಕೆ ಸುಮಾರು 50 ರೂಪಾಯಿಗಳ ಕೊರತೆ ಬರುತ್ತದೆ. ತಿಂಗಳಿಗೆ ಒಂದೂವರೆ ಸಾವಿರದಂತೆ ವರ್ಷಕ್ಕೆ 18 ಸಾವಿರ ನಷ್ಟವಾಗುತ್ತದೆ. ಇದು ಹಸು ಹಾಲು ಕರೆಯುವ ಸಂದರ್ಭದಲ್ಲಿ ಮಾತ್ರ. ಹಸು ಗಬ್ಬಾದ ಸಂದರ್ಭದಲ್ಲಿ ನಷ್ಟದ ಪ್ರಮಾಣ ಇನ್ನೂ ಹೆಚ್ಚುತ್ತದೆ. ಹೆಣ್ಣು ಕರು ಹಾಕಿದರೆ ಸ್ವಲ್ಪ ಸಹಾಯವಾಗುತ್ತದೆ. ಗಂಡು ಕರು ಹಾಕಿದರೆ ಹೆಚ್ಚಿನ ಪ್ರಯೋಜನವಿಲ್ಲ. 'ಬಿಸ್ಲೇರಿ' ನೀರಿನ ಬೆಲೆಯು ಹಾಲಿಗೆ ಸಿಗುತ್ತಿಲ್ಲ.

ಇಂತಹ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತಸಂಘ, ಮಳವಳ್ಳಿ ತಾಲ್ಲೂಕು ಹಾಲು ಉತ್ಪಾದಕರ ಸಭೆಯನ್ನು ಆಕ್ಟೋಬರ್ 21ರಂದು ಮಳವಳ್ಳಿ ಪ್ರವಾಸಿ ಮಂದಿರದಲ್ಲಿ ಕರೆಯಿತು. ತಾಲ್ಲೂಕಿನಲ್ಲಿರುವ 118 ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಪ್ರತಿನಿಧಿಸಿ 45 ಮಂದಿ ಭಾಗವಹಿಸಿದ್ದರು. ಸಭೆಯಲ್ಲಿ ಹಾಲು ಉತ್ಪಾದಕರ ಹೋರಾಟ ಸಮಿತಿಯನ್ನು ರಚಿಸಲಾಯಿತು. ಸಂಚಾಲಕರಾಗಿ ಎನ್.ಎಲ್. ಭರತ್‌ರಾಜ್, ಸಹ ಸಂಚಾಲಕರಾಗಿ ಎನ್.ಲಿಂಗರಾಜು ಮೂರ್ತಿ, ರವಿ, ಎಚ್.ಎಲ್ ಬಸವರಾಜು, ಸುಶೀಲ ಹಾಗೂ



ಪ್ರಾಂತ ರೈತಸಂಘದ ಟಿ.ಎಲ್. ಕೃಷ್ಣೇಗೌಡ, ಎಂ.ಲಿಂಗರಾಜು ಒಳಗೊಂಡಂತೆ 13 ಮಂದಿ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಈ ಸಭೆಯಲ್ಲಿ ಆಕ್ಟೋಬರ್ 30 ರಂದು ಮಂಡ್ಯ ಹಾಲು ಒಕ್ಕೂಟದ ಮುಂದೆ ಹೋರಾಟ ನಡೆಸಲು ತೀರ್ಮಾನಿಸಿ ಸಮಿತಿಯ ಸದಸ್ಯರಿಗೆ ಹೋಬಳಿಯವರು ಜವಾಬ್ದಾರಿಯನ್ನು ನೀಡಲಾಯಿತು. ಹತ್ತು ಸಾವಿರ ಕರ ಪತ್ರಗಳನ್ನು ಹಾಕಿ ಎಲ್ಲಾ ಹಳ್ಳಿಗಳಲ್ಲಿ ಕರಪತ್ರ ಹಂಚಿ ಪ್ರಚಾರ ನಡೆಸಲಾಯಿತು. ಹಾಲು ಉತ್ಪಾದಕರ ಸಂಘಗಳ ಕಾರ್ಯದರ್ಶಿಗಳು, ಅಧ್ಯಕ್ಷರು ಮತ್ತು ನಿರ್ದೇಶಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರಿಗೆ ಇದರ ಮಹತ್ವವನ್ನು ಅರ್ಥ ಮಾಡಿಸಲಾಯಿತು. ಬಸ್ಸು, ಚಿಕ್ಕ ಲಾರಿ, ಆಟೋ, ಸ್ಕೂಟರ್ ಏರಿ ಸು. 800ಕ್ಕೂ ಹೆಚ್ಚು ಮಂದಿ ಈ ಹೋರಾಟದಲ್ಲಿ ಭಾಗವಹಿಸಿದ್ದರು. ಗೆಜ್ಜಲಗೆರೆಯ ರೈತ ಹುತಾತ್ಮ ಸ್ಥಳದಿಂದ ಮೆರವಣಿಗೆ ಹೊರಟು ಮನ್‌ಮುಲ್ ಗೇಟ್‌ಗೆ ಬಂದಾಗ ಪೋಲೀಸರು ಅಡ್ಡಗಟ್ಟಿದರು. ಪೊಲೀಸ್‌ನವರಿಗೂ ಮತ್ತು ಪ್ರತಿಭಟನಾಕಾರರಿಗೂ ತಳ್ಳಾಟ ನಡೆಯಿತು. ಪೊಲೀಸ್ ಹಾಗೂ ಸೆಕ್ಯೂರಿಟಿಗಳನ್ನು ನೂಕಿ ಮನ್ ಮುಲ್ ಆಡಳಿತ ಕಛೇರಿಯತ್ತ ನುಗ್ಗಿ ಧರಣಿ ಕುಳಿತರು.

ಧರಣಿಕಾರರನ್ನು ಉದ್ದೇಶಿಸಿ ಹಾಲು ಉತ್ಪಾದಕರ ಹೋರಾಟ ಸಮಿತಿಯ ಸಂಚಾಲಕ ಎನ್. ಎಲ್. ಭರತ್ ರಾಜ್ ಮಾತನಾಡುತ್ತಾ, ಈಗಾಗಲೇ ಮನ್‌ಮುಲ್ ಮೂಲಭೂತ ಅಭಿವೃದ್ಧಿ ನಿಧಿಗೆಂದು ಲೀಟರ್‌ಗೆ 15 ಪೈಸೆ, ರೈತ ಕಲ್ಯಾಣ ಟ್ರಸ್ಟ್‌ಗೆ 10 ಪೈಸೆ, ಷೇರು ಫೀ ಎಂದು 3 ಪೈಸೆ, ವೈದ್ಯಕೀಯ ವೆಚ್ಚಕ್ಕಾಗಿ 2 ಪೈಸೆ, ಒಟ್ಟು 31 ಪೈಸೆಯನ್ನು ಕಡಿತ ಮಾಡುತ್ತಿದ್ದೀರಿ, ಅದರ ಜೊತೆಗೆ ಮೆಗಾ ಡೈರಿ ನಿರ್ಮಾಣದ ಹೆಸರಿನಲ್ಲಿ 1.81 ಪೈಸೆ ಕಡಿತ ಮಾಡಲಾಗುತ್ತಿದೆ. ಸರಾಸರಿ ದಿನವೊಂದಕ್ಕೆ 6 ಲಕ್ಷದ 50 ಸಾವಿರ ಲೀಟರ್ ಹಾಲಿಗೆ 1.81 ಪೈಸೆಯಂತೆ ದಿನಕ್ಕೆ 11,76,500 ತಿಂಗಳಿಗೆ 3,52,95,000, ವರ್ಷಕ್ಕೆ 42 ಕೋಟಿ 35 ಲಕ್ಷದ 40 ಸಾವಿರ ಹೀಗೆ ಮೂರು ವರ್ಷಗಳ ಕಾಲ ಹಣ ಕಟಾವು ಮಾಡುತ್ತೇವೆಂದು ಹೇಳಿರುವಿರಿ. ಹಾಗಾಗಿ ಮೂರು ವರ್ಷಕ್ಕೆ 127 ಕೋಟಿ 6 ಲಕ್ಷದ 20 ಸಾವಿರವಾಗುತ್ತದೆ. 200 ಕೋಟಿ ರೂಪಾಯಿ ಯೋಜನೆಗೆ ಇಷ್ಟು ದೊಡ್ಡ ಪ್ರಮಾಣದ ಹಣವನ್ನು ರೈತರಿಂದ ವಸೂಲಿ ಮಾಡುವುದು ಖಂಡನೀಯ ಎಂದರು.

ಮೆಗಾ ಡೈರಿ ಮಾಡಲು ನಮ್ಮದೇನು ಅಭ್ಯಂತರವಿಲ್ಲ. ಆದರೆ ರೈತರ ಸಂಕಷ್ಟಕ್ಕೆ ಇದು ಅಂತಿಮ ಪರ್ಯಾಯವಲ್ಲ. ಅಧಿಕ ಹಾಲನ್ನು ಮಾರಾಟ ಮಾಡಲು ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು ಜನರಲ್ಲಿ ಕೊಂಡುಕೊಳ್ಳುವ ಶಕ್ತಿ, ಹಾಲು, ಮೊಸರು, ತುಪ್ಪ, ಬಳಸಬೇಕೆನ್ನುವ ಅರಿವು ಮೂಡಿಸಬೇಕು. ಮೆಗಾ ಡೈರಿ ನಿರ್ಮಾಣಕ್ಕೆ ಎನ್.ಡಿ.ಡಿ.ಬಿ., ನಬಾರ್ಡ್, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಹಾಯ ಹಾಗೂ ಒಕ್ಕೂಟದ ಲಾಭಂಶದಿಂದ ಮಾಡಬೇಕು. ಸುಲಭದ ದಾರಿ ಎಂದು ರೈತರ ಹಣ ಕಡಿತಮಾಡಬಾರದು.

ಇತ್ತೀಚೆಗೆ ನಡೆದ 'ಮನ್ ಮುಲ್' ಚುನಾವಣೆಯಲ್ಲಿ ಒಂದು ಸ್ಥಾನಕ್ಕೆ 50 ಲಕ್ಷದಿಂದ 1ಕೋಟಿ ಹಣ ಖರ್ಚು ಮಾಡಿದ್ದು, ಇದರ ಹಿನ್ನೆಲೆ ನೋಡಿದರೆ ಗಂಭೀರ ಭ್ರಷ್ಟಾಚಾರದ ವಾಸನೆ ಕಾಣುತ್ತದೆ. ಮಂಗಳೂರಿನಲ್ಲಿ ಲೀಟರ್ ಹಾಲಿಗೆ 25 ರೂ. ಬೆಳಗಾಂನಲ್ಲಿ ಎಮ್ಮೆ ಹಾಲಿಗೆ 29, ಗುಲ್ಬರ್ಗದಲ್ಲಿ 28.70, ಬಿಜಾಪುರ, ಬಳ್ಳಾರಿಗಳಲ್ಲಿ 27 ರೂ. ಇದೆ. ಆದರೆ ಮಂಡ್ಯದಲ್ಲಿ ಹಾಲು ಒಕ್ಕೂಟ ಹಸು ಮತ್ತು ಎಮ್ಮೆ ಹಾಲಿಗೆ 22 ರೂ. ನೀಡುತ್ತಿದೆ. ಇದು ಬಹಳ ಅನ್ಯಾಯವಾಗಿದೆ ಎಂದು ಟೀಕಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಟಿ.ಎಲ್. ಕೃಷ್ಣೇಗೌಡ ಮಾತನಾಡಿ, ಬೆಣ್ಣೆ ತೆಗೆದ ಹಾಲನ್ನು ಗ್ರಾಹಕರಿಗೆ 30 ರೂ.ಗಳಿಗೆ ಮಾರಾಟ ಮಾಡುತ್ತೀರಿ. ಲೀಟ-ರ್‌ಗೆ 6.50 ಪೈಸೆ ಲಾಭ ಬರುತ್ತದೆ. ಸಾರ್ವಜನಿಕರ ಹಣದಲ್ಲಿ ವಿದೇಶಿ ಪ್ರವಾಸ ಮಾಡುತ್ತೀರಿ. ಇತ್ತೀಚೆಗೆ ಯಂತ್ರಗಳ ದುರಸ್ಥಿಗಾಗಿ ಸುಮಾರು 80 ಕೋಟಿ ಹಣ ವ್ಯಯ ಮಾಡಿದ್ದೀರಿ. ಹಾಗೂ ಹಳ್ಳಿಗಳಲ್ಲಿ ಬಿ.ಎಂ.ಸಿ. ಕೇಂದ್ರಗಳನ್ನು ಮಾಡಿರುವುದರಿಂದ ವೆಚ್ಚ ಕಡಿಮೆಯಾಗಿದೆ. ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳು 5 ರಿಂದ 10 ಲಕ್ಷ ಲಾಭದಲ್ಲಿವೆ. ಆದರೆ ಈ ಒಕ್ಕೂಟ 1987ರಲ್ಲಿ ಆರಂಭವಾಗಿ 4 ಕೋಟಿ ಮಾತ್ರ ಲಾಭದಲ್ಲಿದೆ ಎಂದರೆ ಏನು ಅರ್ಥ ಎಂದು ಪ್ರಶ್ನಿಸಿದರು. ಆಡಳಿತ ಮಂಡಳಿ ಮತ್ತು ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಹಾಲು ಸಾಗಾಣಿಕೆ, ಯಂತ್ರಗಳ ಖರೀದಿ ಮುಂತಾದವುಗಳಲ್ಲಿ ಭ್ರಷ್ಟಾಚಾರವಾಗಿದೆ ಎಂದು ದೂರಿದರು.

ಮನ್‌ಮುಲ್ ಅಧ್ಯಕ್ಷ ಕದಲೂರು ರಾಮಕೃಷ್ಣ, ನಿರ್ದೇಶಕರಾದ ಬೋರೇಗೌಡ, ಚಂದ್ರು, ಅಂಬರೀಷ್, ಬೆಟ್ಟಸ್ವಾಮಿಗೌಡ ಮುಂತಾದವರು ಮನವೊಲಿಸಲು ಬಂದಾಗ ಪ್ರತಿಭಟನಾಕಾರರು ಹಿಗ್ಗಾಮುಗ್ಗ ತರಾಟೆಗೆ ತೆಗೆದುಕೊಂಡರು. ಸ್ಥಳಕ್ಕೆ ಡಿ.ಸಿ. ಬರಬೇಕೆಂದು ಪಟ್ಟುಹಿಡಿದಾಗ ಸಂಜೆ 5 ಗಂಟೆಯ ಸಮಯಕ್ಕೆ ಡಿ.ಸಿ.ಸ್ಥಳಕ್ಕೆ ಬಂದು ಆಡಳಿತ ಮಂಡಳಿಯವರ ಜೊತೆ ಮಾತನಾಡಿ ನವೆಂಬರ್ 6ರಂದು ಡಿ.ಸಿ.ಕಛೇರಿಯಲ್ಲಿ ಕೆಪಿಆರ್‌ಎಸ್ ಮತ್ತು ಹಾಲು ಉತ್ಪಾದಕರ ಹೋರಾಟ ಸಮಿತಿ ಹಾಗೂ ಆಡಳಿತ ಮಂಡಳಿಯವರ ಸಭೆ ಕರೆಯಲು ತೀರ್ಮಾನಿಸಿ ಪ್ರತಿಭಟನಾಕಾರರ ಮನವೊಲಿಸಿದರು.

ಮೆಗಾ ಡೈರಿ ಹೆಸರಿನಲ್ಲಿ ಲೀಟರ್‌ಗೆ 1.50 ರೂ. ಕಟಾವು ಮಾಡುವುದನ್ನ ತಕ್ಷಣ ನಿಲ್ಲಿಸಬೇಕು. ಈಗಾಗಲೇ ಕಟಾವು ಮಾಡಿರುವ ಹಣವನ್ನು ರೈತರಿಗೆ ವಾಪಸ್ ಕೊಡಬೇಕು. ಹಾಲಿನ ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ಹಾಲಿನ ಬೆಲೆ ಹೆಚ್ಚಿಸಬೇಕು. ಹೈನುಗಾರಿಕೆಗೆ ಪ್ರೋತ್ಸಾಹಿಸಲು ಮತ್ತು ಹಸು ಕೊಳ್ಳಲು ಒಕ್ಕೂಟ ಸಾಲ ನೀಡಬೇಕು. ಪಶು ಆಹಾರದ ಬೆಲೆ ಕಡಿಮೆ ಮಾಡಬೇಕು. ಜಾನುವಾರುಗಳ ರಕ್ಷಣೆಗೆ ಒಕ್ಕೂಟದ ವತಿಯಿಂದ ವೈದ್ಯಕೀಯ ಸೇವೆ ಸಿಗಬೇಕು. ರೈತ ಕಲ್ಯಾಣ ಟ್ರಸ್ಟ್‌ನಿಂದ ರೈತರ ಮಕ್ಕಳ ಶಿಕ್ಷಣಕ್ಕೆ ಸಹಾಯ ಮಾಡಬೇಕೆಂದು ಒತ್ತಾಯಿಸಿ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಪ್ರಾಂತ ರೈತ ಸಂಘದ ಟಿ.ಯಶವಂತ್, ಆನಂದ್, ಲಿಂಗರಾಜು, ಜವರಯ್ಯ, ಹಾಲು ಉತ್ಪಾದಕರ ಹೋರಾಟ ಸಮಿತಿಯ ಎನ್.ಲಿಂಗರಾಜ ಮೂರ್ತಿ, ರವಿ ಸುಶೀಲ, ಎಚ್.ಎಲ್.ಬಸವರಾಜು, ಜನವಾದಿ ಮಹಿಳಾ ಸಂಘಟನೆಯ ದೇವಿ, ಸುನೀತ ಪದ್ಮ, ನಾಗರತ್ನ, ಡಿವೈಎಫ್‌ಐನ ಗುರುಸ್ವಾಮಿ, ಎಚ್.ಕೆ. ತಿಮ್ಮೇಗೌಡ ಮುತಾಂದವರು ಭಾಗವಹಿಸಿದ್ದರು.

## ಉದ್ಯೋಗ ಖಾತರಿ ಯೋಜನೆಯನ್ನು ಕೊಲ್ಲದಿರಿ........

ಪುಟ 4 ರಿಂದ

ಗಂಗಾಧರಸ್ವಾಮಿ ಮತ್ತು ಶಿವನಗೌಡರ ನೇತೃತ್ವದಲ್ಲಿ ಗಂಗಾವತಿಯಲ್ಲಿ 250 ಸಂಗಾತಿಗಳು, ಕೊಪ್ಪಳದಲ್ಲಿ 150 ಜನರು, ಕುಷ್ಟಗಿಯಲ್ಲಿ 200 ಜನರು ಮತ್ತು ಯಲಬುರ್ಗದಲ್ಲಿ 30 ಜನರು ಭಾಗವಹಿಸಿದ್ದಾರೆ. ಅಲ್ಲಿನ ತಾಲ್ಲೂಕು ತಹಶೀಲ್ದಾರರಿಗೆ ಮನವಿ ಪತ್ರವನ್ನು ಸಲ್ಲಿಸಿದ್ದಾರೆ.

**ರಾಯಚೂರು :**

ರಾಯಚೂರು ಜಿಲ್ಲಾ ಸಮಿತಿಯ ರಾಯಚೂರು ಮತ್ತು ದೇವದುರ್ಗ ತಾಲ್ಲೂಕುಗಳಲ್ಲಿ ಪ್ರತಿಭಟನೆಗಳು ನಡೆದಿದ್ದು ಜಿಲ್ಲಾ ಕಾರ್ಯದರ್ಶಿ ಮಲ್ಲಯ್ಯ ಜಾಲಹಳ್ಳಿ ಪ್ರತಿಭಟನೆಗಳ ನೇತೃತ್ವವನ್ನು ವಹಿಸಿದ್ದರು. ಎರಡು ತಾಲ್ಲೂಕುಗಳಲ್ಲಿ ಸುಮಾರು 50 ಜನ ಸಂಗಾತಿಗಳು ಭಾಗವಹಿದ್ದರು.

**ಮಂಡ್ಯ :**

ಮಂಡ್ಯ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಸುಮಾರು 200 ಜನ ರೈತ, ಕೂಲಿಕಾರರನ್ನು ಮತ್ತು ಪಕ್ಷದ ಸದಸ್ಯರನ್ನು ಒಟ್ಟುಗೂಡಿಸಿ ಜಿಲ್ಲಾಧಿಕಾರಿಗಳ ಕಛೇ-ರಿಯ ಮುಂದೆ ಉದ್ಯೋಗ ಖಾತ್ರಿಯ ಕೆಲಸಕ್ಕಾಗಿ ಪ್ರತಿಭಟನೆಯನ್ನು ನಡೆಸಿದೆ. ಅವರ ಪ್ರತಿಭಟನೆಗೆ ಮಣಿದ ಜಿಲ್ಲಾಡಳಿತ ಪ್ರತಿಭಟನೆಯ ಮಾರನೇಯ ದಿನವೇ ಕೂಲಿಕಾರರಿಗೆ ಕೆಲಸವನ್ನು ನೀಡಿದ್ದು ಪ್ರತಿಭಟನೆ ಯಶಸ್ವಿಯಾಗಿದೆ. ಈ ಪ್ರತಿಭಟನೆಯ ನೇತೃತ್ವವನ್ನು ರಾಜ್ಯ ಸಮಿತಿ ಸದಸ್ಯರು ಮತ್ತು ಜಿಲ್ಲಾ ಕಾರ್ಯದರ್ಶಿ ಕಾಂ. ಎಂ. ಪುಟ್ಟಮಾದು ವಹಿಸಿದ್ದರು.

**ಬಿಜಾಪುರ :**

ನವೆಂಬರ್ 27, 201 ರಂದು ಬಿಜಾಪುರ ಜಿಲ್ಲೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಭೀಮಸಿ ಕಲಾದಗಿಯವರ ನೇತೃತ್ವದಲ್ಲಿ ಸುಮಾರು 50 ಜನರು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಪ್ರತಿಭಟನೆ ನಡೆಸಿದ್ದಾರೆ ಹಾಗೂ ಅಪರ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿದ್ದಾರೆ.

**ಧಾರವಾಡ, ಗಜೇಂದ್ರಗಡ ಮತ್ತು ರೋಣ :**

ಅವಿಭಜಿತ ಧಾರವಾಡ ಜಿಲ್ಲಾ ವ್ಯಾಪ್ತಿಯ ಧಾರವಾಡ, ಗಜೇಂದ್ರಗಡ ಮತ್ತು ರೋಣ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಪ್ರತಿಭಟನಾಕಾರರು ಸ್ಥಳೀಯ ತಾಲ್ಲೂಕು ಕಛೇರಿಗಳ ಮುಂದೆ ಧರಣಿ ಕುಳಿತು ಪ್ರತಿಭಟನೆ ನಡೆಸಿದ್ದಾರೆ. ಅನಂತರ ತಾಲ್ಲೂಕು ಅಧಿಕಾರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿದ್ದಾರೆ. ಪ್ರತಿಭಟನೆಯನ್ನು ಉದ್ದೇಶಿಸಿ ಜಿಲ್ಲಾ ಕಾರ್ಯದರ್ಶಿ ಬಿ.ಎಸ್. ಸೊಪ್ಪಿನ್, ಎಂ.ಎಸ್. ಹಡಪದ ಮುಂತಾದ ಮುಖಂಡರು ಮಾತನಾಡಿದರು. ಧರಣಿಗಳಲ್ಲಿ 50ರಿಂದ 100ಜನ ಪ್ರತಿಭಟನಾಕಾರರು ಭಾಗವಹಿಸಿದ್ದರು.

**ದಾವಣಗೆರೆ :**

ದಾವಣಗೆರೆ ಜಿಲ್ಲಾ ಸಮಿತಿಯ ದಾವಣಗೆರೆ ಮತ್ತು ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಪ್ರತಿಭಟನೆಯನ್ನು ನಡೆಸಲಾಗಿದೆ. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಎಲ್. ಭಟ್ ದಾವಣಗೆರೆ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದರು. ಪ್ರತಿಭಟನೆಯಲ್ಲಿ 40 ಜನ ಸಂಗಾತಿಗಳು ಭಾಗವಹಿಸಿದ್ದಾರೆ. ಹೊಳಲ್ಕೆರೆಯಲ್ಲಿಯೂ 40 ಜನ ಭಾಗವಹಿಸಿದ್ದರು.

**ಹಾಸನ :**

ಹಾಸನದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯ ಎದುರು ಧರಣಿ ಕುಳಿತು ಪ್ರತಿಭಟನೆಯನ್ನು ನಡೆಸಲಾಗಿದೆ. ಸಿಪಿಐ(ಎಂ) ಹಾಸನ ಜಿಲ್ಲಾ ಸಮಿತಿ ಸದಸ್ಯರಾದ ಹೆಚ್.ಆರ್. ನವೀನ್‌ಕುಮಾರ್ ಪ್ರತಿಭಟನೆಯ ನೇತೃತ್ವವನ್ನು ವಹಿಸಿದ್ದರು. ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದೆ.

**ತುಮಕೂರು :**

ಸಿಪಿಐ(ಎಂ) ತುಮಕೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ತುಮಕೂರಿನಲ್ಲಿ 'ನರೇಗಾ ಉಳಿಸಿ' ಪ್ರತಿಭಟನೆ ನಡೆದಿದೆ. ರಾಜ್ಯ ಸಮಿತಿ ಸದಸ್ಯರಾದ ಸಯ್ಯದ್ ಮುಜೀಬ್ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಸುಮಾರು 100 ಜನರು ಭಾಗವಹಿಸಿದ್ದರು. ●

# ಡಿಸೆಂಬರ್ 8 ರಿಂದ 14ರ ವರೆಗೆ 6 ಎಡ ಪಕ್ಷಗಳಿಂದ ಪ್ರತಿಭಟನಾ ಪ್ರಚಾರಾಂದೋಲನ

ಸಿಪಿಐ(ಎಂ), ಸಿಪಿಐ, ಆರ್‌ಎಸ್‌ಪಿ, ಎಐಎಫ್‌ಬಿ, ಸಿಪಿಐ(ಎಂ.ಎಲ್.) ಲಿಬರೇಷನ್, ಮತ್ತು ಎಸ್‌ಯುಸಿಐ(ಸಿ)–ಈ 6 ಎಡಪಕ್ಷಗಳು ನವೆಂಬರ್ 1 ರಂದು ನವದೆಹಲಿಯಲ್ಲಿ ಸಭೆ ಸೇರಿ ಈ ಕೆಳಗಿನ ಹೇಳಿಕೆಯನ್ನು ಬಿಡುಗಡೆ ಮಾಡಿವೆ.

ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಕಾರ್ಪೋರೇಟ್ ಮತ್ತು ಹಿಂದುತ್ವ ಶಕ್ತಿಗಳ ಕುಮ್ಮಕ್ಕಿನಿಂದ ಪುಟಿದೆದ್ದಿರುವ ಬಲಪಂಥೀಯ ದಾಳಿ ತೀವ್ರಗೊಳ್ಳುತ್ತಿದೆ. ಜನರ ಮೇಲೆ ಹೇರಲಾದ ನವಉದಾರೀಕರಣದ ಧೋರಣೆಗಳಿಂದಾಗಿ ಅವರ ಬದುಕು ದುಸ್ತರವಾಗುತ್ತಿದೆ. ಬೆಲೆಏರಿಕೆ, ನಿರುದ್ಯೋಗ, ಭ್ರಷ್ಟಾಚಾರದಂತಹ ಸಮಸ್ಯೆಗಳಿಗೆ ಯಾವುದೇ ಪರಿಹಾರ ದೊರೆಯುತ್ತಿಲ್ಲ.

ಹಿಂದುತ್ವ ಶಕ್ತಿಗಳು ಆಕ್ರಮಣಕಾರಿ ಕೋಮುವಾದಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿವೆ. ಆರೆಸ್ಸೆಸ್ ಮತ್ತು ಅದರ ಸಂಘಟನೆಗಳ ನಿರ್ದೇಶನದ ಅಡಿಯಲ್ಲಿ ಮೋದಿ ಸರ್ಕಾರವು ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳನ್ನು ಕೇಸರೀಕರಣಗೊಳಿಸುತ್ತಿದೆ. ದೇಶದ ವಿವಿಧ ಭಾಗಗಳಲ್ಲಿ ಕೋಮು ಗಲಭೆಗಳು ಹೆಚ್ಚುತ್ತಿವೆ.

ಈ ಹಿನ್ನೆಲೆಯಲ್ಲಿ ಎಡಪಕ್ಷಗಳು ಈ ಕೆಳಗಿನ ಪ್ರಶ್ನೆಗಳ ಮೇಲೆ ಡಿಸೆಂಬರ್ 8 ರಿಂದ 14 ರ ವರೆಗೆ ದೇಶಾದ್ಯಂತ ಪ್ರತಿಭಟನಾ ಪ್ರಚಾರಾಂದೋಲನ ನಡೆಸಲು ತೀರ್ಮಾನಿಸಿವೆ.

(1)ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಮೊಟಕುಗೊಳಿಸುವ ಹುನ್ನಾರದ ವಿರುದ್ಧ.

(2)ಬೆಲೆ ಏರಿಕೆಯನ್ನು ತಡೆಗಟ್ಟಲು ಒತ್ತಾಯ ಮತ್ತು ಮಿತಿ ಮೀರಿ ಏರಿಸಲಾದ ಔಷಧಿ ಮತ್ತು ಮಾತ್ರೆಗಳ ಬೆಲೆಗಳನ್ನು ಇಳಿಸಲು ಆಗ್ರಹ.

(3)ವಿಮಾ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ವಿರೋಧ.

(4)ಕಪ್ಪು ಹಣ ಹೊರತೆಗೆಯಲು ದೃಢವಾದ ಕ್ರಮಕ್ಕೆ ಒತ್ತಾಯ.

(5)ಶಿಕ್ಷಣ, ಸಾರ್ವಜನಿಕ ಪ್ರಸಾರ ಮಾಧ್ಯಮಗಳು ಮತ್ತು ಇತರ ಸರ್ಕಾರಿ ಸಂಸ್ಥೆಗಳಲ್ಲಿ ಆರೆಸ್ಸೆಸ್ ಮತ್ತು ಹಿಂದುತ್ವ ಸಿದ್ಧಾಂತದ ನುಸುಳುವಿಕೆಯನ್ನು ನಿಲ್ಲಿಸಲು ಒತ್ತಾಯ.

(6)'ಲವ್ ಜಿಹಾದ್' ದ್ವೇಷ ಪ್ರಸಾರವನ್ನು ಮತ್ತು ಇತರ ಕೋಮುವಾದಿ ಪ್ರಚಾರವನ್ನು ನಿಲ್ಲಿಸಲು ಆಗ್ರಹ.

(7)ಅಲ್ಪ ಸಂಖ್ಯಾತರ ಮೇಲೆ ಮತ್ತು ಅವರ ಹಕ್ಕುಗಳ ಮೇಲಿನ ದಾಳಿಯನ್ನು ನಿಲ್ಲಿಸಿ.

(8)ಮಹಿಳೆಯರ ವಿರುದ್ಧದ ಹಿಂಸೆ ಮತ್ತು ಎಲ್ಲ ವಿಧದ ದೌರ್ಜನ್ಯಗಳನ್ನು ತಡೆಗಟ್ಟಿ.

(9)ದಲಿತರ ಮೇಲಿನ ದೌರ್ಜನ್ಯಗಳನ್ನು ಮತ್ತು ಜಾತಿ ದಮನವನ್ನು ತಡೆಗಟ್ಟಿ.

**ಸಭೆಯಲ್ಲಿ ಭಾಗವಹಿಸಿದವರು :**

ದೇಬಬ್ರತ ಬಿಸ್ವಾಸ್ (ಎಐಎಫ್‌ಬಿ), ಕ್ಷಿತಿ ಗೋಸ್ವಾಮಿ ಮತ್ತು ಮನೋ ಭಟ್ಟಾಚಾರ್ಯ (ಆರ್‌ಎಸ್‌ಪಿ), ಸ್ವಪನ್ ಮುಖರ್ಜಿ ಮತ್ತು ಕವಿತಾ ಕೃಷ್ಣನ್ (ಸಿಪಿಐ(ಎಂ–ಎಲ್) ಲಿಬರೇಷನ್, ಮಾಣಿಕ್ ಮುಖರ್ಜಿ ಮತ್ತು ರಣಜಿತ್‌ಧಾರ್ (ಎಸ್‌ಯುಸಿಐ(ಸಿ), ಎ.ಬಿ. ಬರ್ಧನ್ ಮತ್ತು ಡಿ. ರಾಜಾ (ಸಿಪಿಐ) ಮತ್ತು ಪ್ರಕಾಶ್ ಕಾರಟ್ ಹಾಗೂ ಎಸ್. ರಾಮಚಂದ್ರನ್ ಪಿಳ್ಳೈ (ಸಿಪಿಐ(ಎಂ)).

## ಬೆಂಗಳೂರು ದಕ್ಷಿಣ ಜಿಲ್ಲಾ ಸಮ್ಮೇಳನ...

ಪುಟ 9 ರಿಂದ

ಕೆರೆಗಳ ಒತ್ತುವರಿ, ಪ್ರತಿ ಮಳೆ ವೇಳೆ ಸಂಕಷ್ಟ, ಸಾವು ನೋವಿಗೆ ಕಾರಣವಾಗುತ್ತಿವೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತನ್ನ 4ನೇ ಸಮಗ್ರ ನೀಲಿನಕ್ಷೆ 2031ರ ಕರಡನ್ನು ತಯಾರಿಸಲು ಮುಂದಾಗಿದೆ. 2015ಕ್ಕಾಗಿ ತಯಾರಿಸಲಾಗಿದ್ದ 3ನೇ ಸಿಡಿಪಿಯನ್ನು ಜಾಲ್ತಿಯಲ್ಲಿದೆ. ಮೆಟ್ರೋಪಾಲಿಟನ್ ಪ್ರದೇಶಗಳಿಗೆ ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ 2031ಕ್ಕಾಗಿ ಸಮಗ್ರ ನೀಲಿನಕ್ಷೆಯ ದೃಷ್ಟಿಕೋನದ ಕರಡನ್ನು ಪ್ರಕಟಿಸಿದೆ.

**ಪಡಿತರ ಪ್ರಶ್ನೆ :**

ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆ ಜನಪ್ರಿಯತೆ ಪಡೆದಿದ್ದರೂ, ಎಪಿಎಲ್ ಕಾರ್ಡ್‌ದಾರರಿಗೆ ಆಹಾರ ಸರಬರಾಜು ನಿಲ್ಲಿಸಿರುವ ಅಂಶ ವ್ಯಾಪಕ ಟೀಕೆಗೆ ಗು-ರಿಯಾಗಿದೆ. ಅನ್ನಭಾಗ್ಯದಲ್ಲಿನ ಭ್ರಷ್ಟಾಚಾರ ಕುರಿತು ವರದಿಯಾಗುತ್ತಿವೆ. ಬಿಪಿಎಲ್ ಕಾರ್ಡ್‌ಗಳನ್ನು ಕಡಿತ ಮಾಡಲು ನಿರಂತರವಾಗಿ ಯತ್ನಿಸಲಾಗುತ್ತಿದೆ. ಕಾರ್ಡ್ ಮುಂದುವರಿಕೆಗೆ ಮೊಬೈಲ್ ಮೂಲಕ ಮೆಸೇಜ್ ಮಾಡಬೇಕು. ಆಧಾರ್ ಕಾರ್ಡ್ ಸಂ-ಖ್ಯೆ ನಮೂದಿಸಬೇಕೆಂಬ ಅಂಶಗಳು, ಬಿಪಿಎಲ್ ಕುಟುಂಬಗಳನ್ನು ಸಂಕಷ್ಟಕ್ಕೆ ಈಡುಮಾಡಿದೆ. ಪ್ರತಿ ಮೆಸೇಜ್ ಕಳುಹಿಸಲು 20 ರೂ. ಪಡೆಯುವ ದಂಧೆ ನಡೆದಿದೆ. ಆನ್‌ಲೈನ್ ಅರ್ಜಿ ಹೆಸರಿನಲ್ಲಿ ಈಗಾಗಲೆ ಬಡವರಿಂದ ನೂರಿನ್ನೂರು ರೂಪಾಯಿಗಳನ್ನು ಖಾಸಗಿ ಏಜೆನ್ಸಿಗಳು ದೋಚಿವೆ. ಏಕಾಏಕಿ ಕಾರ್ಡ್‌ಗೆ ಪಡಿತರ ವಿತರಣೆ ಸ್ಥಗಿತಗೊಳಿಸಿ, ಕಛೇರಿಗೆ ಹೋದಾಗ ಮಾತ್ರ, ಕಾರಣ ತಿಳಿಸುವ, ಅದಕ್ಕಾಗಿ ಹತ್ತಾರು ಬಾರಿ ಅಲೆದಾಡಿಸುವುದು ಕೂಲಿಕಾರರು, ಅಸಂಘಟಿತ ಕಾರ್ಮಿಕರನ್ನು ಪಡಿತರ ವಂಚಿತರನ್ನಾಗಿಸುವ ಪ್ರಯತ್ನಗಳಾಗಿವೆ. ಪಡಿತರ ಬಳಕೆದಾರರಲ್ಲಿ ಆಕ್ರೋಶ ಮೂಡಿಸಿವೆ.

**ರಾಜಕೀಯ ಬೆಳವಣಿಗೆಗಳು :**

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಆರಂಭದಲ್ಲಿ ಜನರಲ್ಲಿ ಮೂಡಿಸಿದ್ದ ಭರವಸೆ 2014 ಲೋಕಸಭಾ ಚುನಾವಣೆ ವೇಳೆಗೆ ಕರಗಿ, ಬಿಜೆಪಿ ಮೇಲುಗೈ ಪಡೆಯಲು ಸಹಕಾರಿಯಾಗಿದೆ. ಕೇಂದ್ರ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ವಿರುದ್ಧ ಪ್ರತಿಭಟನೆಯ ಚಕಾರ ಎತ್ತದ ಕಾಂಗ್ರೆಸ್ ತನ್ನ ಜನವಿರೋಧಿ ಕ್ರಮಗಳಿಂದಾಗಿ ತನ್ನ ಪ್ರಭಾವ ಕಳೆದುಕೊಳ್ಳುತ್ತಿದೆ. ಬಿಬಿಎಂಪಿ ಚುನಾವಣೆ ಕೇಂದ್ರೀಕರಿಸಿ ಬಿಜೆಪಿ ಆಕ್ರಮಣಕಾರಿಯಾಗಿ ರಾಜ್ಯ ಸರ್ಕಾರದ ವಿರುದ್ಧ ಸರಣಿ ಹೋರಾಟಗಳಲ್ಲಿ ತೊಡಗಿ ಜನರ ಗಮನವನ್ನು ತನ್ನೆಡೆಗೆ ಸೆಳೆಯಲು ನಿರತವಾಗಿದೆ.

**ಕೋಮುವಾದಿ ನೆಲೆ ಬಲಗೊಳಿಸುವ ಯತ್ನ :**

ಜಯ ಕರ್ನಾಟಕ ಸಂಘಟನೆಯ ಅಧ್ಯಕ್ಷರನ್ನು ಮತ್ತು ಬಿಡದಿ ನಿತ್ಯಾನಂದಸ್ವಾಮಿಯನ್ನು ಭೇಟಿ ಮಾಡಿರುವ ವಿಶ್ವ ಹಿಂದು ಪರಿಷತ್ ನಾಯಕರ ನಡೆ, ಮೌಢ್ಯ ಆಚರಣೆ ನಿಷೇಧ ಕರಡು ಮಸೂದೆ ವಿರುದ್ಧ ಸಂಘ ಪರಿವಾರದ ಚಟುವಟಿಕೆ, ತುಮಕೂರು ಸಿದ್ದಗಂಗಾ ಮಠದಲ್ಲಿ ನಡೆದ ವಿಶ್ವ ಹಿಂದು ಪರಿಷತ್ ನೇತೃತ್ವದ ಸಂತರ ಸಮಾವೇಶ. ಅದರಲ್ಲಿ ಆರ್‌ಎಸ್‌ಎಸ್ ಸರಸಂಘ ಸಂಚಾಲಕರ ಭಾಗವಹಿಸುವಿಕೆ, ಆದಿಚುಂಚನಗಿರಿ ಮುಂತಾದ ಮಠಗಳ ಯುವ ಸ್ವಾಮಿಗಳ ಪಾಲ್ಗೊಳ್ಳುವಿಕೆ, ಸಾಹಿತಿ ಯು.ಆರ್.ಅನಂತಮೂರ್ತಿ ಸಾವಿನ ವೇಳೆಯ ಸಂಭ್ರಮಾಚರಣೆಗಳು, ಸಂಘ ಪರಿವಾರದ ಮುಂದಿನ ಕೋಮು ಧೃವೀಕರಣ ಯತ್ನಗಳಿಗೆ ನೆಲೆ ಪಡೆಯುವ ಸಂಕೇತಗಳಂತಿವೆ. ಬಿಬಿಎಂಪಿ ಚುನಾವಣೆ ಸುತ್ತ ಇದನ್ನು ಮಹಾನಗರದಲ್ಲೂ ಹೆಚ್ಚಿಸುವ ಸಾಧ್ಯತೆಗಳಿವೆ. ಶಿಕ್ಷಣ ಸಂಸ್ಥೆಗಳು, ದೇವಸ್ಥಾನಗಳಲ್ಲಿ ಸಂಘಪರಿವಾರದ ಚಟುವಟಿಕೆಗಳು ಹೆಚ್ಚಿವೆ. ಶಾಖೆಗಳನ್ನು ಹೆಚ್ಚಿಸುವ ಪ್ರಯತ್ನ ನಡೆದಿದೆ.

**ಬಿಬಿಎಂಪಿಯಲ್ಲಿ ಬಿಜೆಪಿ ದುರಾಡಳಿತ**

ಬಿಬಿಎಂಪಿ 2010ರ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆದಿದ್ದ ಬಿಜೆಪಿ 5 ವರ್ಷಗಳಲ್ಲಿ ಜಾತಿ ಲೆಕ್ಕಾಚಾರ ಮಾಡಿ ಪ್ರಮುಖ ಜಾತಿಗಳಿಗೆ ಸೇರಿದ ಕಾರ್ಪೋರೇಟರ್‌ಗಳನ್ನು ಮೇಯರ್, ಉಪಮೇಯರ್‌ಗಳನ್ನಾಗಿ ಮಾಡಿದೆ. ನಾಗರಿಕ ಸೌಲಭ್ಯ ಒದಗಿಸುವಲ್ಲಿ ಸಂಪೂರ್ಣ ವಿಫಲವಾಗಿರುವ ಬಿಜೆಪಿ, ಮಹಾನಗರ ಪಾಲಿಕೆಯನ್ನು ಹಗರಣಗಳಲ್ಲಿ, ಮತ್ತು ಸಾಲದ ಬಲೆಯಲ್ಲಿ ಸಿಲುಕಿಸಿದೆ. ಒಳಚರಂಡಿ ವ್ಯವಸ್ಥೆ ಬಲಪಡಿಸದೆ ಮಳೆಯ ವೇಳೆ ಬೆಂಗಳೂರಿಗರಿಗೆ ಸಂಕಷ್ಟದ ಸರಮಾಲೆಯನ್ನು ತೊಡಿಸಿದೆ. ಮುಂಬರುವ ಚುನಾವಣೆ ವೇಳೆ ಮೇಯರ್, ಉಪಮೇಯರ್‌ಗೆ ನೇರ ಚುನಾವಣೆ ನಡೆಸುವ, ಬಿಬಿಎಂಪಿಯನ್ನು ವಿಭಜಿಸುವ/ತ್ರಿಭಜಿಸುವ ಪ್ರಸ್ತಾಪಗಳಿವೆ.

**ಸಮ್ಮೇಳನದಲ್ಲಿ ಕೈಗೊಂಡ ಪ್ರಮುಖ ನಿರ್ಣಯಗಳು**

ಬಗರ್ ಹುಕುಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವುದರ ವಿರುದ್ಧ, ಹೆಚ್ಚಿಸಿರುವ ನೀರಿನ ದರವನ್ನು ವಾಪಸ್ ಪಡೆಯಲು, ಡೀಸೆಲ್ ದರ ಇಳಿಕೆಯ ಹಿನ್ನೆಲೆಯಲ್ಲಿ ಬಸ್ ಮತ್ತು ರೈಲ್ವೆ ದರಗಳನ್ನು ಇಳಿಸಲು, ಮೆಟ್ರೋ ಯೋಜನೆಯ ತ್ವರಿತ ಕಾಮಗಾರಿಗೆ ಒತ್ತಾಯಿಸಲಾಗಿದೆ.

ನಗರದ ಸುತ್ತಮುತ್ತಲಿನ ಪಟ್ಟಣಗಳಾದ ದೊಡ್ಡಬಳ್ಳಾಪುರ, ಕೋಲಾರ, ಕನಕಪುರ, ಚನ್ನಪಟ್ಟಣ, ರಾಮನಗರ ಹಾಗೂ ತುಮಕೂರು ಪಟ್ಟಣಗಳಿಗೆ ಸಂಪರ್ಕ ಕಲ್ಪಿಸುವ ಗ್ರಾಮಾಂತರ ರೈಲುಗಳನ್ನು ಪ್ರಾರಂಭಿಸಬೇಕು. ಹಾಗು ರಸ್ತೆ, ಕಸವಿಲೇವಾರಿ ವೈಜ್ಞಾನಿಕವಾಗಿ ನಿರ್ವಹಣೆ ಮಾಡಬೇಕು ಎಂದು ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಯನ್ನು ಒತ್ತಾಯಿಸಲಾಗಿದೆ.

ಬೆಂಗಳೂರು ನಗರದಲ್ಲಿ ರೂ.15,000/– ಕನಿಷ್ಠ ವೇತನ ಜಾರಿಗಾಗಿ, ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ಕಾಯ್ದೆ ಜಾರಿಗಾಗಿ, ಸಾರ್ವತ್ರಿಕ ರೇಷನ್ ಪದ್ದತಿಗಾಗಿ, ಎಸ್.ಸಿ/ಎಸ್.ಟಿ. ವಿಶೇಷ ಘಟಕ ಯೋಜನೆ ಜಾರಿಗಾಗಿ, ಮನೆ ಬಾಡಿಗೆ ನಿಯಂತ್ರಣಕ್ಕಾಗಿ, ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಿ ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸಲು, ಮನೆ–ನಿವೇಶನ ಮತ್ತು ಹಕ್ಕು ಪತ್ರಕ್ಕಾಗಿ.

**ಸಮ್ಮೇಳನದ ಉದ್ಘಾಟನೆ**

ಸಮ್ಮೇಳನದ ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಎಸ್.ಪ್ರಸನ್ನಕುಮಾರ್ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ಹಾಗು ಕಾರ್ಮಿಕ ವಿರೋಧಿ ನೀತಿಗಳನ್ನು ಪ್ರಸ್ತಾಪಿಸಿ, ಅವುಗಳಿಂದ ಜನತೆಯ ಮೇಲಾಗುವ ಪರಿಣಾಮಗಳ ಬಗ್ಗೆ ಜನ ಎಚ್ಚರದಿಂದಿರಬೇಕು, ಸಿಪಿಐ(ಎಂ) ಅಂತಹ ಜನವಿರೋಧಿ ನೀತಿಗಳ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿರುತ್ತದೆ ಎಂದು ಹೇಳಿದರು. ವೇದಿಕೆಯಲ್ಲಿ ಸಿಪಿಐ(ಎಂ) ಹಿರಿಯ ಮುಖಂಡರಾದ ವಿಜೆಕೆ ನಾಯರ್, ಜಿ.ಎನ್. ನಾಗರಾಜ್ ಇದ್ದರು. ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು.

**ಹಿರಿಯರಿಗೆ ಹೃದಯಸ್ಪರ್ಶಿ ಗೌರವ ಸನ್ಮಾನ**

ಸಿಪಿಐ(ಎಂ) ಪಕ್ಷದಲ್ಲಿ ದೀರ್ಘ ಕಾಲ ಅವಿಶ್ರಾಂತವಾಗಿ ದುಡಿದ ಹಿರಿಯ ಚೇತನಗಳಿಗೆ ಸಮ್ಮೇಳನವು ಹೃದಯಸ್ಪರ್ಶಿ ಗೌರವ ಸನ್ಮಾನ ನೀಡಿತು. 80ರ ಹರೆಯದಲ್ಲೂ ಕ್ರಿಯಾಶೀಲರಾದ ಕಾಂ. ಕೋದಂಡರಾಮ, 70 ರ ದಶಕದಿಂದ ಮೊದಲ್ಗೊಂಡು ರೈತ ನಾಯಕರಾಗಿ, ರಾಜ್ಯದ ಮತ್ತು ಬೆಂಗಳೂರಿನ ಹಲವು ಸಮರಶೀಲ ಚಳವಳಿಗಳಿಗೆ ನಾಯಕತ್ವ ನೀಡಿ ಅನಾರೋಗ್ಯದಿಂದ ನಿಧನರಾಗಿದ್ದ ಪಿ.ಜಗನ್ನಾಥ್ ಅವರ ಪತ್ನಿ ಜ್ಯೋತಿ ಅವರಿಗೆ, ಆಟೋ ಡ್ರೈವರ್‌ಗಳನ್ನು ಸಂಘಟಿಸಲು ಶ್ರಮಿಸಿದ ಕಾಂ. ಹೆಚ್.ಜಿ. ಶ್ರೀನಿವಾಸಮೂರ್ತಿ, ಕಾರ್ಮಿಕ ಮುಖಂಡರೂ ಪಕ್ಷದ ಜಿಲ್ಲಾ ಸಮಿತಿ ಸದಸ್ಯರೂ ಆದ ರಾಜಣ್ಣ ಅವರನ್ನು (ಅನಾರೋಗ್ಯದ ಹಿನ್ನೆಲೆಯಲ್ಲಿ ಅವರ ಮನೆಯಲ್ಲಿ) ಗೌರವ ಸಲ್ಲಿಸಲಾಯಿತು. ●

JANASHAKTHI KANNADA VARA PATRIKE DEC 7, 2014 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-283




ಶರತ್‌ಚಂದ್ರ

# ದಂಗೆಗೆಡೆ ಮಾಡಿದ ಫರ್ಗ್ಯೂಸನ್ ತೀರ್ಪು










ಮಾಧ್ಯಮಗಳು ತೋರಿಸುವ ಅಮೆರಿಕದ ವರ್ಣರಂಜಿತ ಚಿತ್ರ ಕರಗಿ ಹೋಗಿ ಅದರ ನಿಜವಾದ ಕಪ್ಪು–ಬಿಳುಪು ಚಿತ್ರ ಪುನಃ ಜಗತ್ತಿಗೆ ಈ ವಾರ ಕಂಡು ಬಂತು. ಅಮೆರಿಕದ ಮಾಧ್ಯಮಗಳು ಎಷ್ಟು ಸರ್ಕಸ್ ಮಾಡಿದರೂ ಈ ಕಪ್ಪು–ಬಿಳುಪು ಚಿತ್ರವನ್ನು ಮರೆಮಾಚಲು ಸಾಧ್ಯವಾಗಲಿಲ್ಲ. ಅಮೆರಿಕದ ಮಿಸೂರಿ ಪ್ರಾಂತ್ಯದ ಫರ್ಗ್ಯೂಸನ್ ಪಟ್ಟಣದಲ್ಲಿ ಮತ್ತು ಅಮೆರಿಕದ ನೂರಾರು ನಗರಗಳಲ್ಲಿ ಕೆಲವೇ ತಿಂಗಳ ಹಿಂದೆ 18 ವರ್ಷದ ಮೈಕೆಲ್ ಬ್ರೌನ್ ಎಂಬ ಅಮಾಯಕ ಕರಿಯ ಯುವಕನನ್ನು ಬರಿಯ ಸಂಶಯದ ಮೇಲೆ ಬಿಳಿಯ ಪೋಲಿಸ್ ಅಧಿಕಾರಿ ಕೊಲೆ ಮಾಡಿದ್ದ. ಅದನ್ನು ಪ್ರತಿಭಟಿಸಿ ವ್ಯಾಪಕ ಪ್ರದರ್ಶನಗಳೂ ದಂಗೆಗಳೂ ನಡೆದಿದ್ದವು. ಆದರೂ ಅಮೆರಿಕದ ವ್ಯವಸ್ಥೆ ಅದರಿಂದ ಏನೂ ಪಾಠ ಕಲಿತಂತಿಲ್ಲ.

ಆಗ ಪೋಲಿಸ್ ಅಧಿಕಾರಿಯ ಈ ಕಾರ್ಯಾಚರಣೆ ಬಗ್ಗೆ ಕೇಸ್ ದಾಖಲೆ ಮಾಡಲಾಗಿತ್ತು. ಇದೀಗ ಆ ಕೇಸಿನ ತೀರ್ಪು ಬಂದಿದ್ದು, ಪೋಲಿಸ್ ಅಧಿಕಾರಿ ಕ–ರಿಯ ಯುವಕನಿಂದ ಅಪಾಯದ ಗುಮಾನಿ ಮೇಲೆ ಸ್ವಯಂ–ರಕ್ಷಣೆಗೆ ಕೊಲೆ ಮಾಡಿದ್ದನ್ನು ಒಪ್ಪಿಕೊಂಡಿದ್ದರೂ, ಕೋರ್ಟು ಆತ ನಿರ್ದೋಷಿ ಎಂದು ತೀರ್ಪು ಕೊಟ್ಟಿದ್ದು ಕರಿಯರನ್ನು ವಿಪರೀತವಾಗಿ ಕೆರಳಿಸಿತು. ಈ ತೀರ್ಪು ವಿರುದ್ಧ ಫರ್ಗ್ಯೂಸನ್ ಪಟ್ಟಣದಲ್ಲಿ ಭಾರೀ ಪ್ರತಿಭಟನೆ ಕೆಲವು ಕಡೆ ಪೋಲಿಸರ ದಮನದಿಂದ ದಂಗೆಗಳಿಗೆ ತಿರುಗಿತ್ತು. ಮೂರು ದಿನಗಳ ನಂತರವೂ ಫರ್ಗ್ಯೂಸನ್ ಪಟ್ಟಣದಲ್ಲಿ ಪ್ರದರ್ಶನಗಳೂ ದಂಗೆಗಳೂ ನಿಂತಿಲ್ಲ. ಮಾತ್ರವಲ್ಲ, ಅಮೆರಿಕದ ಹಲವು ನಗರಗಳಿಗೆ ಹಬ್ಬಿದೆ.

**150 ನಗರಗಳಲ್ಲಿ ಪ್ರದರ್ಶನ–ದಂಗೆ**

ಬೋಸ್ಟನ್, ನ್ಯೂಯಾರ್ಕ್, ಲಾಸ್ ಏಂಜೆಲಿಸ್, ಡ್ಯಾಲಸ್, ಅಟ್ಲಾಂಟಾ ಸೇರಿದಂತೆ ಅಮೆರಿಕದ ಸುಮಾರು 150 ದೊಡ್ಡ ನಗರ–ಪಟ್ಟಣಗಳಲ್ಲಿ ಭಾರೀ ಪ್ರದರ್ಶನಗಳೂ ದಂಗೆಗಳೂ ಸ್ವಯಂ–ಸ್ಫೂರ್ತವಾಗಿ ನಡೆದಿವೆ. ಅಮೆರಿಕದ ನ್ಯಾಶನಲ್ ಗಾರ್ಡ್ಸ್ ಎಂಬ ವಿಶೇಷ ಪಡೆಗಳನ್ನು ಎಲ್ಲಾ ನಗರಗಳಿಗೆ ಕಳಿಸಲಾಗಿದೆ. ಮಿಸೂರಿ ಪ್ರಾಂತ್ಯ ಒಂದರಲ್ಲೇ 2200 ನ್ಯಾಶನಲ್ ಗಾರ್ಡ್ಸ್ ಎಂಬ ವಿಶೇಷ ಪಡೆಗಳನ್ನು ಸನ್ನದ್ಧಗೊಳಿಸಲಾಗಿದೆ. 400ಕ್ಕೂ ಹೆಚ್ಚು ಜನರನ್ನು ಈ ಸಂಬಂಧದಲ್ಲಿ ಬಂಧಿಸಿದ್ದರೂ, ಭಾರೀ ಪ್ರದರ್ಶನಗಳೂ ದಂಗೆಗಳೂ ನಿಂತಿಲ್ಲ. ಹಲವು ಪ್ರಮುಖ ನಗರಗಳಲ್ಲಿ ಪ್ರಮುಖ ಹೆದ್ದಾರಿ, ಸೇತುವೆಗಳನ್ನು ಹಲವು ಗಂಟೆಗಳ ಕಾಲ ಬಂದ್ ಮಾಡಲಾಯಿತು. ನ್ಯೂಯಾರ್ಕಿನ ಮೂರು ಪ್ರಮುಖ ಸೇತುವೆಗಳನ್ನು ಬಂದ್ ಮಾಡಲಾಯಿತು. ಭಾರೀ ಪ್ರದರ್ಶನ ಚದುರಿಸಲು ಪೋಲೀಸರು ಪೆಪ್ಪರ್–ಸ್ಪ್ರೇ ಬಳಸಿದರು.

ಅಮೆರಿಕದ ಭೀಕರ ವರ್ಣಬೇಧದ ವ್ಯವಸ್ಥೆ ಗೊತ್ತಿಲ್ಲದವರಿಗೆ ಒಂದು ಪೋಲೀಸ್ ದುಷ್ಕೃತ್ಯದ ಪ್ರಕರಣ ದೇಶದಾದ್ಯಂತ (ಮೊದಲ ಮತ್ತು ಎರಡನೇ) ಫರ್ಗ್ಯೂಸನ್ ದಂಗೆಗೆ ಎಡೆ ಮಾಡಿಕೊಡುತ್ತದೆ ಎಂದು ಆಶ್ಚರ್ಯವಾಗಬಹುದು. ಇದಕ್ಕೆ ಕಾರಣ ಇತ್ತೀಚಿನ ವರ್ಷಗಳಲ್ಲಿ ಕ–ರಿಯ ಯುವಕರು ಪೋಲೀಸರಿಗೆ ಯಾವುದೇ ಕಾರಣವಿಲ್ಲದೆ ಅಥವಾ ಕ್ಷುಲ್ಲಕ ಕಾರಣಗಳಿಗೆ ಬಲಿಯಾಗುವ ಸಾಧ್ಯತೆ ಹೆಚ್ಚು. ಬಿಳಿಯ ಯುವಕರು ಇಂತಹ ಬಲಿಯಾಗುವ ಸಾ ಧ್ಯತೆಗಿಂತ 21 ಪಟ್ಟು ಹೆಚ್ಚು ಎಂದು ಅಮೆರಿಕದ ವರ್ಣಬೇಧದ ವ್ಯವಸ್ಥೆ ಬಗ್ಗೆ ನಡೆಸಿದ ಒಂದು ಅಧ್ಯಯನ ತಿಳಿಸಿದೆ. ಅದರಲ್ಲೂ ಫರ್ಗ್ಯೂಸನ್ ಪಟ್ಟಣ ಮತ್ತು ಅದು ಇರುವ ಸೈಂಟ್ ಲೂಯಿಸ್ ಜಿಲ್ಲೆ ಕುಖ್ಯಾತವಾದ್ದು. ಕರಿಯರು ಬಹುಸಂಖ್ಯಾತರು ಆಗಿರುವ ಫರ್ಗ್ಯೂಸನ್ ಪಟ್ಟಣದಲ್ಲಿ ಪೋಲಿಸ್ ಪಡೆಯಲ್ಲಾಗಲಿ, ಮುನಿಸಿಪಲ್ ಮಂಡಳಿಯಲ್ಲಾಗಲಿ, ನ್ಯಾಯಾಂಗದಲ್ಲಾಗಲಿ ಒಬ್ಬರೂ ಕರಿಯರಿಲ್ಲ. ಬೀದಿಗಳಲ್ಲಿ ಸುಮ್ಮನೆ ಟ್ರಾಫಿಕ್ ಕೇಸುಗಳನ್ನು ಹಾಕುವುದರಿಂದ ಹಿಡಿದು ಕೊಲೆಯವರೆಗೆ ಬಿಳಿಯ ಪೋಲೀಸರ ದುಷ್ಕೃತ್ಯ ಫರ್ಗ್ಯೂಸನ್ ಕರಿಯ ಯುವಕರ ದೈನಂದಿನ ಅನುಭವ.




**ಎರಡನೇ ದಂಗೆ ಯಾಕೆ?**

ಇವೆಲ್ಲಾ ಮೊದಲನೆಯ ದಂಗೆಗೆ ಕಾರಣವಾಗಿರಬಹುದು, ಆದರೆ ಎರಡನೇ ದಂಗೆ ಯಾಕೆ ಎಂಬ ಪ್ರಶ್ನೆ ಏಳಬಹುದು. ನಿಜ. ಮೊದಲನೆಯ ದಂಗೆಯ ನಂತರ ತಪ್ಪಿತಸ್ಥ ಬಿಳಿಯ ಪೋಲಿಸ್ ಅಧಿಕಾರಿಗೆ ಶಿಕ್ಷೆಯಾಗುತ್ತದೆ ಎಂದು ಫರ್ಗ್ಯೂಸನ್ ಮತ್ತು ಅಮೆರಿಕಾದ್ಯಂತ ಕರಿಯರು ನಂಬಿದ್ದರು. ಅಮೆರಿಕದ ವ್ಯವಸ್ಥೆ ಅಷ್ಟು ಕೆಟ್ಟಿಲ್ಲ ಎಂದು ನಂಬಿದ್ದರು. ಅವರೆಲ್ಲರ ನಂಬಿಕೆ ಹುಸಿಗೊಳಿಸಿ ಫರ್ಗ್ಯೂಸನ್ ಪಟ್ಟಣ ಮತ್ತು ಸೈಂಟ್ ಲೂಯಿಸ್ ಜಿಲ್ಲೆ ಆಡಳಿತ ತನ್ನ ವರ್ಣಬೇಧ ಧೋರಣೆಯನ್ನು ಬದಲಿಸಲಿಲ್ಲ. ಮಾತ್ರವಲ್ಲ, ಢಾಳಾಗಿ ಕೇಸಿನ ವಿಚಾರಣೆ ಮತ್ತು ತೀರ್ಪು ಎರಡರಲ್ಲೂ ಪ್ರದರ್ಶಿಸಿತು. ಕನಿಷ್ಟ ಮಿಸೂರಿ ಪ್ರಾಂತ್ಯ ಮತ್ತು ಫೆಡರಲ್ ಸರಕಾರ ಬಿಳಿಯ ಪೋಲಿಸ್ ಅಧಿಕಾರಿಗೆ ಶಿಕ್ಷೆಯಾಗುವಂತೆ ಮುತುವರ್ಜಿ ವಹಿಸುತ್ತದೆ ಎಂದು ಅವರು ನಂಬಿದ್ದರು. ಆದರೆ ಇದು ಆಗದೇ ಹೋದದ್ದು ಎರಡನೇ ದಂಗೆಗೆ ಕಾರಣವಾಗಿದೆ. ಇಂತಹ ವ್ಯಾಪಕ ಪ್ರತಿಭಟನೆಯ ನಂತರ ಅಧ್ಯಕ್ಷ ಒಬಾಮ ಬಿಳಿಯ ಪೋಲಿಸ್ ಅಧಿಕಾರಿಯ ಮೇಲೆ ಫೆಡರಲ್ ಕೇಸ್ ಹಾಕಲಾಗುವುದು ಎಂದು ಭರವಸೆ ಕೊಟ್ಟಿದ್ದಾ–ರೆ. ಆದರೆ ಕೆಳಗಿನಿಂದ ಮೇಲಿನವರೆಗೆ ಆಡಳಿತ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ತಾರದೆ ಕರಿಯ ಯುವಕರಿಗೆ ಯಾವುದೇ ರಕ್ಷಣೆ ಸಿಗದು.

**JANASHAKTHI KANNADA VARA PATRIKE:** Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**